ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮೇ 2022
ಬೆಲೆ ರೂ. 1

## ಅಮೃತ ಮಹೋತ್ಸವ ಉದ್ಘಾಟನೆ










ಕೋಲಾರ ಚಿಕ್ಕಬಳ್ಳಾಪುರ ಜಿಲ್ಲಾ ಸಾಂಸ್ಕೃತಿಕ ಉತ್ಸವದ ಸಮಾರೋಪ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿದ್ದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಹಾಗೂ ಮಾಜಿ ಸಚಿವರೂ ಆದ ಮಾನ್ಯ ಶ್ರೀ ಸಿ.ಟಿ. ರವಿ ಅವರಿಗೆ ಗೌರವ ಸನ್ಮಾನ










ಗುರುಗಾಂವ್ ಹೋಂಡಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು ಈಗ ಭಡ್ತಿ ಹೊಂದಿ ಕರ್ನಾಟಕದ ಘಟಕಕ್ಕೆ ವರ್ಗಾವಣೆಯಾಗಿ ತೆರಳುತ್ತಿರುವ ಸಂಘದ ಆಜೀವ ಸದಸ್ಯರಿಗೆ ಆತ್ಮೀಯ ಬೀಳ್ಕೊಡುಗೆ

# ಅಭಿಮತ

ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 32 । ಸಂಚಿಕೆ 8

ಮೇ 2022



**ಪ್ರಧಾನ ಸಂಪಾದಕ**

ಚಂದ್ರಶೇಖರ ಎನ್.ಪಿ.

**ಸಂಪಾದಕ ಮಂಡಳಿ ಸದಸ್ಯರು**

ಕೆ.ಎಸ್. ಮೂರ್ತಿ

ಅಮರೇಶ ದೊಡಮನಿ

ಯಲ್ಲಾಲಿಂಗ ಕೊಪ್ಪದ

**ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ**

**ಅಧ್ಯಕ್ಷರು**

ಸಿ.ಎಂ. ನಾಗರಾಜ

**ಉಪಾಧ್ಯಕ್ಷರು**

ಡಾ. ಎಂ.ಎಸ್. ಶಶಿ ಕುಮಾರ್

ಪೂಜಾ ಪಿ. ರಾವ್

**ಪ್ರಧಾನ ಕಾರ್ಯದರ್ಶಿ**

ಆರ್. ರೇಣುಕುಮಾರ್

**ಕೋಶಾಧಿಕಾರಿ**

ರಾಧಾಕೃಷ್ಣ

**ಜಂಟಿ ಕಾರ್ಯದರ್ಶಿಗಳು**

ಬಿ. ನಾರಾಯಣ

ಸುಮಿತಾ ಮುರಗೋಡ

**ಸಮಿತಿ ಸದಸ್ಯರು**

ಪ್ರಭಾಕರ ಮಡ್ಡಿತೋಟ್

ಶಿವಪ್ಪ ಎಂ

ಎ.ಟಿ. ಶ್ರೀನಿವಾಸ

ಮಾಲಿನಿ ಪ್ರಹ್ಲಾದ್

ಕೆ.ಎಸ್. ಮೂರ್ತಿ

ನವೀನ್ ಕುಮಾರ್ ವಿ.

ಸವಿತಾ ನೆಲ್ಲಿ

ಅಶ್ವಿನಿ ಬಿ.ಎಸ್.

ಸಂತೋಷ ಜೆ

ಚಂದ್ರಶೇಖರ ಎನ್.ಪಿ.

**ಕಾವಲು ಸಮಿತಿ**

ಅನಂತರಾಮ ಅರಳ

ಡಿ.ವಿ.ಎಸ್. ಮೂರ್ತಿ

ಈಶ್ವರ ಮಡಿವಾಳ




## ಸಂಪಾದಕೀಯ

# ಹೊರನಾಡ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ದೆಹಲಿ ಕರ್ನಾಟಕ ಸಂಘಕ್ಕೀಗ ಎಪ್ಪತ್ತೈದರ ಅಮೃತ ಮಹೋತ್ಸವ ಸಂಭ್ರಮ

ಸಮಸ್ತ ದೆಹಲಿ ಕರ್ನಾಟಕ ಸಂಘದ ಎಲ್ಲ ಸದಸ್ಯ ಬಂಧುಗಳಿಗೆ ಎಪ್ಪತ್ತೈದನೇ ಹರೆಯಕ್ಕೆ ಅಡಿಯಿರಿಸಿದ ನಮ್ಮ ಸಂಘದ ಅಮೃತ ಮಹೋತ್ಸವದ ಹಾಗೂ ಸಾಮಾಜಿಕ ಸುಧಾರಕ ಬಸವೇಶ್ವರ ಜಯಂತಿಯ ಹಾರ್ದಿಕ ಶುಭಾಶಯಗಳು.

ಹೊರನಾಡ ಕನ್ನಡಿಗರ ಸಾಂಸ್ಕೃತಿಕ ಸಂಘಟನೆಯ ಹೆಗ್ಗುರುತಾಗಿರುವ ನಮ್ಮ ಸಂಘ, ನಮ್ಮ ದೇಶ ಸ್ವತಂತ್ರಗೊಂಡ ಹೊಸ್ತಿಲಲ್ಲೇ ನಮ್ಮ ಶ್ರೀಮಂತ ಕನ್ನಡ ಭಾಷೆ, ಸಮೃದ್ಧ ಸಂಸ್ಕೃತಿಯನ್ನು ರಾಷ್ಟ್ರ ರಾಜಧಾನಿಯಲ್ಲಿ ಬಿಂಬಿಸಲು ಕನ್ನಡ ನಾಡಿನಿಂದ ಹೊರಗೆ ಸಾವಿರಾರು ಮೈಲುಗಳ ದೂರದಲ್ಲಿ ಬದುಕು ಕಟ್ಟಿಕೊಳ್ಳುತ್ತಿರುವ ಎಲ್ಲ ಕನ್ನಡದ ಮನಸ್ಸುಗಳೆಲ್ಲವನ್ನು ಒಂದೆಡೆ ತರಬಲ್ಲ ಸಾಂಸ್ಕೃತಿಕ ಸಂಘಟನೆಯೊಂದರ ಅಗತ್ಯವಿದೆ ಎಂದು ಮನಗಂಡು ದೆಹಲಿ ಕರ್ನಾಟಕ ಸಂಘಕ್ಕೆ ಅಸ್ತಿಭಾರ ಹಾಕಿದ ಆ ಎಲ್ಲ ಹಿರಿಯ ಕನ್ನಡ ಚೇತನಗಳಿಗೆ ಹೃದಯಾಂತರಾಳದಿಂದ ನಮನಗಳನ್ನು ಸಲ್ಲಿಸುತ್ತೇನೆ.

ಒಂದೂವರೆ ಸಾವಿರ ವರ್ಷಗಳಿಗೂ ಮಿಗಿಲಾದ ಇತಿಹಾಸವಿರುವ ನಮ್ಮ ಕನ್ನಡ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಗಳಿಗೆ ಭಾರತದಲ್ಲಿಯೇ ವಿಶಿಷ್ಟ ಸ್ಥಾನವಿದ್ದು, ಇತರೆ ಭಾಷೆ ಸಂಸ್ಕೃತಿಗಳಿಗಿಂತ ಅತ್ಯಂತ ಸೃಜನೆ ಶೀಲವಾದುವುಗಳಾಗಿವೆ. ಏಳನೇ ಶತಮಾನದ ಕಪ್ಪೆ ಅರಭಟ್ಟನ ಬಾದಾಮಿ ಶಾಸನದಲ್ಲಿ ವ್ಯಕ್ತವಾಗುವ 'ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ........' ಎಂಬ ಸಾಲುಗಳಲ್ಲಿ ಅಂದಿನ ಕನ್ನಡಿಗರ ಮಧುರವೂ ಹಾಗೂ ಶೌರ್ಯ ಪರಾಕ್ರಮಗಳಿಂದಲೂ ಕೂಡಿದ ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದಾನೆ. ಒಂಭತ್ತನೇ ಶತಮಾನದ ಶ್ರೀವಿಜಯ ಬರೆದ ಕನ್ನಡದ ಮೊದಲ ಉಪಲಬ್ಧ ಲಕ್ಷಣಗ್ರಂಥ 'ಕವಿರಾಜಮಾರ್ಗ'ದಲ್ಲಿ 'ಕಸವರಮೆಂಬುದು ನೆರೆ ಸೈರಿಸಲಾರ್ಪಡೆ ಪರವಿಚಾರಮುಮಂ, ಧರ್ಮಮುಮಂ'– ಎಂದು ಉಲ್ಲೇಖಿಸುತ್ತಾನೆ. ಕಸವರವೆಂದರೆ ಚಿನ್ನ. ಕನ್ನಡಿಗರಲ್ಲಿರುವ ಚಿನ್ನದಂತಹ ಗುಣ ಎಂದರೆ  ಅನ್ಯರ ವಿಚಾರಗಳನ್ನು, ಅನ್ಯಧರ್ಮವನ್ನು ತಾಳಿಕೊಳ್ಳುವುದು, ಗೌರವಿಸುವುದು. ಪ್ರಾಯಶಃ ಈ ಗುಣದಿಂದಾಗಿಯೇ ಕನ್ನಡ ಮನಸ್ಸುಗಳು ಎಲ್ಲ ಕಾಲಕ್ಕೂ ವೈಚಾರಿಕ ಪ್ರಬುದ್ಧತೆ ಮತ್ತು ಪ್ರಖರತೆಯಿಂದ ವಿಶಿಷ್ಟವಾಗಿ ನಿಲ್ಲಬಲ್ಲ ಶಕ್ತಿ ಪಡೆದಿವೆ.

ಇದು ಕನ್ನಡದ ಸೃಜನಶೀಲ ಪರಂಪರೆಗಿರುವ ಅಚಲ ಶಕ್ತಿ. ಈ ಶಕ್ತಿಯ ಮೇಲೆ ನಂಬಿಕೆ ಇಟ್ಟಿರುವ ಸೃಜನಶೀಲ ಮನಸ್ಸು ಎಂದಿಗೂ ಪ್ರಶಸ್ತಿಗೆ, ಅಧಿಕಾರಕ್ಕೆ ಅಧೀನವಾಗಿ ನಡೆದುಕೊಳ್ಳುವುದಿಲ್ಲ. ಇಂತಹ ಕನ್ನಡತನ ಪರಂಪರೆಯುದ್ದಕ್ಕೂ ಹಾಸುಹೊಕ್ಕಾಗಿ ಬಂದಿದೆ. ನಿದರ್ಶನಕ್ಕಾಗಿ ವ್ಯಾಸರ ಸಂಸ್ಕೃತ ಮಹಾಭಾರತವನ್ನು ಆಧರಿಸಿದರೂ ಅದಕ್ಕಿಂತ  ಭಿನ್ನನೆಲೆಯಲ್ಲಿ ಆ ಕತೆಯನ್ನು ಗ್ರಹಿಸಿದ ಆದಿಕವಿ ಪಂಪ ಕನ್ನಡದಲ್ಲಿ ವಿಕ್ರಮಾರ್ಜುನ ವಿಜಯ ಕೃತಿ ಬರೆದ. ಸಂಸ್ಕೃತವನ್ನು ಹೊರತುಪಡಿಸಿ ಇತರೆ ಭಾರತೀಯ ಭಾಷೆಗಳಲ್ಲಿ ಮಹಾಭಾರತದ ಕತೆ ರಚನೆಯಾದದ್ದು ಕನ್ನಡದಲ್ಲಿ. ಹನ್ನೊಂದು ಶತಮಾನಗಳಷ್ಟು ಹಿಂದೆಯೇ ಪ್ರಾಂತೀಯ ಭಾಷೆಯಾಗಿದ್ದ ಕನ್ನಡದಲ್ಲಿ ಭಾರತದ ಕತೆಯನ್ನು ಹೇಳುವ ಎದೆಗಾರಿಕೆ ತೋರಿದ ಪಂಪನ ಸೃಜನಶೀಲತೆ ಮತ್ತು ಕನ್ನಡದ ಬಗೆಗಿನ ಆದಿಕವಿಯ ಕಳಕಳಿ ನಿಜಕ್ಕೂ ಆದರ್ಶಪ್ರಾಯವಾದುದು ತನ್ನ ಆಶ್ರಯದಾತ ಅರಿಕೇಸರಿಯನ್ನು ಅರ್ಜುನನೊಡನೆ ಸಮೀಕರಿಸಿದರೂ ಕೂಡ ಪಂಪನ ಮನಸ್ಸನ್ನು ತೀವ್ರವಾಗಿ ಆಕರ್ಷಿಸಿದ್ದು ಕರ್ಣನ ಸತ್ಯ, ಶೌರ್ಯ, ತ್ಯಾಗಗಳಿಂದ ತುಂಬಿದ ವ್ಯಕ್ತಿತ್ವ. ಆದ್ದರಿಂದಲೇ 'ನೆನೆಯದಿರಣ್ಣ ಭಾರತದೊಳಿಂ ಪೆರಾರುಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ.......... ಕರ್ಣರಸಾಯನಮಲ್ತೆ ಭಾರತಂ' ಎಂದು ಹೇಳಿದ. ಹೀಗೆ ಅಚ್ಚ ಕನ್ನಡದ ಬೇಸಾಯಗಾರರು ಎನಿಸಿಕೊಂಡ ವಚನಕಾರರು, ಕರ್ನಾಟಕ ಸಂಗೀತ ಮತ್ತು ಸಾಹಿತ್ಯಗಳನ್ನು ಉನ್ನತಿಗೇರಿಸಿದ ಕೀರ್ತನಕಾರರು, ತತ್ವಪದಕಾರರು, ಸ್ವರ ವಚನಕಾರರು ಸೇರಿದಂತೆ ಆಧುನಿಕ ಕಾಲಘಟ್ಟದವರೆಗಿನ ಸಾವಿರಾರು ಕವಿಗಳು ಸಾಹಿತಿಗಳು ಕನ್ನಡ ಭಾಷೆಯನ್ನು ಶ್ರೀಮಂತ ಗೊಳಿಸಿರುವುದು ಮಾತ್ರವಲ್ಲ, ವಿಶ್ವಕ್ಕೆ ಮಾದರಿಯಾಗಬಲ್ಲ ಕಾಯಕ–ದಾಸೋಹ, ವಿಶ್ವ ಮಾನವ ತತ್ವಗಳೇ, ಮೊದಲಾದ ಅತ್ಯಮೂಲ್ಯ ಜೀವನ ಸಂದೇಶಗಳನ್ನು ನೀಡುತ್ತಾ ಬಂದಿದ್ದಾರೆ. ಈ ಸಮೃದ್ಧ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಗುರುತರವಾದ ಈ ಪರಂಪರೆಯನ್ನೇ ಮುಂದುವರೆಸಿ ಕನ್ನಡವನ್ನು ಕಟ್ಟುವ ಕನ್ನಡ ಸಮಾಜವನ್ನು ಕಟ್ಟುವ ಕೆಲಸವನ್ನು ನಿರಂತರವಾಗಿ ಮಾಡುವ ಹೊಣೆಗಾರಿಕೆ ಕನ್ನಡ ನಾಡಿನ ಒಳಗೆ ಮತ್ತು ಹೊರಗೆ ಬದುಕು ಕಟ್ಟಿಕೊಂಡಿರುವ ಎಲ್ಲ ಕನ್ನಡಿಗರದ್ದು ಕೂಡ. ಏಳೂವರೆ ದಶಕಗಳ ಹಿಂದೆ ನಮ್ಮ ಹೊರನಾಡ ಕನ್ನಡಿಗರು ಕೂಡ ದೆಹಲಿ ಕರ್ನಾಟಕ ಸಂಘವನ್ನು ಸ್ಥಾಪಿಸುವ ಮೂಲಕ ಮಾಡಿದ್ದೂ, ಮುಂದುವರೆಸಿದ್ದೂ ಇದುವರೆಗೆ ಬೆಳೆದು ಬಂದಿರುವ ಸಾಂಸ್ಕೃತಿಕ ವಾರಸುದಾರಿಕೆಯನ್ನೇ. ಮುಂದೆ ಬರುವವರು ಮಾಡಬೇಕಿರುವುದು ಕನ್ನಡದ ಸಮಗ್ರ ಪರಂಪರೆಯನ್ನು ಅರಿತು ಸಾಂಸ್ಕೃತಿಕವಾದ ಕರ್ನಾಟಕವನ್ನು ದೆಹಲಿ ಕರ್ನಾಟಕ ಸಂಘದ ಮೂಲಕ ದೇಶದಾದ್ಯಂತ ಪರಿಚಯಿಸುವ ಕೆಲಸ ಮಾಡಬೇಕಿದೆ.

ಏಪ್ರಿಲ್ ಒಂದರಂದು ವಿಶ್ವಕ್ಕೇ ದಾಸೋಹ ಪರಂಪರೆ ಸಾರಿದ ಬಸವಣ್ಣ ನವರ ದಾರಿಯಲ್ಲಿಯೇ ನಡೆದಾಡಿ ಆಧುನಿಕ ಬಸವಣ್ಣ ನೆನಿಸಿದ ಶ್ರೀ ಸಿದ್ಧಗಂಗಾ ಮಠದ ಲಿಂ. ಡಾ. ಶಿವಕುಮಾರ ಸ್ವಾಮೀಜಿ ಅವರ ಜನ್ಮದಿನೋತ್ಸವ ಆಚರಣೆ ನಾಡಿನೆಲ್ಲೆಡೆ ಆಚರಿಸಲ್ಪಟ್ಟಿದೆ. ಜಾತಿ–ಭೇದ ಕಾಣದೆ, ಧರ್ಮಗಳ ಹಂಗಿಲ್ಲದೆ ದಿನನಿತ್ಯವೂ ಹತ್ತು ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಮಕ್ಕಳಿಗೆ ಉಚಿತವಾಗಿ ಅನ್ನ, ಅಕ್ಷರ, ಆಶ್ರಯ ನೀಡಿದ ತ್ರಿವಿಧ ದಾಸೋಹಿ ಎಂದು ಹೆಸರಾದ ಪರಮಪೂಜ್ಯರು ಕನ್ನಡ ನಾಡಿನ ಪರಂಪರೆಯ ಸಮರ್ಥ ವಾರಸುದಾರರಾಗಿ ಕನ್ನಡ ಸಂಸ್ಕೃತಿಯನ್ನು ಮುಂದುವರಿಸಿದ್ದು ಶ್ಲಾಘನೀಯ ಮತ್ತು ಅನುಕರಣೀಯ.

ಏಪ್ರಿಲ್ ಹದಿನಾಲ್ಕರಂದು ಸಂವಿಧಾನ ಶಿಲ್ಪಿ ಭಾರತರತ್ನ ಡಾ. ಅಂಬೇಡ್ಕರ್ ಅವರ ಜನ್ಮದಿನ. ಇಪ್ಪತ್ತನೆ ಶತಮಾನ ಕಂಡ ಕ್ರಾಂತಿಯ ಹರಿಕಾರ ಅಂಬೇಡ್ಕರ್ ಅವರು ಶತ ಶತಮಾನಗಳಿಂದ ದಬ್ಬಾಳಿಕೆಗೆ ತುತ್ತಾಗಿ ಮೌನವಾಗಿ ತಮ್ಮ ನೋವನ್ನು ಅನುಭವಿಸುತ್ತಿದ್ದ ದಲಿತರ, ದಮನಿತರ ಧ್ವನಿಯಾಗಿ ನಿಂತು ಅವರ ಉದ್ಧಾರಕ್ಕೆ ನೀಡಿದ ಕೊಡುಗೆ ಅನನ್ಯ, ಅಸಾಧಾರಣ, ಅನುಕರಣೀಯ.

ಇನ್ನು ಕನ್ನಡ ವಿಶ್ವ ವಿದ್ಯಾಲಯದ 'ನಾಡೋಜ' ಗೌರವಕ್ಕೆ ಪಾತ್ರರಾದ ಕನ್ನಡ ಜನಪದ ಸಾಹಿತ್ಯ, ಸಂಶೋಧನೆ, ಚಿಂತನೆಗಳಲ್ಲಿ ಅಪೂರ್ವ ಸಾಧನೆ ಮಾಡಿದ ಶ್ರೀ ಗೊ.ರು. ಚನ್ನಬಸಪ್ಪ, ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿ ಮತ್ತು ಡಾ. ಭಾಷ್ಯಂ ಸ್ವಾಮಿ ಅವರುಗಳಿಗೆ ಅಭಿನಂದನೆಗಳು.

ನಮ್ಮ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಉದ್ಘಾಟನಾ ಸಮಾರಂಭದ ವರದಿ, ಕನ್ನಡದ ಮೊದಲ ಕವಯತ್ರಿ ಅಕ್ಕ ಮಹಾದೇವಿ ಜಯಂತಿ ಪ್ರಯುಕ್ತ ವಿಶೇಷ ಲೇಖನ, ಹಿರಿಯ ದೆಹಲಿ ಕನ್ನಡಿಗರಾದ ದಿವಂಗತ ಸುಧಾಕರ ಕುರಂದವಾಡ ಅವರ ಕುರಿತ ನುಡಿನಮನವನ್ನೂ ಒಳಗೊಂಡಂತೆ ದೆಹಲಿ ಮತ್ತು ಎನ್.ಸಿ.ಆರ್.ನಲ್ಲಿ ನಡೆದ ವಿವಿಧ ಕನ್ನಡ ಚಟುವಟಿಕೆಗಳ ವರದಿಗಳನ್ನು ಹೊತ್ತ ಈ ಸಂಚಿಕೆಯನ್ನು ತಮ್ಮ ಕೈಗಿಡುತ್ತಿದ್ದೇವೆ.

ಧನ್ಯವಾದಗಳು.

*ಚಂದ್ರಶೇಖರ ಎನ್.ಪಿ.*
*ಪ್ರಧಾನ ಸಂಪಾದಕರು*

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 32 ಸಂಚಿಕೆ–8
ಮೇ–2022, ಬೆಲೆ ರೂ. 1

# ಅಧ್ಯಕ್ಷರ ನುಡಿ

ಆತ್ಮೀಯ ಬಂಧುಗಳೇ,

ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವದ ಉದ್ಘಾಟನಾ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ಮೊದಲಿಗೆ ಜೀವಕೊಟ್ಟ ನರಹರಿರಾವ್, ಕೆ.ಸಿ. ರೆಡ್ಡಿ, ಎಸ್.ವಿ. ಕೃಷ್ಣಮೂರ್ತಿ ರಾವ್, ಡಾ. ಸರೋಜಿನಿ ಮಹಿಷಿ ಜಿ.ವೈ. ಕೃಷ್ಣನ್, ಕೆ.ಆರ್. ನಾಗರಾಜ, ಡಾ. ಪುರುಷೋತ್ತಮ ಬಿಳಿಮಲೆ ಅವರೂ ಸೇರಿದಂತೆ ಸಾವಿರದ ಒಂಬೈನೂರ ನಲವತ್ತ ಎಂಟರಿಂದ ಈವರೆಗೆ ಬಂದ ಒಟ್ಟು ಹದಿನೇಳು ಸಂಘದ ಅಧ್ಯಕ್ಷರುಗಳನ್ನು ಸ್ಮರಿಸುತ್ತಾ, ಸಂಘಕ್ಕೆ ದುಡಿದ ಆ ಮಹಾನ್ ವ್ಯಕ್ತಿಗಳ ಸೇವೆಯನ್ನು ಮೆಲುಕು ಹಾಕುತ್ತಾ, ಸಂಘವನ್ನು ಕಟ್ಟಲು, ಉಳಿಸಿ ಬೆಳೆಸಲು ರಾತ್ರಿ ಹಗಲೆನ್ನದೆ ದುಡಿದಂಥ ಮಹಾನ್ ಚೇತನಗಳಿಗೆ ವಂದಿಸುತ್ತಾ ಸಂಘದ ಎಪ್ಪತ್ತೈದನೇ ವರ್ಷದ ಅಮೃತ ಮಹೋತ್ಸವದ ಉದ್ಘಾಟನೆ ಮಾಡಲಾಯಿತು. ಕೊರೊನಾ ಮಾರಕ ರೋಗದ ಭಯದಿಂದ ಕೆಲವು ಅಧ್ಯಕ್ಷರುಗಳನ್ನು ಅಭಿನಂದಿಸಬೇಕಾದ ಕಾರ್ಯಕ್ರಮವನ್ನು ಮುಂದೂಡಲಾಯಿತು. ಮುಂಬರುವ ಸಮಾರೋಪ ಕಾರ್ಯಕ್ರಮದಲ್ಲಿ ಸಂಘಕ್ಕೆ ದುಡಿದಂತಹ ಅಧ್ಯಕ್ಷರು ಮತ್ತು ಹಿರಿಯ ಮುತ್ಸದ್ದಿಗಳನ್ನು ಅಭಿನಂದಿಸುವ ಕಾರ್ಯಕ್ರಮ ಮಾಡಲಾಗುತ್ತದೆ.

ಬಂಧುಗಳೇ, ದೆಹಲಿ ಕರ್ನಾಟಕ ಸಂಘ ಕನ್ನಡ ಭಾಷೆ, ಸಂಸ್ಕೃತಿ, ಸಾಹಿತ್ಯ, ಕಲೆ, ನೆಲ, ಜಲದ ಬಗ್ಗೆ ಕಾರ್ಯಕ್ರಮಗಳನ್ನು ನೀಡುತ್ತಾ ಬರುತ್ತಿರುವುದು ನಮಗೆಲ್ಲ ಗೊತ್ತಿರುವ ವಿಷಯ. ವಿಶ್ವದಲ್ಲೇ ಅತಿ ಹೆಚ್ಚು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುತ್ತಾ ಕರ್ನಾಟಕದ ಸಾಂಸ್ಕೃತಿಕ ರಾಯಭಾರಿಯಾಗಿ ಗುರ್ತಿಸಿಕೊಂಡಿರುವ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಉದ್ಘಾಟನೆಯನ್ನು ಕಳೆದ ಏಪ್ರಿಲ್ 23 ಮತ್ತು 24 ರಂದು ಮಾಡಲಾಯಿತು. ಉದ್ಘಾಟನೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀ ಟಿ.ಎಸ್. ನಾಗಾಭರಣ, ಮಾನ್ಯ ಮಾಜಿ ಸಚಿವರೂ, ಮುಳಬಾಗಲು ಶಾಸಕರಾದ ಶ್ರೀ ನಾಗೇಶ್‌ರವರು ಮಾಡಿಕೊಟ್ಟಿರುತ್ತಾರೆ. ಉದ್ಘಾಟನೆಗೂ ಮೊದಲು ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು ಬಂದು ಆಶೀರ್ವದಿಸಿದ್ದರು. ಈ ಸಂದರ್ಭದಲ್ಲಿ ಅನೇಕ ಗಣ್ಯಾತಿಗಣ್ಯರು ವಿಶೇಷವಾಗಿ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಗೌಡ, ಆದಿಚುಂಚನಗಿರಿ ದೆಹಲಿ ಶಾಖಾ ಮಠದ ಶ್ರೀ ಆನಂದ ಚೈತನ್ಯ ಸ್ವಾಮೀಜಿಗಳು, ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಗೋಪಾಲ ಗೌಡರೂ ಸೇರಿದಂತೆ ಅನೇಕ ಗಣ್ಯರ ಸಮ್ಮುಖದಲ್ಲಿ ಕಾರ್ಯಕ್ರಮ ಉದ್ಘಾಟನೆಯಾಯಿತು. ಇದೇ ಸಂದರ್ಭದಲ್ಲಿ ದೆಹಲಿ ಕರ್ನಾಟಕ ಸಂಘ ಎಲ್ಲ ಜಿಲ್ಲೆಯ ಕಲಾವಿದರಿಗೆ ಆದ್ಯತೆ ನೀಡಬೇಕು ಎಂಬ ಉದ್ದೇಶದಿಂದ ಬರುವ ದಿನಗಳಲ್ಲಿ ಎಲ್ಲ ಜಿಲ್ಲೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ದೆಹಲಿ ಕರ್ನಾಟಕ ಸಂಘದಲ್ಲಿ ನಡೆಯಬೇಕು ಎಂಬ ನಿಟ್ಟಿನಲ್ಲಿ, ಮೊದಲಿಗೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಸಾಂಸ್ಕೃತಿಕ ಕಲಾ ಉತ್ಸವವನ್ನು ಉದ್ಘಾಟನೆ ಮಾಡಲಾಯಿತು. ಕೋಲಾರ ಚಿಕ್ಕಬಳ್ಳಾಪುರದಿಂದ ಸುಮಾರು ಎಂಬತ್ತು ಕಲಾವಿದರು ಬಂದು 2 ದಿನಗಳ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡಿದ್ದಾರೆ. ಈ ಕಾರ್ಯಕ್ರಮದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗಿಯಾದ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು ಮಾಜಿ ಸಚಿವರಾದ ಮಾನ್ಯ ಶ್ರೀ ಸಿ.ಟಿ. ರವಿಯವರು ಮೆರಗು ತಂದರು. ಜೊತೆಗೆ, ದೆಹಲಿ ಕರ್ನಾಟಕ ಸಂಘದ ಪ್ರಗತಿಗೆ ಜೊತೆಯಲ್ಲಿ ನಿಲ್ಲುವುದಾಗಿ ನಮಗೆ ಭರವಸೆ ನೀಡಿದ್ದಾರೆ. ದೆಹಲಿ ಕರ್ನಾಟಕ ಸಂಘ ಸಂಘದ ವಸತಿ ನಿಲಯಕ್ಕೆ ಸುಮಾರು ಇಪ್ಪತ್ತೈದು ಕೋಟಿ ಕರ್ನಾಟಕ ಸರ್ಕಾರದಿಂದ ಅನುದಾನ ಕೇಳಿದ್ದೆವು. ಅದನ್ನ ಕೊಡಿಸಿಕೊಡಲು ಒಪ್ಪಿಗೆ ನೀಡಿದ್ದಾರೆ ಇದು ತುಂಬಾ ಸಂತಸದ ವಿಷಯ. ಜೊತೆಗೆ ಈ ಎಲ್ಲಾ ಜಿಲ್ಲಾ ಉತ್ಸವಗಳಿಗೆ ಅವಕಾಶ ನೀಡಿದ ನಂತರ ಕೊನೆಯ ಕಾರ್ಯಕ್ರಮವನ್ನು ದೆಹಲಿಯ ತಾಲ್ಕತೋರ ಮೈದಾನದಲ್ಲಿ ಸಮಾರೋಪ ಕಾರ್ಯಕ್ರಮ ಮಾಡಲು ಸಹಾಯ ಮಾಡಲು ಶ್ರೀ ಸಿ.ಟಿ. ರವಿಯವರು ಒಪ್ಪಿರುವುದಲ್ಲದೆ, ಮಾನ್ಯ ಪ್ರಧಾನ ಮಂತ್ರಿಗಳನ್ನು ಕರೆತಂದು ಈ ಕಾರ್ಯಕ್ರಮ ಯಶಸ್ವಿಯಾಗಲು ಸಹಕರಿಸುವುದಾಗಿ ತಿಳಿಸಿದ್ದಾರೆ.

ಬಂಧುಗಳೇ, ಕಾರ್ಯಕ್ರಮ ಆಯೋಜನೆ ಮಾಡುವುದು ಅಷ್ಟೊಂದು ಸುಲಭದ ಕೆಲಸವಲ್ಲ ಅದರಲ್ಲೂ ಎಂಬತ್ತು ಜನ ಕಲಾವಿದರು ಬಂದು ವಿವಿಧ ರೀತಿಯ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುತ್ತಾ 2 ದಿನಗಳ ಕಾರ್ಯಕ್ರಮಗಳನ್ನು ಯಶಸ್ವಿ ಮಾಡಲು ಸಹಾಯಕರಾಗಿ ನಿಂತಂಥ ಮಾಲೂರು ವಿಜಿ ತಂಡ, ವಿದ್ವಾನ್ ಕೋಲಾರ ರಮೇಶ್ ತಂಡ, ಕೋಲಾರ ರಾಜಪ್ಪ ಹಾಗೂ ಮಾಲೂರು ನಟರಾಜ್ ಮತ್ತು ತಂಡದವರಿಗೆ ಸಮಸ್ತ ಕನ್ನಡಿಗರ ಪರವಾಗಿ ಹಾಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ನಾನು ಧನ್ಯವಾದಗಳನ್ನು ಸಲ್ಲಿಸುತ್ತೇನೆ. ವಿಶೇಷವಾಗಿ ಕಾರ್ಯಕ್ರಮ ಯಶಸ್ವಿಯಾಗಲು ಕಲಾವಿದರ ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಊಟದ ವ್ಯವಸ್ಥೆಯೂ ಬೇಕಾಗುತ್ತದೆ. ಇದು ತಮಗೆಲ್ಲ ತಿಳಿದಿರುವ ವಿಷಯ. 2 ದಿನಗಳ ಊಟದ ವ್ಯವಸ್ಥೆಯನ್ನು ವಿಶೇಷ ಭೋಜನವನ್ನು ಸವಿಯಲು ಕರ್ನಾಟಕದಿಂದ ಅಡುಗೆ ಭಟ್ಟರನ್ನು ಕರೆಸಿ ಅವರಿಗೆ ಎಲ್ಲಾ ರೀತಿಯ ಸಹಕಾರ ನೀಡುವ ಜವಾಬ್ದಾರಿಯನ್ನು ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಶಿವಪ್ಪನವರಿಗೆ ವಹಿಸಿದ್ದೆವು. ಆ ಜವಾಬ್ದಾರಿಯನ್ನು ಸಮರ್ಥವಾಗಿ ನೆರವೇರಿಸಿ ಕಲಾವಿದರಿಗೆ 5 ದಿನಗಳ ಊಟದ ವ್ಯವಸ್ಥೆ ದೆಹಲಿ ಕನ್ನಡಿಗರಿಗೆ 2 ದಿನಗಳ ಊಟದ ವ್ಯವಸ್ಥೆಯನ್ನು ಯಶಸ್ವಿಯಾಗಿ ನಿರ್ವಹಿಸಿದ ಶ್ರೀ ಶಿವಪ್ಪನವರಿಗೆ ಅನಂತಾನಂತ ಧನ್ಯವಾದಗಳನ್ನು ತಿಳಿಸಲು ಬಯಸುತ್ತೇನೆ.

ಆತ್ಮೀಯರೇ, ಮುಂಬರುವ ತಿಂಗಳುಗಳಲ್ಲಿ ಕಲ್ಯಾಣ ಕರ್ನಾಟಕ ಕಲಾ ಉತ್ಸವ. ಕರಾವಳಿ ಉತ್ಸವ. ಕಾರ್ಯಕ್ರಮಗಳು ನಡೆಯಲಿದೆ. ಕಲ್ಯಾಣ ಕರ್ನಾಟಕದಿಂದ ಅನೇಕ ಕಲಾವಿದರು, ಗಣ್ಯ ವ್ಯಕ್ತಿಗಳು ದೆಹಲಿ ಕರ್ನಾಟಕ ಸಂಘಕ್ಕೆ ಬರಲಿದ್ದಾರೆ. ಈ ಕಾರ್ಯಕ್ರಮಗಳು ಯಶಸ್ವಿಯಾಗಲು ತಾವು ಬಂದು ಕಾರ್ಯಕ್ರಮದಲ್ಲಿ ಭಾಗಿಯಾಗುವುದು ಬಹುಮುಖ್ಯ. ದೂರದ ನಾಡಿನಿಂದ ಬರುವಂತಹ ಕಲಾವಿದರ ಕಾರ್ಯಕ್ರಮಗಳನ್ನು ವೀಕ್ಷಿಸಲು, ಬಗೆಬಗೆ ರೀತಿಯ ನಮ್ಮ ಶೈಲಿಯ ತಿಂಡಿ ತಿನಿಸುಗಳನ್ನು ಸವಿಯಲು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕ್ರಮದಲ್ಲಿ ಭಾಗಿಯಾಗಿ ಎಂದು ವಿನಂತಿಸುತ್ತೇನೆ. ಇದೇ ಸಂದರ್ಭದಲ್ಲಿ ಅಮೃತ ಮಹೋತ್ಸವದ ಘಳಿಗೆಯಲ್ಲಿ ದೆಹಲಿಯ ಅನೇಕ ಸಂಘ ಸಂಸ್ಥೆಗಳಿಗೆ ಸಹಕಾರ ನೀಡಿ ಕಾರ್ಯಕ್ರಮವನ್ನು ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ಆಯೋಜನೆ ಮಾಡುವ ಅವಕಾಶ ಎಲ್ಲಾ ಸಂಘ ಸಂಸ್ಥೆಗಳಿಗೆ ನೀಡುತ್ತಿದ್ದೇವೆ. ದೆಹಲಿಯ ಸಣ್ಣಪುಟ್ಟ ಕನ್ನಡಪರ ಸಂಘಟನೆಗಳಿಗೆ ಅವಕಾಶ ನೀಡಿ ಕನ್ನಡಿಗರು ಅತಿ ಹೆಚ್ಚು ಸಂಘದ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಬೇಕು ಎಂಬುದು ನಮ್ಮ ಭಾವನೆ. ಮೊದಲಿಗೆ ಮೇ ಒಂದರಂದು ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ ಸಂಯುಕ್ತ ಆಶ್ರಯದಲ್ಲಿ 'ಯುಗಾದಿ ಮಿಲನ ಸಂಭ್ರಮ' ಕಾರ್ಯಕ್ರಮವನ್ನು ಆಯೋಜನೆ ಮಾಡಿ, ಸ್ಥಳೀಯ ಕಲಾವಿದರಿಗೆ ಅವಕಾಶ ನೀಡಿ ಅವರ ಪ್ರತಿಭೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವ ಅವಕಾಶ ಕಲ್ಪಿಸಿ ಕೊಟ್ಟಿದ್ದೆವು. ದೆಹಲಿ ಪೊಲೀಸ್ ಕಲ್ಯಾಣ ಸಮಿತಿಯ ವತಿಯಿಂದ ನೂರ ಅರವತ್ತು ಕುಟುಂಬಗಳು ಭಾಗಿಯಾಗಿ ಕಾರ್ಯಕ್ರಮ ಯಶಸ್ವಿಯಾಗಿ ಜರುಗಿದೆ. ಈ ಪೊಲೀಸ್ ಕಲ್ಯಾಣ ಸಮಿತಿಯ ಪದಾಧಿಕಾರಿಗಳಿಗೆ, ದುಡಿದಂಥ ಎಲ್ಲ ಸದಸ್ಯರಿಗೆ ಮತ್ತು ವಿಶೇಷವಾಗಿ ಡಿಸಿಪಿ ಶ್ರೀ ಹರೀಶ್‌ರವರಿಗೆ, ಡಿಸಿಪಿ ಶ್ರೀ ಬಿ.ಎಲ್. ಸುರೇಶ್‌ರವರಿಗೆ ಹಾಗು ಎಸಿಪಿ ಶ್ರೀ ವೆಂಕಟೇಶ್‌ರವರಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ಬಂಧುಗಳೇ, ಬರುವ ಮೇ 8 ರಂದು ವಿಶ್ವಮಾನವ ಬಸವಣ್ಣ ಹಾಗು ಅಕ್ಕ ಮಹಾದೇವಿಯ ಜಯಂತಿಯನ್ನು ಸ್ಥಳೀಯ ಸಂಘಗಳಾದ ಬಸವ ಇಂಟರ್‌ನ್ಯಾಷನಲ್ ಸೆಂಟರ್, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತು ದೆಹಲಿ ಘಟಕ ಮತ್ತು ಅಖಿಲ ಭಾರತ ವೀರಶೈವ ಮಹಾಸಭಾ, ದೆಹಲಿ ಘಟಕ ಇವರ ಸಹಕಾರದೊಂದಿಗೆ ಕಾರ್ಯಕ್ರಮ ಆಯೋಜನೆ ಮಾಡುತ್ತಿದ್ದೇವೆ.

ದೆಹಲಿ ಕರ್ನಾಟಕ ಸಂಘ ಮತ್ತು ಕನ್ನಡ ಶಾಲೆ ದೆಹಲಿಯಲ್ಲಿ ಕನ್ನಡಿಗರ ಎರಡು ಕಣ್ಣುಗಳು ಇದ್ದಂತೆ. ಈಗ ಬರುವ ಜುಲೈ ಅಥವಾ ಆಗಸ್ಟ್ ಮೊದಲನೇ ವಾರದಲ್ಲಿ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಚುನಾವಣೆ ಜರುಗಲಿದೆ. ಈಗಾಗಲೇ ನಮ್ಮ ಉಪಾಧ್ಯಕ್ಷರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಯಾಗಿ ಉತ್ತಮ ಕೆಲಸ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಎಲ್ಲರಿಗೂ ಸಮಾನ ನ್ಯಾಯ ಒದಗಿಸಿ ಒಟ್ಟಿಗೆ ಕರೆದುಕೊಂಡು ಹೋಗುವ ಒಂದು ಉತ್ತಮ ಹೊಸ ಸಮಿತಿಯನ್ನು ಆಯ್ಕೆ ಮಾಡಬೇಕಾಗಿದೆ. ಎಲ್ಲರೂ ಬಂದು ಶಾಲೆಯ ಚುನಾವಣೆಯಲ್ಲಿ ಭಾಗಿಯಾಗಿ ಒಳ್ಳೆಯ ಸಮಿತಿಯನ್ನು ಆಯ್ಕೆ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತಿದ್ದೇನೆ. ಬರುವ ಮೇ, ಜೂನ್ ತಿಂಗಳ ದಿನಗಳಲ್ಲಿ ತುಂಬಾ ತಾಪಮಾನ ಜಾಸ್ತಿ ಆಗುವ ಕಾರಣ ಸ್ವಲ್ಪ ಮಟ್ಟಿಗೆ ಕಾರ್ಯಕ್ರಮಗಳು ಕಡಿಮೆಯಾಗುತ್ತವೆ. ಜುಲೈನಿಂದ ಯಥಾಸ್ಥಿತಿಯಾಗಿ ಕಾರ್ಯಕ್ರಮಗಳು ಜರುಗಲಿವೆ. ಅಮೃತ ಮಹೋತ್ಸವದ ಮುಂದಿನ ಕಾರ್ಯಕ್ರಮಗಳಲ್ಲಿ ನೀವೆಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳಿ ಎಂದು ವಿನಂತಿಸುತ್ತೇನೆ.

ವಂದನೆಗಳು.

***ಸಿ.ಎಂ. ನಾಗರಾಜ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯರೇ,

ಅಧ್ಯಕ್ಷರ ಮನದಾಳದ ಮಾತು ಹಾಗೂ ಸಂಪಾದಕರ ವಿಸ್ತೃತ ವರದಿ ಸಂಘದ ಎಲ್ಲಾ ಕಾರ್ಯಕ್ರಮಗಳ ಸಮಗ್ರ ಚಿಂತನೆಯಾಗಿ, ಈ ಅಂಕಣಕ್ಕೆ ಅಕ್ಷರದ ಅಂಶಗಳ ಕೊರತೆಯಾಗಿದೆ. ಅದಾಗ್ಯೂ ಅಭಿಮತದ ಅಭಿಮಾನಿಗಳಿಗೆ ಒಂದೆರಡು ಸಾಲುಗಳ ಈ ಅಂಕಣ.

ನಮ್ಮ ನಿಮ್ಮಗಳ ನೆಲೆ ದೆಹಲಿ, ಕಳೆದ ತಿಂಗಳಿನಿಂದ ಬೆಂಬಿಸಿಲಿನ ನಾಡಾಗಿ ಜನಮಾನಸವನ್ನು ತೀವ್ರ ಸಂಕಷ್ಟಕ್ಕೆ ಸಿಲುಕಿಸಿದೆ. ವರ್ಷದ ಈ ಅವಧಿಯಲ್ಲಿ ಇಷ್ಟು ತಾಪಮಾನ ನೂರು ವರ್ಷಗಳಲ್ಲೇ ಅಧಿಕ. ಇಂತಹ ಕಷ್ಟಕರ ಪರಿಸ್ಥಿತಿಯಲ್ಲಿ ನಮ್ಮ ಸದಸ್ಯರಿಗೆ ಮನರಂಜನಾ ಕಾರ್ಯಕ್ರಮವನ್ನು ಆಯೋಜಿಸುವ ನಮ್ಮ ಬದ್ಧತೆಯಲ್ಲಿ ಯಾವುದೇ ಕೊರತೆ ಇಲ್ಲದೇ, ಕಾರ್ಯಕ್ರಮಗಳು ಸಾಗಿವೆ.

ಮುಂದೆಯೂ ನಮ್ಮ ಈ ಯಾತ್ರೆ ಸಾಗಲಿದೆ. ಬೇಸಿಗೆ–ರಜೆಯಲ್ಲಿ ನಿಮ್ಮ ಊರಿಗೆ ಭೇಟಿ ನೀಡಿ, ಮಕ್ಕಳಿಗೆ ನಿಮ್ಮ ಬೇರುಗಳ ಪರಿಚಯದ ಅಗತ್ಯವಿದೆ. ಅಮೃತ ಮಹೋತ್ಸವದ ನಮ್ಮ ಕಾರ್ಯಗಳಲ್ಲಿ ತೊಡಗಿಸಿಕೊಳ್ಳಲು ಸಿದ್ಧರಾಗಿ ಬನ್ನಿ.

ನಮ್ಮ ಸಂಘದ ಚಟುವಟಿಕೆಗಳಲ್ಲಿ ನಿಮ್ಮಗಳ ಭಾಗವಹಿಸುವಿಕೆ ಹಾಗೂ ಹಾರೈಕೆ ನಮಗೆ ಸ್ಫೂರ್ತಿ ಹಾಗೂ ಶ್ರೀರಕ್ಷೆ.

ನಿಮ್ಮ ಬೇಸಿಗೆ ರಜೆ–ಮಜವಾಗಿರಲಿ, ಸಂತೋಷಕರವಾಗಿರಲಿ ಎಂಬ ಶುಭ ಹಾರೈಕೆಯೊಂದಿಗೆ

***ಆರ್. ರೇಣುಕುಮಾರ್***
*ಪ್ರಧಾನ ಕಾರ್ಯದರ್ಶಿ*

# ಸಾಹಿತಿ ಶ್ರೀ ಗೊ.ರು. ಚನ್ನಬಸಪ್ಪ, ಡಾ. ಭಾಷ್ಯಂ ಸ್ವಾಮಿ ಹಾಗೂ ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿ ಅವರುಗಳಿಗೆ ಸಂದ 'ನಾಡೋಜ' ಗೌರವ



ಹಂಪಿ ಕನ್ನಡ ವಿಶ್ವ ವಿದ್ಯಾಲಯ ಪ್ರತಿ ವರ್ಷ ಕೊಡಮಾಡುವ 'ನಾಡೋಜ' ಗೌರವ ಪದವಿಗೆ ಭಾಜನರಾದ ಜಾನಪದ ಸಾಹಿತಿ ಗೊ. ರು. ಚನ್ನಬಸಪ್ಪ, ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿ ಹಾಗೂ ಭಾಷ್ಯಂ ಸ್ವಾಮಿ ಅವರುಗಳಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಗಳು.

ಭಾರತೀಯ ಜಾನಪದ ತಜ್ಞ, ಆಡಳಿತಗಾರ ಹಾಗೂ ಲೇಖಕರಾದ ಶ್ರೀ ಗೊ.ರು. ಚನ್ನಬಸಪ್ಪ ಅವರು ಮೇ 18, 1930ರಲ್ಲಿ ಚಿಕ್ಕಮಗಳೂರು ಜಿಲ್ಲಾ ತರೀಕೆರೆ ತಾಲೂಕಿನ ಒಂದು ಚಿಕ್ಕ ಹಳ್ಳಿ–ಗೊಂಡೇದಹಳ್ಳಿಯಲ್ಲಿ ಜನಿಸಿದರು. ಗ್ರಾಮೀಣ ಪರಿಸರದಲ್ಲೇ ಬೆಳೆದ ಗೋ.ರು. ಚನ್ನಬಸಪ್ಪನವರು ಮಾಧ್ಯಮಿಕ ಮತ್ತು ಪ್ರೌಢಶಾಲೆ ವಿದ್ಯಾರ್ಥಿಯಾಗಿದ್ದಾಗ ಸ್ವಾತಂತ್ರ್ಯ ಚಳವಳಿಯಲ್ಲಿ ಪಾಲುಗೊಂಡರು. ಆ ಸಂದರ್ಭದಲ್ಲಿ ಸಿದ್ಧವನಹಳ್ಳಿ ನಿಜಲಿಂಗಪ್ಪನವರು, ಗುದ್ಲೆಪ್ಪ ಹಳ್ಳಿಕೇರಿ, ಮೊದಲಾದ ನಾಡ ಅಭಿಮಾನಿಗಳನ್ನು ಇವರಿಗೆ ನಿಕಟವಾಗಿ ನೋಡಲು ಅವಕಾಶವಾಯಿತು. ಅವರ ನಡೆ–ನುಡಿಗಳು ಚನ್ನಬಸಪ್ಪನವರ ಮೇಲೆ ಬಹಳ ಪ್ರಭಾವ ಬೀರಿದವು. ಇವರು ಪ್ರೌಢಶಾಲೆ ಕಲಿತದ್ದು ಬೀರೂರಿನಲ್ಲಿ. ಅಂದಿನಿಂದ ಹುಟ್ಟಿದ ಹಳ್ಳಿಯ ಸೇವೆಯೇ ಅವರ ಕರ್ತವ್ಯಗಳಲ್ಲಿ ಒಂದಾಯಿತು. ಖಾದಿ ಧರಿಸುವುದು ಅವರ ರೂಢಿಯಾಯಿತು. ಈ ಎರಡನ್ನು ಇಂದಿಗೂ ಅವರು ಪರಿಪಾಲಿಸಿಕೊಂಡು ಬಂದಿದ್ದಾರೆ. ಗೊ.ರು ಚನ್ನಬಸಪ್ಪನವರ ಇನಿದಾದ ದನಿಯಲ್ಲಿ ಜನಪದ ಸಾಹಿತ್ಯ ಸುಧೆಯನ್ನು ಸವಿಯುವುದೇ ಸೊಗಸು. ಚನ್ನಬಸಪ್ಪ ಅವರು ಹಿರಿಯ ಜಾನಪದ ತಜ್ಞರಾಗಿದ್ದಾರೆ. ಮಹಾದೇವಿ, ಸದಾಶಿವ ಶಿವಾಚಾರ್ಯ, ಕರ್ನಾಟಕ ಪ್ರಗತಿಪಥ, ಚೆಲುವಾಂಬಿಕೆ, ಕುನಾಲ, ಸಾಕ್ಷಿ ಕಲ್ಲು, ಬೆಳ್ಳಕ್ಕಿ ಹಿಂಡು ಬೆದರ್ಯಾವೊ, ಬಾಗೂರು ನಾಗಮ್ಮ, ಗ್ರಾಮ ಗೀತೆಗಳು, ವಿಭೂತಿ, ಕರ್ನಾಟಕ ಜನಪದಕಲೆಗಳು ಗೊರುಚರವರ ಪ್ರಮುಖ ಬರಹಗಳಾಗಿವೆ. ಇವರ ಇಂತಹ ಹಲವಾರು ಸೇವೆ ಸಾದನೆ ಹಾಗೂ ಹೋರಾಟಗಳನ್ನು ಗಮನಿಸಿ ಕನ್ನಡ ವಿಶ್ವವಿದ್ಯಾಲಯವು 'ನಾಡೋಜ' ಪ್ರಶಸ್ತಿಯನ್ನು ನೀಡಿ ಗೌರವಿಸಿದ್ದು ಒಂದು ಹೆಮ್ಮೆಯ ವಿಷಯವಾಗಿದೆ.

ಪ್ರೊ. ಟಿ.ವಿ. ವೆಂಕಟಾಚಲ ಶಾಸ್ತ್ರಿ (ತೋಗೆರೆ ವೆಂಕಟ ಸುಬ್ಬಾಶಾಸ್ತ್ರಿ ವೆಂಕಟಾಚಲ ಶಾಸ್ತ್ರಿ), ಕನ್ನಡ ಸಾಹಿತ್ಯ ಕ್ಷೇತ್ರದ ಹಿರಿಯ ಸಂಶೋಧಕರು, ವಿದ್ವಾಂಸರು, ವ್ಯಾಕರಣಕಾರರು. ಅವರು ಛಂದಸ್ಸು, ವ್ಯಾಕರಣ, ನಿಘಂಟು, ಕಾವ್ಯಮೀಮಾಂಸೆ, ಗ್ರಂಥ ಸಂಪಾದನೆ, ಸಾಹಿತ್ಯ ವಿಮರ್ಶೆ, ಸಾಹಿತ್ಯ ಚರಿತ್ರೆ, ಸಂಶೋಧನೆ, ಜೀವನಚರಿತ್ರೆ ಇತ್ಯಾದಿ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳನ್ನು ಕುರಿತು 120ಕ್ಕೂ ಹೆಚ್ಚು ಕೃತಿಗಳು, ಸಹಕರ್ತೃತ್ವ ಮತ್ತು ಸಹಸಂಪಾದನೆಯಲ್ಲಿ 16 ಕೃತಿಗಳು, ಪ್ರಧಾನ ಸಂಪಾದಕತ್ವದಲ್ಲಿ ಸುಮಾರು 30ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ಅವರ ಕನ್ನಡ ಸಾಹಿತ್ಯ ಸೇವೆಗಾಗಿ ಕನ್ನಡ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಗೌರವ ಡಿ.ಲಿಟ್., ಪಂಪ ಪ್ರಶಸ್ತಿ, ರನ್ನ ಪ್ರಶಸ್ತಿ, ನೃಪತುಂಗ ಸಾಹಿತ್ಯ ಪ್ರಶಸ್ತಿ ಮುಂತಾದ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ. ಹಳಗನ್ನಡ ಸಾಹಿತ್ಯದಲ್ಲಿ ಅಪಾರ ಪಾಂಡಿತ್ಯವನ್ನು ಹೊಂದಿರುವ ಪ್ರೊ. ಟಿ.ವಿ.ವಿ. ಅವರನ್ನು ಕುರಿತು 'ಡಿ.ಎಲ್. ನರಸಿಂಹಾಚಾರ್ ಅವರ ನಂತರ ಆ ಸ್ಥಾನವನ್ನು ಶಾಸ್ತ್ರಿಗಳು ತುಂಬಿಕೊಟ್ಟರು' ಎಂದಿರುವ ಮಾತು ಗಮನಾರ್ಹ. ಇವರ ಹಲವಾರು ಸಾಮಾಜಿಕ ಮತ್ತು ಸಾಹಿತಿಕ ಸಾಧನೆಗಳನ್ನು ಗುರುತಿಸಿ ಹಂಪಿ ಕನ್ನಡ ವಿಶ್ವವಿದ್ಯಾಲಯ 'ನಾಡೋಜ' ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಭಾಷಾವಿಜ್ಞಾನಿ ಡಾ. ಭಾಷ್ಯಂ ಸ್ವಾಮಿ ಅವರು ಮೈಸೂರಿನ ಯೋಗನರಸಿಂಹಸ್ವಾಮಿ ದೇಗುಲದ ಸಂಸ್ಥಾಪಕರಾಗಿದ್ದು ಹಲವು ವರ್ಷಗಳಿಂದ ಸಮಾಜ ಹಾಗೂ ಸಾಹಿತ್ಯ ಸೇವೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಇವರ ನಿಸ್ವಾರ್ಥ ಸೇವಾಧರ್ಮ ಮತ್ತು ಸಾಧನೆಯನ್ನು ಗುರುತಿಸಿ ಶ್ರೀಯುತರಿಗೂ 'ನಾಡೋಜ' ಪ್ರಶಸ್ತಿ ಪ್ರದಾನವಾಗಿದೆ.

ಹಂಪಿ ಕನ್ನಡ ವಿಶ್ವವಿದ್ಯಾಲಯದ 30ನೇ ನುಡಿಹಬ್ಬ ಘಟಿಕೋತ್ಸವದಲ್ಲಿ ಸನ್ಮಾನ್ಯ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್‌ರವರಿಂದ 2022ರ ಸಾಲಿನ 'ನಾಡೋಜ' ಪ್ರಶಸ್ತಿ ಪುರಸ್ಕೃತರಾದ ಈ ಮೂವರೂ ಗಣ್ಯರಿಗೆ ಅಭಿಮತದ ಶುಭಾಶಯಗಳು.


## ಸಾಂಸ್ಕೃತಿಕ ನೀತಿ ಸಮಿತಿ ಸದಸ್ಯರಾಗಿ ನೇಮಕಗೊಂಡ ಪ್ರೊ. ವಿಶ್ವನಾಥ್ ಅವರಿಗೆ ಅಭಿನಂದನೆಗಳು



ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಚಿಸಿರುವ ಸಾಂಸ್ಕೃತಿಕ ನೀತಿ ಸಮಿತಿಗೆ ಸದಸ್ಯರಾಗಿ ನೇಮಕಗೊಂಡಿರುವ ನವದೆಹಲಿಯ ಜವಹರಲಾಲ್ ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾದ ಪ್ರೊ. ವಿಶ್ವನಾಥ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಅಭಿನಂದನೆಗಳು.

# ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ವರ್ಷಾಚರಣೆ ವಿದ್ಯುಕ್ತ ಉದ್ಘಾಟನೆ

## ನಿನ್ನೆಯನ್ನು ಅರಿತರೆ ಮಾತ್ರ ಸುಂದರವಾದ ನಾಳೆಗಳನ್ನು ರೂಪಿಸಲು ಸಾಧ್ಯ-ಟಿ.ಎಸ್. ನಾಗಾಭರಣ




ನಾಳೆಗಳನ್ನು ಕಾಣುವಾಗ ನಿನ್ನೆಗಳ ಗಮನವಿರಬೇಕು. ನಿನ್ನೆಯ ಅರಿವಿದ್ದಾಗ ನಾಳೆಯ ತಿಳಿವಳಿಕೆ ಸಾಧ್ಯ. ನಿನ್ನೆಗಳನ್ನು ತಿಳಿಯದೇ ನಾಳೆಯ ಬಗ್ಗೆ ಕನಸು ಕಾಣಬಾರದು. ಭವಿಷ್ಯದ ಕನ್ನಡಿಗರನ್ನು ದೆಹಲಿ ಕರ್ನಾಟಕ ಸಂಘ ಕಟ್ಟುತ್ತಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಶ್ರೀ ಟಿ.ಎಸ್. ನಾಗಾಭರಣ ಅವರು ಹೇಳಿದರು. ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಏಪ್ರಿಲ್ 23 ರಂದು ದೆಹಲಿ ಕರ್ನಾಟಕ ಸಂಘದ 75ನೇ ವರ್ಷಾಚರಣೆಯ ಅಮೃತ ಮಹೋತ್ಸವದ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು. 1940ರಿಂದ ಕನ್ನಡದ ಮನಸ್ಸುಗಳು ನಿರಂತರವಾಗಿ ಕನ್ನಡದ ಅಸ್ತಿತ್ವ, ಅಸ್ಮಿತೆ ಹಾಗೂ ತನ್ನತನವನ್ನು ಉಳಿಸಿ ಬೆಳೆಸಿಕೊಂಡು ಬರುವ ನಿಟ್ಟಿನಲ್ಲಿ ಅವರು ನಡೆಸಿದ ಪಯಣ, ಆ ಯಾನ ಸಾಂಸ್ಕೃತಿಕ ಸಮುಚ್ಚಯದಲ್ಲಿ ನಾವಿಂದು ಕಾಣುತ್ತೇವೆ. ಈ ಕಟ್ಟುವಿಕೆಯ ಹಿಂದೆ ಲಕ್ಷಾಂತರ ಮನಸ್ಸುಗಳು ನಿರಂತರವಾಗಿ ತಮ್ಮ ಮಾನಸಿಕ ಸ್ಥೈರ್ಯ, ಅವರ ಕಾರ್ಯ ವರ್ಚಸ್ಸು ಕಾಣಬಹುದಾಗಿದೆ. ಆ ಹಿರಿಯ ಚೇತನಗಳು ಕೈಗೊಂಡ ಕಾರ್ಯ, ತೆಗೆದುಕೊಂಡ ನಿರ್ಣಯ, ನಿರ್ಧಾರಗಳು ಸ್ಮರಣೀಯವಾಗಿವೆ. ಅವರು ಅಂದು ಈ ಕಾರ್ಯ ಕೈಗೊಳ್ಳದೇ ಇದ್ದಿದ್ದರೆ, ಇಂದಿಲ್ಲಿ ನಾವು ಒಂದೆಡೆ ಕೂಡುತ್ತಿರಲಿಲ್ಲ. ಅಂದಿನ ಆ ಚೇತನಗಳ ಯೋಚನಾ ಹಾಗೂ ಚಿಂತನಾ ಕ್ರಮದ ಫಲಶ್ರುತಿಯೇ ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರ ಸಂಘ ಹಾಗೂ ಕನ್ನಡ ಶಾಲೆ ಕನ್ನಡಿಗರ ಪ್ರಾತಿನಿಧಿಕ ಹೆಗ್ಗುರುತಾಗಿ ಬೆಳೆದು ನಿಂತಿವೆ.



ಕನ್ನಡದ ಮನಸ್ಸುಗಳನ್ನು ಕಟ್ಟುವ ಕಾರ್ಯ ಇಲ್ಲಿನ ದೆಹಲಿ ಕರ್ನಾಟಕ ಸಂಘ ಮಾಡುತ್ತಿದೆ. ಮನಸ್ಸು ಕಟ್ಟಲು ಪ್ರೀತಿ, ವಿಶ್ವಾಸ ಹಾಗೂ ಶ್ರದ್ಧೆ ಬೇಕು.

ಅನ್ನ, ಅಕ್ಷರ ಹಾಗೂ ಆರೋಗ್ಯ ಮಹತ್ವ ಅರಿತ ಅಂದಿನ ಹಿರಿಯರು ಆ ದಿಸೆಯಲ್ಲಿ ಚಿಂತಿಸಿ, ಕಾರ್ಯಗಳನ್ನು ಸಾಕಾರಗೊಳಿಸಬೇಕೆಂಬ ಅವರ ದೃಢ ನಿಶ್ಚಯವಾಗಿತ್ತು. ಕಟ್ಟಕಡೆಯ ವ್ಯಕ್ತಿಗೂ ಶಿಕ್ಷಣ ದೊರೆಯಬೇಕೆಂದು ಯಾರೂ ಶಿಕ್ಷಣದಿಂದ ವಂಚಿತರಾಗಬಾರದು, ಹಸಿವಿನಿಂದ ಇರಬಾರದೆಂಬ ಸದುದ್ದೇಶ ಹೊಂದಿ, ನಿರಂತರ ದಾಸೋಹ. ಎಲ್ಲರಿಗೂ ಆರೋಗ್ಯ ಮುಖ್ಯ ಎಂದು ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಿದರು. ಅವರಿತ್ತ ಆಶೀರ್ವಾದದ ಭಲದಿಂದ ಆ ಕಾರ್ಯಗಳನ್ನು ಮುಂದುವರೆಸಿಕೊಂಡು ಹೋಗಲಾಗುತ್ತಿದೆ. ಅಂತಹ ಧೀಮಂತ ಮಹನೀಯರು ಕಟ್ಟಿಕೊಟ್ಟ ಈ ಸಂಸ್ಥೆಗಳು ನಮಗೆ ಮಾದರಿ.

ಸ್ವರ್ಗಿಯ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿ, ಸಿದ್ಧ ಗಂಗೆಯ ಸಿದ್ದ ಪುರುಷ ಲಿಂಗೈಕ್ಯ, ಶ್ರೀ ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಅವರು ಹಾಗೂ ನಾಡಿನ ಅನೇಕ ಮಠ–ಮಾನ್ಯಗಳು ಅನ್ನ, ಶಿಕ್ಷಣ ಹಾಗೂ ಆರೋಗ್ಯ ನೀಡುವ ಸಮಾಜಮುಖಿ ಕಾರ್ಯಗಳ ಮೂಲಕ ಬದುಕು ಹಸನಗೊಳ್ಳಲು ಪೂರಕವಾಗಿ ಶ್ರಮಿಸುತ್ತಿವೆ.

ಕಲೆ ಅದು ಜಾತ್ಯಾತೀತ ಹಾಗೂ ಭಾಷಾತೀತವಾದ ಸಾಮರಸ್ಯದಿಂದ ಕೂಡಿದ ಸಾಂಘಿಕ ಕಲೆಯಾಗಿರುತ್ತದೆ. ಕಲೆ ಮನಸ್ಸನ್ನು ಅರಳಿಸುತ್ತದೆ, ಮುದಗೊಳಿಸುತ್ತದೆ, ಸಮಾಜಮುಖಿಯಾಗಿಸುತ್ತದೆ ಇಂತಹ ಕಲೆಯ ಸಾಮರಸ್ಯದೆಡೆಗೆ ಸಾಗಿ, ಇದರ ಮುಖಾಂತರ ಮುಂದಿನ ಪೀಳಿಗೆಯ ಮನಸ್ಸುಗಳಿಗೆ ಸಮಾಜಮುಖಿ ಹಾಗೂ ಜೀವನ್ಮುಖಿಯಾಗಿಸುವುದು ಬಹುಮುಖ್ಯ.

ಈ ಅಮೃತ ಮಹೋತ್ಸವದ ಆಚರಣೆಯ ಹಿನ್ನೆಲೆಯಾಗಿ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಸಾಂಸ್ಕೃತಿಕ ಉತ್ಸವದಿಂದ ಆರಂಭಗೊಂಡು, ರಾಜ್ಯದ 31 ಜಿಲ್ಲೆಯ ವೈವಿದ್ಯಮಯ ಸಾಂಸ್ಕೃತಿಕ ಲೋಕ ಅನಾವರಣಗೊಂಡು ಸಂಭ್ರಮದ ವಾತಾವರಣದ ದೊಡ್ಡ ಮಟ್ಟದ ಕಾರ್ಯಕ್ರಮ ಎದುರುಗೊಳ್ಳುವವೆಡೆಗೆ ನಡಿಗೆ ಸಾಗಿದೆ. ಈ ತರಹದ ಕಾರ್ಯಕ್ರಮಕ್ಕೆ ತಾವು ಈ ಹಿಂದೆ ಸಾಕ್ಷಿಯಾಗಿರುವುದನ್ನು ನೆನಪಿಸಿಕೊಂಡರು.

ಕಲೆಯಲ್ಲಿ ಲಯವಿದೆ. ಲಯಕ್ಕೆ ತಲೆದೂಗದವರೇ ಇಲ್ಲ. ದೆಹಲಿ ಕರ್ನಾಟಕ ಸಂಘ ವಿಶಿಷ್ಟ ಹಾಗೂ ವೈಶಿಷ್ಟ್ಯಪೂರ್ಣ ಕನ್ನಡ ಕಾರ್ಯಕ್ರಮಗಳ ಆಯೋಜನೆ ಮಾಡುವ ಮೂಲಕ ತನ್ನದೇಯಾದ ಗೌರವ ಹಾಗೂ ಹೆಮ್ಮೆಗೆ ಪಾತ್ರವಾಗುವುದರ ಜೊತೆಗೆ, ಎಲ್ಲರ ಗಮನ ಸೆಳೆದಿದೆ. ಈ ವೇದಿಕೆಯಿಂದ ಮತ್ತೊಂದು ವೇದಿಕೆಗೆ ಆಗು ಮಾಡುವುದಿದೆಯಲ್ಲಾ ಅದು ನಮ್ಮ ಮುನ್ನೋಟ. ಇಂತಹ ದೂರದೃಷ್ಟಿಯ ಚಿಂತನಾ ಕ್ರಮ ಮತ್ತು ರಚನಾತ್ಮಕ ವಿಚಾರದಿಂದ ಕೂಡಿದ ಮನಸ್ಸುಗಳಿಂದ ಮಾತ್ರ ಸಾಧ್ಯ. ದೆಹಲಿ ಕರ್ನಾಟಕ ಸಂಘ ನಿಜವಾಗಿಯೂ ಅಂತಹ

ಸಾಧ್ಯತೆಯನ್ನು ತನ್ನದಾಗಿಸಿಕೊಂಡಿದೆ ಎಂದ ಅವರು, ಒಂದು ವರ್ಷದ ಅವಧಿಯಲ್ಲಿ 31 ಜಿಲ್ಲೆಗಳ ಸಾಂಸ್ಕೃತಿಕ ಸೊಬಗು ರಾಷ್ಟ್ರದ ರಾಜಧಾನಿಯಲ್ಲಿ ಆಗು ಮಾಡುವುದು ಅದ್ಭುತ ಕಾರ್ಯ ಎಂದರು.

**ಪೂಜ್ಯ ಸ್ವಾಮೀಜಿ ಆಶೀರ್ವಚನ :**

ಕಾರ್ಯಕ್ರಮದ ಸಾನಿಧ್ಯ ವಹಿಸಿದ್ದ ಆದಿಚುಂಚನಗಿರಿ ದೆಹಲಿ ಶಾಖಾ ಮಠದ ಶ್ರೀ ಶ್ರೀ ಆನಂದ ಚೈತನ್ಯ ಸ್ವಾಮೀಜಿ ಅವರು ಮಾತನಾಡಿ, ದೆಹಲಿಯ ಎಲ್ಲ ಕನ್ನಡಿಗರೂ ಇಂತಹ ಕಾರ್ಯಕ್ರಮಗಳಿಗೆ ತನು ಮನ ಸಮಯ ನೀಡುವ ಮೂಲಕ ಬೆನ್ನೆಲುಬಾಗಿ ನಿಂತು, ಸಹಾಯ ಸಹಕಾರ ನೀಡಬೇಕು. ಸಂಘಗಳು ನಿರ್ವಹಿಸುವ ಪಾತ್ರ ಅವುಗಳ ಕಾರ್ಯ ವ್ಯಾಪ್ತಿ ಕುರಿತು ಮಾತನಾಡಿದರು. ಸಂಘಗಳು ಹಾಕಿಕೊಂಡ ಗುರಿಯಡೆಗೆ ಸಾಗಿ ಸಾಫಲ್ಯತೆ ಹೊಂದಲು ಕ್ರಿಯಾಶೀಲತೆಯ ಮನಸ್ಸುಗಳು ಕೈಜೋಡಿಸಿದಾಗ ಮಾತ್ರ ಯಶಸ್ಸು ಸಾಧ್ಯ. ದೆಹಲಿ ಕರ್ನಾಟಕ ಸಂಘವು ಕೆಲವೇ ಕೆಲವು ಸಂಘಗಳಲ್ಲಿ ಗುರುತಿಸಿಕೊಂಡಿದೆ. ಒಂದೆಡೆ ನೆಲೆನಿಂತು, ಸಂಘ ಕಟ್ಟಿಕೊಂಡ ಕನ್ನಡಿಗರೆಲ್ಲರನ್ನೂ ಒಟ್ಟುಗೂಡಿಸಿ ಕನ್ನಡದ ಕಂಪನ್ನು ಪಸರಿಸುವ ಕಾರ್ಯ ಬಹು ಉತ್ತಮವಾದದ್ದಾಗಿದೆ ಎಂದರು. ರಾಜ್ಯದ ಎಲೆಮರೆಯ ಕಾಯಿಯಂತಿರುವ ಸಾಧಕರನ್ನು ನೆನಪಿಸಿಕೊಳ್ಳಬೇಕು. ರಾಜ್ಯದ ಕಲಾವಿದರನ್ನು ಅವರ ಕಲೆ ಗುರುತಿಸಿ, ಪ್ರೋತ್ಸಾಹಿಸುತ್ತಿರುವ ಸಂಘದ ಕಾರ್ಯ ಜನಮೆಚ್ಚುಗೆಯಾಗಿದೆ. ಅಮೃತ ಮಹೋತ್ಸವ ಆಚರಣೆಯ ಶುಭ ಸಂದರ್ಭದಲ್ಲಿ ಎಲ್ಲರಿಗೂ ಶುಭವಾಗಲಿ ಎಂದು ಹಾರೈಸಿ, ಆಶೀರ್ವಚನ ನೀಡಿದರು.

**ಅತಿಥಿಗಳ ನುಡಿ :**

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಗೌಡ ಅವರು ಮಾತನಾಡಿ, ದೆಹಲಿ ಕರ್ನಾಟಕ ಸಂಘ ಅಮೃತ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಶುಭ ಸಂದರ್ಭದಲ್ಲಿ ತಾವು ಪಾಲ್ಗೊಳ್ಳುತ್ತಿರುವುದು ಸಂತಸ ತಂದಿದೆ. ಹಗಲಿರುಳು ದುಡಿದು ಸಂಘದ ಶ್ರೇಯೋಭಿವೃದ್ಧಿಗಾಗಿ ಅವಿರತ ಶ್ರಮಿಸಿದ ಹಿರಿಯ ಚೇತನಗಳ ಕೊಡುಗೆ ಅಪಾರವಾಗಿದೆ. ಕರ್ನಾಟಕದಿಂದ ಬಂದು, ದೇಶದ ರಾಜಧಾನಿಯಲ್ಲಿ ನೆಲೆ ನಿಂತು, ಕನ್ನಡದ ಕಂಪನ್ನು ದೇಶಾದ್ಯಂತ ಪಸರಿಸುವ ಕೈಂಕರ್ಯಕ್ಕೆ ಪಣತೊಟ್ಟು ಗುರಿ ಸಾಧನೆಯ ದಿಸೆಯಲ್ಲಿ ತನ್ನ ಎಪ್ಪತ್ತೈದು ವಸಂತಗಳಲ್ಲಿರುವ ದೇಶದ ರಾಜಧಾನಿಯಲ್ಲಿನ ದೆಹಲಿ ಕರ್ನಾಟಕ ಸಂಘ ಮುಂಬರುವ ದಿನಗಳಲ್ಲಿ ಬೆಳೆದು ಬೆಳಕಾಗಲಿ. ನಮ್ಮ ಹಿರಿದಾದ ಭಾಷೆಯ ಉಳಿವಿಗೆ ಶ್ರಮಿಸುವ ಸಂಘಗಳ ಕಾರ್ಯ ಮೆಚ್ಚುವಂತಹದ್ದು, ಆ ನಿಟ್ಟಿನಲ್ಲಿ ದೆಹಲಿ ಕರ್ನಾಟಕ ಸಂಘವೂ ಹೊರನಾಡಿನಲ್ಲಿದ್ದುಕೊಂಡು ಒಳನಾಡ ಧ್ವನಿಯಾಗಿ ಸಂಪದ್ಭರಿತ ಕಲೆಯ ಹಾಗೂ ಕಲಾವಿದರ ಪ್ರೋತ್ಸಾಹ ಹಾಗೂ ಪ್ರೇರಣೆ ನೀಡುತ್ತಿದೆ ಎಂದು ಹೇಳುತ್ತಾ ಈ ಹಿಂದೆ ಇದೇ ವೇದಿಕೆಯಲ್ಲಿ ತಾವು ಪಾಲ್ಗೊಂಡಿದ್ದನ್ನು ನೆನಪಿಸಿಕೊಂಡರು.

ದೆಹಲಿ ಕರ್ನಾಟಕ ಸಂಘವು ತನ್ನ 75ನೇ ವರ್ಷಾಚರಣೆಯ 'ಅಮೃತ ಮಹೋತ್ಸವ' ಕಾರ್ಯಕ್ರಮದ ಉದ್ಘಾಟನೆಯನ್ನು ವೇದಿಕೆಯಲ್ಲಿದ್ದ ಗಣ್ಯರು ದೀಪ ಬೆಳಗಿಸುವ ಹಾಗೂ ಡೊಳ್ಳು ಬಾರಿಸುವುದರೊಂದಿಗೆ ಬಹಳ ಅರ್ಥಪೂರ್ಣವಾಗಿ ನೆರವೇರಿಸಿದರು. ಜನಪದ ವಾದ್ಯಗಳ ನಿನಾದ ಝೇಂಕಾರ ಸಭಾಂಗಣದಲ್ಲಿ ಕನ್ನಡದ ಕಹಳೆ ಮೊಳಗಿಸಿ ಕೋಲಾರ ಹಾಗೂ ಚಿಕ್ಕಬಳ್ಳಾಪೂರ ಜಿಲ್ಲಾ ಸಾಂಸ್ಕೃತಿಕ ಉತ್ಸವಕ್ಕೂ ವಿಧ್ಯುಕ್ತ ಚಾಲನೆ ನೀಡಲಾಯಿತು.

ಅಮೃತ ಮಹೋತ್ಸವ ಕಾರ್ಯಕ್ರಮದ ಉದ್ಘಾಟನೆ ಮಾಡಿದ ಮಾಜಿ ಸಚಿವರು ಹಾಗೂ ಮುಳಬಾಗಿಲು ಕ್ಷೇತ್ರದ ಶಾಸಕರಾದ ಶ್ರೀ ನಾಗೇಶ್ ಅವರು ಮಾತನಾಡಿ, ರಾಜ್ಯದ ಬೇರೆ–ಬೇರೆ ಭಾಗದಲ್ಲಿ ಹಲವು ಸಂಸ್ಕೃತಿಯ ಕಲಾಪ್ರಕಾರಗಳಿವೆ. ಸಾಂಸ್ಕೃತಿಕ ಕಾರ್ಯಕ್ರಮ, ಉತ್ಸವಗಳು ನಾಟಕ, ಸಂಗೀತ, ಜಾನಪದ ಪ್ರಕಾರಗಳಾದ ಡೊಳ್ಳು ಕುಣಿತ, ಕಂಸಾಳೆ, ಹಲವಾರು ಕಲಾ ಪ್ರಕಾರಗಳ ಕರಗತ ಮಾಡಿಕೊಂಡಿರುವ ಕಲಾವಿದರು ವೇದಿಕೆಯಲ್ಲಿ ಪ್ರಸ್ತುತಿ ಕಾಣುವುದೇ ಸೊಬಗು. ಇದು ಸಂಘ ಸಾಧ್ಯವಾಗಿಸಿದೆ ಎಂದು ಅವರು ಹೇಳಿದರು. ಮುಂಬರುವ ಭವ್ಯ–ಭವಿತವ್ಯಕ್ಕಾಗಿ ಕಲೆಗಳು ನಶಿಸಿ ಹೋಗದಂತೆ ಉಳಿಸಿ ಬೆಳೆಸಬೇಕಾದ ಅವಶ್ಯಕತೆ ಇದೆ. ಈ ಸಂಘ ಇಂತಹ ಕಾರ್ಯ ಮಾಡುತ್ತಿದೆ. ಈ ಅಮೃತಮಹೋತ್ಸವದ ಅಂಗವಾಗಿ ಮೊದಲಿಗೆ, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರಮುಖ ಕಲೆಗಳು ಸಂಘದ ಸಭಾಂಗಣದಲ್ಲಿ ತಮ್ಮ ಪ್ರತಿಭೆ ತೋರಲಿವೆ ಎಂದರು.

ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಗೋಪಾಲಗೌಡ ಅವರೂ ಸಹ ಸಭೆ ಉದ್ದೇಶಿಸಿ ಮಾತನಾಡಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ ಮಾತನಾಡಿ, ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ಪರಮಪೂಜ್ಯ ಜಗದ್ಗುರು ಶ್ರೀ ಶ್ರೀ ಶ್ರೀ ಡಾ. ನಿರ್ಮಲಾನಂದನಾಥ ಮಹಾಸ್ವಾಮೀಜಿಗಳು ಸಂಘಕ್ಕೆ ಆಗಮಿಸಿ, ಕಾರ್ಯಕ್ರಮಕ್ಕೆ ಆಶೀರ್ವದಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ಬೆಳವಣಿಗೆಯಲ್ಲಿ ಹಲವಾರು ಮಹನೀಯರು ಹಗಲಿರುಳು ಶ್ರಮಿಸಿದ್ದಾರೆ. ಅಂತಹ ಎಲ್ಲ ಹಿರಿಯರ ಪರಿಶ್ರಮದಿಂದ ಸಂಘ ಇಷ್ಟು ಎತ್ತರಕ್ಕೆ ಬೆಳೆದು ತನ್ನ 75ನೇ ವರ್ಷಾಚರಣೆಯ ಅಮೃತ ಮಹೋತ್ಸವವನ್ನು ಆಚರಿಸಿಕೊಳ್ಳುತ್ತಿದೆ. ದೆಹಲಿ ಕನ್ನಡ ಶಾಲೆ ಹಾಗೂ ಕರ್ನಾಟಕ ಸಂಘದ ಏಳಿಗೆಗಾಗಿ ಹಲವು ಕನ್ನಡ ಮನಸ್ಸುಗಳ ಶ್ರಮವಿದೆ. ಈ ಸಂದರ್ಭದಲ್ಲಿ ಆ ಪ್ರತಿಯೊಬ್ಬ ಹಿರಿಯರನ್ನು ನೆನೆಯುತ್ತೇನೆ. ದೆಹಲಿಯಲ್ಲಿ ಕರ್ನಾಟಕದಿಂದ ಕೇಂದ್ರ ಲೋಕ ಸೇವಾ ಆಯೋಗ ಮತ್ತಿತರ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಬರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಒಂದು ವಸತಿ ಸಮುಚ್ಚಯ ನಿರ್ಮಾಣ ಆಗಬೇಕು, ಆ ಕನಸನ್ನು ಸಾಕಾರವಾಗಿಸಬೇಕು ಎಂಬುದು ನಮ್ಮ ಗುರಿ ಎಂದು ಹೇಳಿ ಇದಕ್ಕಾಗಿ ನೆರವು ಕೋರಿದರು. ಗ್ರಾಮೀಣ ಪ್ರದೇಶದ ಕಲಾವಿದರು ದೆಹಲಿಗೆ ಬಂದು, ತಮ್ಮ ಕಲಾ ಪ್ರದರ್ಶನ ಮಾಡುವುದಕ್ಕೆ ಇನ್ನೂ ಹೆಚ್ಚಿನ ಅವಕಾಶಗಳನ್ನೂ ನಮ್ಮ ಸಂಘ ನೀಡಲಿದೆ ಎಂದರು.

**ಮೊದಲ ದಿವಸ ನಡೆದ ಸಾಂಸ್ಕೃತಿಕ ಸಂಭ್ರಮ :**

ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಸಾಂಸ್ಕೃತಿಕ ಉತ್ಸವ ಪ್ರಸಿದ್ಧ ಜಾನಪದ ಗಾಯಕ ಕೋಲಾರ ರಾಜಪ್ಪ, ತಂಡದಿಂದ ಜಾನಪದ ಗೀತ ಗಾಯನ, ರಕ್ಷಿತಾ ತಂಡದಿಂದ ಡೊಳ್ಳು ಕುಣಿತ, ರಘುರಾಜನಂದ ತಂಡದಿಂದ ಕಂಸಾಳೆ, ವಿದ್ವಾನ್ ಕೋಲಾರ ರಮೇಶ್ ಅವರ ತಂಡವು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರ ಕಾವ್ಯರಚನೆಗಳಿಗೆ ನೃತ್ಯರೂಪಕಗಳು, ಮೊದಲಾದ ಹತ್ತು ಹಲವು ಕಲಾ ಪ್ರದರ್ಶನಗಳಿಂದ ದೆಹಲಿ ಕರ್ನಾಟಕದ ಸಂಘದಲ್ಲಿ ಕನ್ನಡ ಸಾಂಸ್ಕೃತಿಕ ಲೋಕವೇ ಮೈವೆತ್ತಂತಿದ್ದುದಲ್ಲದೆ ದೆಹಲಿ ಕನ್ನಡಿಗರ ಮನಸೂರೆಗೊಂಡವು. ಎರಡನೇ ದಿವಸದ ಸಮಾರೋಪ ಕಾರ್ಯಕ್ರಮದಲ್ಲಿ ಈ ಸಾಂಸ್ಕೃತಿಕ ಪ್ರದರ್ಶನಗಳು ದಿನವಿಡೀ ನಡೆದವು.

***ಅಭಿಮತ ವರದಿ***



# ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಸಾಂಸ್ಕೃತಿಕ ಉತ್ಸವದ ಸಮಾರೋಪ ಕಾರ್ಯಕ್ರಮ : ಎಲ್ಲರೂ ಸೇರಿ ಕನ್ನಡದ ತೇರನ್ನೆಳೆಯಬೇಕು-ಸಿ.ಟಿ. ರವಿ




ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವ ಆಚರಣೆ ಹಿನ್ನೆಲೆಯಲ್ಲಿ ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಸಾಂಸ್ಕೃತಿಕ ಉತ್ಸವದ ಸಮಾರೋಪ ಕಾರ್ಯಕ್ರಮ ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ (ಏ.24) ಭಾನುವಾರ ನಡೆಯಿತು.

ಈ ಸಮಾರೋಪ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಬಿಜೆಪಿ ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರದ ಮಾಜಿ ಸಚಿವರು ಹಾಗೂ ಶಾಸಕರೂ ಆದ ಮಾನ್ಯ ಶ್ರೀ ಸಿ.ಟಿ. ರವಿ ಅವರು ಮಾತನಾಡುತ್ತಾ, ಕೋಲಾರ ಜಿಲ್ಲೆಯು ಚಿನ್ನದ ನಾಡು. ಈ ಜಿಲ್ಲೆಯು ಹಲವು ಸಾಧಕರನ್ನು ನೀಡಿದ ಜಿಲ್ಲೆಯಾಗಿದೆ. ಪ್ರಮುಖವಾಗಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಸರ್. ಎಂ. ವಿಶ್ವೇಶ್ವರಯ್ಯ, ಸಿ.ಎನ್.ಆರ್. ರಾವ್, ಮಂಕು ತಿಮ್ಮನ ಕಗ್ಗದ ಕವಿ ಡಿ.ವಿ. ಗುಂಡಪ್ಪ ಮುಂತಾದ ಸಾಧಕರೂ ಈ ಜಿಲ್ಲೆಯವರು ಜೊತೆಗೆ, ಕರ್ನಾಟಕ ಆಡಳಿತ ಸೇವೆ ಹಾಗೂ ಭಾರತೀಯ ಆಡಳಿತ ಸೇವೆಯಲ್ಲಿ ಅತಿ ಹೆಚ್ಚು ಸಿಂಹ ಪಾಲು ಕೋಲಾರ ಜಿಲ್ಲೆಯದ್ದಾಗಿದೆ ಎಂದರು.

ಭಾರತದಲ್ಲಿರುವಷ್ಟು ವೈವಿಧ್ಯತೆ ಇರುವ ಭಾಷೆ ಜಗತ್ತಿನ ಯಾವ ನೆಲದಲ್ಲೂ ಇಲ್ಲ. ಭಾರತದಲ್ಲಿ ಅನೇಕ ಭಾಷೆಗಳಿವೆ. ಕರ್ನಾಟಕದಲ್ಲಿ ಬೇರೆ ಬೇರೆ ಪ್ರದೇಶದಲ್ಲಿ ಜನರಾಡುವ ಭಾಷಾ ವೈವಿಧ್ಯತೆ ಇದೆ. ಸಹಜವಾಗಿ ಭಾಷಾ ವೈವಿಧ್ಯತೆಯ ಸೊಗಡಿನಂತೆ, ಆಚಾರ ವಿಚಾರ, ಉಡುಗೆ-ತೊಡುಗೆಯಲ್ಲೂ ವೈವಿಧ್ಯತೆಯಿದೆ. ಇಡೀ ದೇಶ ಬೆಸೆದಿರುವ ಸನಾತನ ಪರಂಪರೆ ಹಾಗೂ ಸಂಸ್ಕೃತಿ ಇದೆ.

ಈ ನೆಲದ ಮೇಲೆ ಪ್ರಭಾವ ಬೀರಿದ ಪ್ರಾದೇಶಿಕ ವ್ಯತ್ಯಾಸಗಳಿಗೆ ಅನುಗುಣವಾಗಿ ಭಾಷೆಯು ವಿವಿಧ ರೂಪ ಹಾಗೂ ಮಾತನಾಡುವ ಶೈಲಿ ಬದಲಾವಣೆಯಾಗಿದೆ.

ಕನ್ನಡ ಶಬ್ದಗಳು ಮರಾಠಿ ಭಾಷೆಯಲ್ಲೂ ಹೋಲುತ್ತವೆ. ಈ ಭಾಷೆಗಳ ಬಳಕೆಯಲ್ಲಿ ಪರಸ್ಪರ ಪ್ರಭಾವ ಹಾಗೂ ವಿನಿಮಯಗಳನ್ನು ಕಾಣಬಹುದು. ಮಹಾರಾಷ್ಟ್ರ ಮುಖ್ಯಮಂತ್ರಿಯವರು ಒಂದು ಸಭೆಯಲ್ಲಿ ಮಾಡಿದ ಮರಾಠಿ ಭಾಷೆಯ ಭಾಷಣದಲ್ಲಿ ಕೇವಲ ಹತ್ತೇ ನಿಮಿಷದಲ್ಲಿ ಕನ್ನಡದಲ್ಲಿ ಬಳಕೆಯಾಗುವ 73 ಶಬ್ಧಗಳು ಇದ್ದವು ಎಂದರು.

ಕನ್ನಡ ಹಾಗೂ ತಮಿಳು ಭಾಷೆಗಳು ಒಂದೇ ರೀತಿಯ ಬಾಹ್ಯ ರಚನೆಯನ್ನು ಹೊಂದಿವೆ. ಕನ್ನಡ ಹಾಗೂ ತಮಿಳು ಭಾಷೆಯಲ್ಲಿನ ಶಬ್ಧ ಒಂದೆ ತರವಾಗಿದ್ದು ಸಾಮ್ಯತೆಯೂ ಇದೆ ಎಂದು ಉಚ್ಚಾರಣೆ ಸಹಿತ ವಿವರಿಸಿದರು. ಭಾಷೆಯು ಅಂತಃಸತ್ವದಲ್ಲಿ ಒಂದೆಯಾಗಿದೆ. ಭಾಷೆ ಮತ್ತು ಸಂಸ್ಕೃತಿ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ,

ಕನ್ನಡವೂ ಹೇರಳವಾದ ಶಬ್ಧ ಸಂಪತ್ತನ್ನು ಹೊಂದಿರುವ ಭಾಷೆಯಾಗಿದೆ. ಸಾವಿರಾರು ವರ್ಷಗಳ ಪರಂಪರೆ ಹಾಗೂ ವೈವಿಧ್ಯತೆ ಇದೆ.

ಕಲೆ, ಸಂಸ್ಕೃತಿಯ ಬೆಳೆಸುವ ನಿಟ್ಟಿನಲ್ಲಿ ಕಲಾವಿದರನ್ನು ದೆಹಲಿಗೆ ಆಹ್ವಾನಿಸಿ, ಅವರನ್ನು ಪರಿಚಯಿಸುವುದರ ಜೊತೆ ಜೊತೆಗೆ, ವಿದ್ಯಾ ದಾನದಂತಹ ಕಾರ್ಯ ದೆಹಲಿ ಕರ್ನಾಟಕ ಸಂಘ ಮಾಡುತ್ತಿದೆ. ಎಲ್ಲರನ್ನು ಒಟ್ಟುಗೂಡಿಸಲು ಒಂದು ವೇದಿಕೆಯನ್ನೂ ಕಲ್ಪಿಸಿಕೊಟ್ಟಿದೆ ಎಂದು ಅಭಿನಂದಿಸಿದರು. ದೆಹಲಿಯಲ್ಲಿ ಕನ್ನಡಿಗರು ಕನ್ನಡ ಕಾರ್ಯಕ್ರಮಕ್ಕೆ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ



ಆಗಮಿಸಿ ಪ್ರೋತ್ಸಾಹಿಸಬೇಕು.ಈ ತರಹದ ಕನ್ನಡ ಕಾರ್ಯಕ್ರಮಗಳಿಂದ ಮುಂದಿನ ಪೀಳಿಗೆಗೆ ಸಂಸ್ಕೃತಿಯ ಪರಿಚಯವೂ ಮಾಡಿಸಿದಂತಾಗುತ್ತದೆ. ಈ ದಿಸೆಯಲ್ಲಿ ಕರ್ನಾಟಕ ಸಂಘಗಳ ಪಾತ್ರ ಬಹು ಮುಖ್ಯ ಎಲ್ಲರೂ ಸೇರಿ ಕನ್ನಡದ ತೇರನ್ನೆಳೆಯಬೇಕು ಎಂದರು. ಬಹಳಷ್ಟು ಜನ ಸೇರಿ ಕೈಜೋಡಿಸಿದಾಗ ಮಾತ್ರ ತೇರನ್ನೆಳೆಯಲು ಸಾಧ್ಯ ಎಂದರು

ಈ ಅಮೃತ ಮಹೋತ್ಸವ ಕಾರ್ಯಕ್ರಮ ವರ್ಷಪೂರ್ತಿ ನಡೆಯಲು ಹಲವರು ನೆರವಾಗಿದ್ದಾರೆ. ದೆಹಲಿ ಕರ್ನಾಟಕ ಸಂಘವನ್ನು ಕಟ್ಟಿ ಬೆಳೆಸಲು ಹಗಲಿರುಳು ಶ್ರಮವಹಿಸಿ, ನೆರವಾಗಿರುವ 17 ಜನ ಅಧ್ಯಕ್ಷರು ಹಾಗೂ 13 ಜನ ಕಾರ್ಯದರ್ಶಿಗಳೂ ಸೇರಿದಂತೆ, ಹಲವಾರು ಮಹನೀಯರನ್ನು ಈ ಸಂದರ್ಭ ಸ್ಮರಿಸುತ್ತೇನೆ ಎಂದರು. ಮುಂಬರುವ ದಿನಗಳು ಮತ್ತಷ್ಟು ಕಾರ್ಯಕ್ರಮಗಳು ಮೂಡಿಬರಲಿ ಎಂದು ಶುಭಹಾರೈಸಿದರು.

ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿದ ಶ್ರೀ ಸಿ.ಟಿ. ರವಿ ಅವರು ಹಾಗೂ ಅತಿಥಿಗಳಾಗಿದ್ದ ಕೋಲಾರ ಚಿಕ್ಕಬಳ್ಳಾಪುರ ಜಿಲ್ಲೆಗಳ ಶ್ರೀ ಮುನಿಮಾರಪ್ಪ, ಶ್ರೀ ಕನ್ನಡವೇ ಸತ್ಯ ರಂಗಣ್ಣ, ಶ್ರೀ ಗೋಪಾಲ್ ಗೌಡ, ಶ್ರೀ ಪಲ್ಲವಿ ಮಣಿ, ಡಾ. ವೆಂಕಟೇಶ್ ಮೌರ್ಯ, ಶ್ರೀ ರಮೇಶ್ ಟಿ.ಸಿ. ಶ್ರೀ ಎಂ.ಆರ್. ನಾರಾಯಣಗೌಡ, ಶ್ರೀ ಸುರೇಶ ಬಾಬು ಮತ್ತಿತರ ಗಣ್ಯರನ್ನು ಗೌರವಿಸಿ, ಸನ್ಮಾನಿಸಲಾಯಿತು.

ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಸಾಂಸ್ಕೃತಿಕ ಉತ್ಸವದ ಅಂಗವಾಗಿ ಆ ಎರಡೂ ಜಿಲ್ಲೆಗಳ ಪ್ರಸಿದ್ಧ ಜಾನಪದ ಗೀತೆ, ನೃತ್ಯ, ನಾಟಕ ಮೊದಲಾದ ಪ್ರದರ್ಶನಗಳನ್ನು ನೀಡಿದ ಶ್ರೀ ಕೋಲಾರ ರಾಜಪ್ಪ, ಮಾಲೂರು ವಿಜಿ ಹಾಗೂ ಆ ಕಲಾ ತಂಡಗಳ ಸದಸ್ಯರನ್ನು ಹಾಗೂ ಕಲಾ ಪೋಷಕರಾದ ರಕ್ಷಿತಾ ತಂಡ, ರಘುರಾಜನಂದ ತಂಡ, ವಿಜಿಕುಮಾರ ತಂಡ ಹಾಗೂ ವಿದ್ವಾನ್ ಕೋಲಾರ ರಮೇಶ ತಂಡವನ್ನು ಗೌರವಿಸಿ, ಸನ್ಮಾನಿಸಲಾಯಿತು.

ಸಂಘದ ಅಮೃತ ಮಹೋತ್ಸವ ಉದ್ಘಾಟನೆಗೆ ಆಗಮಿಸಿದ್ದ ಅತಿಥಿ ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕ ನುಡಿಗಳನ್ನಾಡಿದ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಅವರು ದೆಹಲಿಯಲ್ಲಿ ಸಂಘ ಕಟ್ಟಿ ಕನ್ನಡದ ಅಸ್ತಿತ್ವ ಉಳಿಸುವಲ್ಲಿ ಒಂದೆಡೆ ಕೂಡಿದ ಎಲ್ಲಾ ಹಿರಿಯ ಕನ್ನಡ ಮನಸ್ಸುಗಳನ್ನು ಸ್ಮರಿಸಿ ಗೌರವ ಸಲ್ಲಿಸಿದರು. ಹೀಗೆ ಸಂಘಟಿತಗೊಂಡು ಕನ್ನಡ ಕಟ್ಟುವತ್ತ ಕಾರ್ಯೋನ್ಮುಖರಾದ ಆ ಹಿರಿಯರ ಮುಂದಾಲೋಚನೆಯಿಂದಾಗಿ ದೆಹಲಿಯಲ್ಲಿ ಕರ್ನಾಟಕ ಸಂಘ ಹಾಗೂ ಕನ್ನಡ ಶಾಲೆ ಸ್ಥಾಪನೆಗೆ ನಾಂದಿಯಾಯಿತು. ಇಂದು ಈ ಸಂಘ ವಿಶ್ವದ ಸಕ್ರಿಯ ಕನ್ನಡ ಸಂಘಗಳ ಸಾಲಿಗೆ ನಿಲ್ಲಲು ಆ ಎಲ್ಲ ಹಿರಿಯರ ಶ್ರಮವಿದೆ. ಮುಂದೆ ಜಿಲ್ಲಾವಾರು ಕಲಾ ಪ್ರಕಾರಗಳಿಗೆ ಸಂಘ ವೇದಿಕೆಯಾಗಲಿದೆ ಎಂದರು.

ದೆಹಲಿ ಕನ್ನಡಿಗ ಮಹಿಳೆಯರು ನಾಡಗೀತೆ ಹಾಡಿದರು. ಕೋಲಾರದ ನಟರಾಜ್ ಪ್ರಾರ್ಥನೆ ನೆರವೇರಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಚಂದ್ರಶೇಖರ ಎನ್.ಪಿ. ಸಂತೋಷ ಜೆ. ಹಾಗೂ ಜಂಟಿ ಕಾರ್ಯದರ್ಶಿ ಶ್ರೀಮತಿ ಸುಮಿತ ಮುರಗೋಡ ಅವರು ಕಾರ್ಯಕ್ರಮ ನಿರ್ವಹಿಸಿದರು.ಸಂಘದ ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್ ವಂದಿಸಿದರು. ☐

**ಅಭಿಮತ ವರದಿ**

# ಅಮೃತ ಮಹೋತ್ಸವದಲ್ಲರಳಿದ ಸಾಂಸ್ಕೃತಿಕ ಕಲರವ:



ದೆಹಲಿಯಲ್ಲಿರುವ ಕನ್ನಡಿಗರು ಕಲಾ ಪ್ರೇಮಿಗಳು ಎಂಬುದರಲ್ಲಿ ಎರಡು ಮಾತಿಲ್ಲ. ಹೀಗಾಗಿ ಸಂಘದ ಬಹುತೇಕ ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲಿ "ಹೌಸ್‌ಫುಲ್" ಆಗುವುದು ಸಾಮಾನ್ಯ ಸಂಗತಿ. ಈ ಬಾರಿ ದೆಹಲಿ ಕರ್ನಾಟಕ ಸಂಘದ ಅಮೃತ ಮಹೋತ್ಸವಕ್ಕೆ ವಿಶೇಷ ಕಳೆಯನ್ನು ನೀಡಿದ್ದು ಕೋಲಾರದ ಸಾಂಸ್ಕೃತಿಕ ಸೊಗಡನ್ನು ರಾಷ್ಟ್ರ ರಾಜಧಾನಿಯಲ್ಲಿ ಯಶಸ್ವಿಯಾಗಿ ಪಸರಿಸಿದ ಅನುಭವಿ ಕಲಾತಂಡಗಳು. ಶ್ರೀ ಸಿ.ಆರ್. ನಟರಾಜ ಮತ್ತು ತಂಡದವರು ಶಾಸ್ತ್ರೀಯ ಸಂಗೀತ ಸುಧೆಯನ್ನು ಹರಿಸಿದರೆ, ಡಾ. ಲಕ್ಷ್ಮೀನಾರಾಯಣ ಮತ್ತು ಸಂಗಡಿಗರು ರಂಗ ಗೀತೆಗಳನ್ನು ಪ್ರಸ್ತುತಪಡಿಸಿ ಸಭಿಕರನ್ನು ರಂಜಿಸಿದರು. ಮಾಲೂರು ವಿಜಿಯವರ ನಿರ್ದೇಶನದಲ್ಲಿ ಖ್ಯಾತ ರಂಗ ವಿಜಯ ತಂಡದ ಪ್ರಸ್ತುತಿಯಾಗಿದ್ದ "ಸ್ವಾತಂತ್ರ್ಯ ಸಮರ : ಕರುನಾಡು ಅಮರ" ನಾಟಕವು ರಂಗಪ್ರಿಯರಲ್ಲಿ ತಂದಿಟ್ಟ ದೇಶಪ್ರೇಮದ ಕಿಚ್ಚು, ರೋಮಾಂಚನಗಳು ಸದಾ ನೆನಪಿನಲ್ಲುಳಿಯುವಂಥದ್ದು.

ಇನ್ನು ರಾಷ್ಟ್ರ ಪ್ರಶಸ್ತಿ ವಿಜೇತರಾದ ವಿದ್ವಾನ್ ಶ್ರೀ ಕೋಲಾರ ರಮೇಶ ಮತು ತಂಡವು ಡಿ.ವಿ.ಜಿಯವರ ರಚನೆಗಳನ್ನು ಸೇರಿದಂತೆ ಹಲವು ಗೀತೆಗಳನ್ನು ನೃತ್ಯರೂಪಕಗಳಾಗಿ ಪ್ರಸುತಪಡಿಸಿದ್ದು ವಿಶೇಷವಾಗಿತ್ತು. ಒಂದರ ಹಿಂದೊಂದರಂತೆ ಸತತವಾಗಿ ಹಲವು ಗೀತೆಗಳಿಗೆ ಹೆಜ್ಜೆ ಹಾಕಿದ ಈ ಪ್ರತಿಭಾವಂತ ನೃತ್ಯಪಟುಗಳ ತಂಡವು ನಿಜಕ್ಕೂ ಅಭಿನಂದನೆಗೆ ಅರ್ಹ. ಒಟ್ಟಿನಲ್ಲಿ ಕನಕದಾಸರಿಂದ ಹಿಡಿದು ಕಗ್ಗ ಬ್ರಹ್ಮ ಡಿ.ವಿ.ಜಿ.ವರೆಗೂ, ಮಾಸ್ತಿಯವರಿಂದ ಹಿಡಿದು ಹೆಚ್.ಎಸ್. ಶಿವಪ್ರಕಾಶರ ಗೀತೆಗಳವರೆಗೂ ವೈವಿಧ್ಯಮಯವಾಗಿ ಆವರಿಸಿದ ಗೀತೆಗಳ ಗುಂಗು ಇಡೀ ಕಾರ್ಯಕ್ರಮದ ಜೀವಾಳವಾಗಿತ್ತೆಂದರೆ ಅತಿಶಯೋಕ್ತಿಯಾಗಲಿಕ್ಕಿಲ್ಲ.

**ಕಲಾ ಪೋಷಕರ ಸಹೃದಯತೆ ಮತ್ತು ದೆಹಲಿಯ ಆತಿಥ್ಯ :** ಅಮೃತ ಮಹೋತ್ಸವದ ಅಂಗವಾಗಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲಾ ಉತ್ಸವದ ಸಮಾರೋಪ ಸಮಾರಂಭದ ಸಾಂಸ್ಕೃತಿಕ ಕಾರ್ಯಕ್ರಮಗಳು ಕೊನೆಯಾಗುತ್ತಿದ್ದಂತೆ ಕಲಾ ಪೋಷಕರು ನಾಮುಂದು ತಾಮುಂದು ಎಂಬಂತೆ ಪ್ರೋತ್ಸಾಹ ಧನವನ್ನು ನೀಡಿ ಕಲಾವಿದರನ್ನು ಹುರಿದುಂಬಿಸಿದ್ದು ಇಡೀ ಕಾರ್ಯಕ್ರಮದ ಹೈಲೈಟ್. ಕನ್ನಡವೇ ಸತ್ಯ ರಂಗಣ್ಣನವರಿಂದ ಆರಂಭವಾದ ಈ ಸಹೃದಯಿ ನಡೆಗೆ ಮುಂದೆ ಅತಿಥಿಗಳಾದ ಶ್ರೀ ಪಲ್ಲವಿಮಣಿ, ಶ್ರೀಗೋಪಾಲ ಗೌಡ ಮತ್ತು ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಲ್ಲೊಬ್ಬರಾದ ಶ್ರೀ ಕೆ.ಎಸ್. ಮೂರ್ತಿಯವರೂ ಜೊತೆಗೂಡಿದರು. ಇಂತಹ ಸಹೃದಯಿ ಕಲಾ ಪೋಷಕರು ನಮ್ಮ ನಡುವೆ ಇರುವಷ್ಟು ದಿನ, ಕನ್ನಡದ ಕಲಾ ಕೈಂಕರ್ಯಕ್ಕೆ ಅಳಿವಿಲ್ಲ ಎಂಬುದು ನಿಸ್ಸಂದೇಹವಾಗಿ ಸಮಾಧಾನವನ್ನು ತರುವ ಸಂಗತಿ.

ಇನ್ನು ಕರ್ನಾಟಕದಿಂದ ಆಗಮಿಸಿದ್ದ ಕಲಾವಿದರಿಗೆ ದೆಹಲಿಯ ಆತಿಥ್ಯ ಹೇಗಿತ್ತು ಎಂಬ ಬಗ್ಗೆ ನಾವು ಆರೋಗ್ಯಕರ ಕುತೂಹಲದಿಂದ ವಿಚಾರಿಸಿದೆವು. ಈ ನಿಟ್ಟಿನಲ್ಲಿ ಮುಕ್ತಮನಸ್ಸಿನಿಂದ ಮಾತನಾಡಿದ ರಂಗ ವಿಜಯ ತಂಡದ ಸದಸ್ಯರು ತಮ್ಮ ದೆಹಲಿ ಪ್ರಯಾಣದುದ್ದಕ್ಕೂ ದೆಹಲಿ ಕರ್ನಾಟಕ ಸಂಘದ ಸದಸ್ಯರು ನೀಡಿದ ಸಂಪೂರ್ಣ ಸಹಕಾರ, ಬೆಂಬಲಗಳನ್ನು ಶ್ಲಾಘಿಸಿದರು. ದೆಹಲಿಯಲ್ಲಿ ತಮ್ಮ ಮಹಾತ್ವಾಕಾಂಕ್ಷೆಯ ಕಾರ್ಯಕ್ರಮವು ಯಶಸ್ವಿಯಾದ ಸಂಭ್ರಮವು ಒಂದೆಡೆಯಾದರೆ, ದೆಹಲಿ ಕರ್ನಾಟಕ ಸಂಘವು ಈ ಇಡೀ ಅನುಭವವನ್ನು ನೆನಪಿನಲ್ಲುಳಿಯುವ ವಿಶೇಷ ಅನುಭವವಾಗಿ ಮಾರ್ಪಡಿಸಿದ ಸಾರ್ಥಕತೆಯ ಖುಷಿಯೂ ಅವರದ್ದು. ಇತ್ತ ದೆಹಲಿಯಲ್ಲಿ ಇಪ್ಪತ್ತೈದನೇ ರಂಗ ಪ್ರದರ್ಶನದೊಂದಿಗೆ ಹೊಸದೊಂದು ಮೈಲುಗಲ್ಲು ನೆಟ್ಟಿರುವ ರಂಗ ವಿಜಯದ ರೂವಾರಿ ಮಾಲೂರು ವಿಜಿಯವರೂ ಕೂಡ ಕಲಾವಿದರ ಮನದ ಮಾತುಗಳನ್ನು ಅನುಮೋದಿಸಿದರು.

**ಅಪ್ಪು ನೆನಪುಗಳೂ, ಕಲಾವಿದರ ಹುಮ್ಮಸ್ಸೂ...:**

ಸಮಾರೋಪ ಸಮಾರಂಭದ ಸಾಂಸ್ಕೃತಿಕ ಕಾರ್ಯಕ್ರಮಗಳು ಆರಂಭವಾಗಿದ್ದೇ ಕನ್ನಡಿಗರ ಕಣ್ಮಣಿಯಾಗಿರುವ "ಅಪ್ಪು" ದಿ. ಪುನೀತ್ ರಾಜ್‌ಕುಮಾರ್ ನೆನಪಿನಲ್ಲಿ ಅದ್ಭುತವಾಗಿ ಹೆಜ್ಜೆ ಹಾಕಿದ ಇಬ್ಬರು ಬಾಲ ಕಲಾವಿದರು ಅಪ್ಪುರವರ ಜೀವನೋತ್ಸಾಹದ ಎನರ್ಜಿಯನ್ನೇ ವೇದಿಕೆಯಲ್ಲಿ ತಂದು, ಅವರ ನೆನಪುಗಳನ್ನು ಹಸಿರಾಗಿಸಿದರು. ಹೀಗೆ ಪವರ್‌ಸ್ಟಾರ್ ಸವಿನೆನಪಿನಲ್ಲಿ ಇಡೀ ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಪವರ್‌ಫುಲ್ ಆರಂಭವನ್ನು ನೀಡಿದ ಹೆಗ್ಗಳಿಕೆ ಈ ಪ್ರತಿಭಾವಂತ ಚಿಣ್ಣರದ್ದು.

ಇನ್ನು ರಂಗ ವಿಜಯ ತಂಡದ ಬಹುನಿರೀಕ್ಷಿತ ರಂಗ ಪ್ರಸ್ತುತಿಯ ತರುವಾಯ, ದೆಹಲಿಯ ಕಲಾಸಕ್ತರೊಂದಿಗೆ ಹುಮ್ಮಸ್ಸಿನೊಂದಿಗೆ ಮಾತುಕತೆಗಿಳಿದ ಕಲಾವಿದರ ಉತ್ಸಾಹವು ಮೆಚ್ಚುವಂಥದ್ದು. ತಮ್ಮ ಸ್ಮಾರ್ಟ್ ಫೋನುಗಳನ್ನು ಬಳಸಿಕೊಂಡು ಕಲಾ ರಸಿಕರನ್ನು ಅಲ್ಲಲ್ಲೇ ಪುಟ್ಟದಾಗಿ ಸಂದರ್ಶಿಸುತ್ತಾ, ನಾಟಕದ ಬಗೆಗಿನ ಅಭಿಪ್ರಾಯಗಳನ್ನು ಕಲಾವಿದರು ವೀಡಿಯೋ ರೂಪದಲ್ಲಿ ದಾಖಲಿಸಿಕೊಂಡರು. ಜೊತೆಗೇ ಆಸಕರ ಅದೆಷ್ಟೋ ಕುತೂಹಲದ ಪ್ರಶ್ನೆಗಳಿಗೆ ಯಾವುದೇ ಅಳುಕುಗಳಿಲ್ಲದೆ ತೆರೆದುಕೊಂಡರು. ಅಮೃತ ಮಹೋತ್ಸವದಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳು ಪ್ರಧಾನ ಭೂಮಿಕೆಯಲ್ಲಿದ್ದರೂ, ಆಗಮಿಸಿದ್ದ ಕಲಾತಂಡಗಳಲ್ಲಿ ಕರ್ನಾಟಕದ ವಿವಿಧ ಮೂಲೆಗಳಿಂದ ಬಂದ ಕಲಾವಿದರು ಭಾಗಿಯಾಗಿದ್ದು ನಮ್ಮ ರಾಜ್ಯದ ಸಾಂಸ್ಕೃತಿಕ ಶ್ರೀಮಂತಿಕೆಗೆ ಸಾಕ್ಷಿ. ☐

**ಪ್ರಸಾದ್ ನಾಯಕ್**
ಗುರುಗ್ರಾಮ ಕನ್ನಡಿಗ

# ಕನ್ನಡದ ಮೊದಲ ಕವಯತ್ರಿ ಅಕ್ಕಮಹಾದೇವಿ ಜಯಂತಿ ಪ್ರಯುಕ್ತ ವಿಶೇಷ ಲೇಖನ

*ಲೇಖಕರು : ಸುಶೀಲಾ ಸೋಮಶೇಖರ್*

ಸಂಚಾಲಕರು, ರಾಜ್ಯ ಕದಳಿ ಮಹಿಳಾ ವೇದಿಕೆ, ಬೆಂಗಳೂರು



ಕನ್ನಡ ನಾಡಿನ ಸ್ತ್ರೀ ಚೇತನಗಳಲ್ಲಿ ಆರಾಧ್ಯಳೆನಿಸಿ ಅಕ್ಕನೆಂಬ ಅಕ್ಕರೆ ಪಡೆದ ಅಕ್ಕಮಹಾದೇವಿ ಪ್ರಪ್ರಥಮ ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದಕಿ. ಏಕಾಂಗಿಯಾಗಿ ನಿಂತು ಸಂಪ್ರದಾಯಗಳ ಕುರಿತು ಇಡೀ ಸಮಾಜವನ್ನೆ ಪ್ರಶ್ನಿಸಿದ ಎದೆಗಾರ್ತಿ. ಬಸವ ಅಲ್ಲಮ, ಚೆನ್ನಬಸವಣ್ಣ, ಸಿದ್ಧರಾಮ ಅಕ್ಕಮಹಾದೇವಿ ಈ ಐದು ಜನ ಅಗ್ರಗಣ್ಯರಲ್ಲಿ ಅಕ್ಕಮಹಾದೇವಿಯು ಮುಖ್ಯ ಸ್ಥಾನದಲ್ಲೆ ನಿಲ್ಲುತ್ತಾಳೆ. ಆಕೆಯ ಪ್ರಕಟಿತ ವಚನಗಳು ಮುನ್ನೂರ ಐವತ್ತೈದು. ಅನುಭಾವಿಕ ಸಾಧನೆಯ ಚಿಂತನೆಗಳು ಆಕೆಯ ವಚನಗಳಲ್ಲಿ ಬಿಂಬಿಸಲ್ಪಟ್ಟಿವೆ. ಸುಸಂಸ್ಕೃತ ಮನೆತನದಿಂದ ಬಂದ ವಿದ್ಯಾವಂತಳಾದ ಇವಳು ಸೂಕ್ಷ್ಮ ಸಂವೇದನಾಶೀಲಳು. ಕಾವ್ಯಶಾಸ್ತ್ರ ಪರಿಣಿತೆ. ಪ್ರೌಢ ವಿಚಾರವಂತಿಕೆಯುಳ್ಳವಳು. ಇವಳನ್ನು ಕುರಿತ ಹರಿಹರನ ರಗಳೆಯಲ್ಲದೆ ಹಲವಾರು ಕಾವ್ಯಗಳು ಬಂದಿವೆ. 12ನೆ ಶತಮಾನದ ಈ ಸಂದರ್ಭದಲ್ಲಿ ಲೋಕ ವಿರೋಧಕ್ಕೆ ಬೆಚ್ಚದೆ ಬೆದರದೆ ಅಕ್ಕಮಹಾದೇವಿ ಸಮಾಜದಲ್ಲಿದ್ದೆ ತನ್ನ ಸತಿತ್ವವನ್ನು ತನ್ನ ಮನದನ್ನ ಶ್ರೀ ಚೆನ್ನಮಲ್ಲಿಕಾರ್ಜುನನಿಗೆ ಅರ್ಪಿಸಿದ್ದಾಳೆ. ಶಿವನೊಲುಮೆಯ ಹಂಬಲ ವೈರಾಗ್ಯಗಳು ನಮ್ಮ ಮನ ತುಂಬಿ ನಿಲ್ಲುತ್ತವೆ. ಸ್ತ್ರೀ ಬದುಕಿನ ಹೊಸ ದನಿ ಕೇಳಿಸುತ್ತದೆ. ಋಜು ಮಾರ್ಗದಲ್ಲಿ ನಡೆದು ತಮ್ಮ ವೈರಾಗ್ಯ ಸಾಧನೆಯ ಮೂಲಕ ಆತ್ಮವಿಕಾಸದ ಪರಮಾವಧಿಯನ್ನು ಮುಟ್ಟಿ ದೈವತ್ವದ ಪರಮ ಸಿದ್ಧಿಯನ್ನು ಪಡೆದ ಅಕ್ಕ ವೀರಶೈವ ಧರ್ಮದ ಹಿನ್ನೆಲೆಯ ವೀರ ವಿರಾಗಿಣಿಯೆ ಸರಿ. ನಮ್ಮ ಕನ್ನಡ ನಾಡು ಕಂಡ ಆಧ್ಯಾತ್ಮ ಮಂದಾರ ಪುಷ್ಪ. ವಚನ ಸಾಹಿತ್ಯ ಉತ್ಕೃಷ್ಠ ರತ್ನಗಳಲ್ಲಿ ಮಹಾರತ್ನ ಇವಳೇ ಆಗಿದ್ದಾಳೆ.

ಅಕ್ಕನ ಜನ್ಮ ಸ್ಥಳ ಉಡುತಡಿ. ಉಡುತಡಿಯಲಿ ಜನ್ಮ ತಳೆದು ಕನ್ನಡ ನಾಡಿನುದ್ದಕ್ಕೂ ಸೌರಭ ಸೂಸಿದ ಕೌಸ್ತುಭ ರತ್ನ. ಬಾಲ್ಯದಿಂದಲೆ ಶ್ರೀ ಚೆನ್ನಮಲ್ಲಿಕಾರ್ಜುನನ ಬಗ್ಗೆ ಅತೀಂದ್ರಿಯವಾದ ಒಲವನ್ನು ಹೊಂದಿದ್ದವಳು. ಒಟ್ಟಾರೆ ಇವಳ ಬದುಕಿನಲ್ಲಿ ನಾಲ್ಕು ಮಜಲುಗಳನ್ನು ಕಾಣುತ್ತೇವೆ. ಅವಳ ಜನನ ಮತ್ತು ಬಾಲ್ಯ, ಕೌಶಿಕನೊಂದಿಗಿನ ವಿವಾಹದ ಸಂದರ್ಭ, ನಂತರ ವೈರಾಗ್ಯ ತಾಳಿ ಕಲ್ಯಾಣದತ್ತ ಬಂದ ಅಕ್ಕ ಅನುಭವ ಮಂಟಪದಲ್ಲಿದ್ದ ಶರಣ ಶರಣೆಯರೊಂದಿಗಿನ ಅನುಭಾವಿಕ ಬದುಕು, ಕೊನೆಯದಾಗಿ ಕದಳಿ ಬನದತ್ತ ಪಯಣಿಸಿ ಶ್ರೀ ಚೆನ್ನಮಲ್ಲಿಕಾರ್ಜುನನಲ್ಲಿ ಲೀನವಾದುದು.

ಕದಳಿಗೆ ಹೋದವರು ಮೂವರು ಮಾತ್ರವೆನ್ನುತ್ತಾರೆ. ಎಲ್ಲರಿಂದ ಅಕ್ಕ ಎನಿಸಿಕೊಂಡ ಮಹಾದೇವಿ ಕದಳಿಯನ್ನು ಹೊಕ್ಕಳು. ಅಲ್ಲಿ ತನ್ನ ಮನದನನ್ನು ಕೂಡಿ ಕಡೆಯಲ್ಲಿ ಅಲ್ಲೆ ಲೀನವಾದಳು. ಮಹಾಜ್ಞಾನಿ ಪ್ರಭುದೇವರು ಕೂಡ ಕದಳಿಯತ್ತ ಸಾಗಿದರು. ಕದಳಿಯ ಬನ ಹೊಕ್ಕರು. ಆದರೆ ಅಲ್ಲಿ ಉಳಿಯದೆ ಹಿಂದಿರುಗಿದರು. ಇನ್ನು ಸಿದ್ಧರಾಮಯ್ಯನವರು ಶ್ರೀ ಶೈಲದ ಕದಳಿಯತ್ತ ಸಾಗಿದರು. ಕದಳಿಯ ಬನ ಪ್ರವೇಶಿಸದೆ ಸೊನ್ನಲಿಗೆಗೆ ಹಿಂದಿರುಗಿದರು ಎನ್ನುತ್ತಾರೆ.

ನಮ್ಮ ಜನಪದರು ಅಕ್ಕನ ಜೀವನ ವೃತ್ತಾಂತವನ್ನು ಸರಳವಾಗಿ ಸುಂದರವಾಗಿ ಕಟ್ಟಿಕೊಟ್ಟಿದ್ದಾರೆ.

ಅಕ್ಕ ನಿನ್ನ ಹಾಡು ಎತ್ತಿ ನಾ ಹಾಡಿದರ
ಗಕ್ಕಂತ ಪಾಪ ಕಳದಾವ । ಕೈಲಾಸ
ಪಕ್ಕಕ್ಕೆ ಬಂದು ನೆಲಸ್ಯಾವ
ಉಡುತಡಿಯೆಂಬುದು ಮಡಿಯಾಯ್ತು ನಿನ್ನಿಂದ
ಸಡಗಾರ ನೋಡೊಕೆ ಶಿವ ಬಂದ । ಮಾದೇವಿ
ಅಡಿಯಾದ ನಿನ್ನ ಭಕುತಿಗೆ

ಇದು ಅಕ್ಕನ ಬಗ್ಗೆ ಇರುವ ಅವರ ಅಭಿಮಾನ. ಅಕ್ಕ ಪ್ರಪ್ರಥಮ ಬರಹಗಾರ್ತಿ. ಬಂಡಾಯಗಾರ್ತಿ ಕೂಡ. ಸುಶಿಕ್ಷಿತ ಸುಸಂಸ್ಕೃತ ಹಿನ್ನೆಲೆಯುಳ್ಳವಳು. ಶರಣ ಸತಿ ಲಿಂಗ ಪತಿ ಭಾವ ಮೆರೆದವಳು. ಸ್ಥಿರ ಸೇಸೆಯನ್ನು ಹಾಕಿಸಿಕೊಂಡವಳು. ನೈತಿಕ ಪ್ರಜ್ಞೆಯುಳ್ಳವಳು. ವಿನಯವಂತಳು. ಸಾಮಾಜಿಕ ಕಳಕಳಿಯುಳ್ಳವಳು. ವೈಜ್ಞಾನಿಕ ಚಿಂತಕಳು. ಪರಿಸರ ಪ್ರೇಮಿ, ಪ್ರಾಣಿ ಪ್ರೀತಿಯುಳ್ಳ ಅಹಿಂಸಾ ಪ್ರತಿಪಾದಕಳು, ಕಷ್ಟಗಳನ್ನು ಸವಾಲುಗಳನ್ನು ಎದುರಿಸಿದವಳು, ಆರೋಗ್ಯ ಚಿಂತಕಳು ಶರಣರ ಮಂಡೆಗೆ ಹೂವ ತಂದವಳು, ಮಹಾಮನೆ ಅನುಭವ ಮಂಟಪದ ವಿಚಾರವಂತಳು, ಸಾವಿಲ್ಲದ ಕುಲ ಸೀಮೆಯಿಲ್ಲದ ನಿಸ್ಸೀಮ ಚೆಲುವನ ಕೂಡಿದವಳು, ಕಾಮನ ತಲೆಯ ಕೊರೆದವಳು, ಕಾಲನ ಕಣ್ಣ ಕಳೆದವಳು, ಅರಿಶಿನವನೆ ಮಿಂದವಳು, ದಿಗಂಬರೆಯಾದವಳು, ಅಲೌಕಿಕ ಪತಿಯೊಂದಿಗೆ ಸಂಸಾರ ನಡೆಸಿದವಳು, ಏಕ ಕಾಲದಲ್ಲಿ ಪ್ರಭುತ್ವ ಮತ್ತು ಪತಿತ್ವವನ್ನು ಧಿಕ್ಕರಿಸಿದವಳು, ಅಂದಿನ ಕಾಲದಲ್ಲೆ ದೊರೆಗೆ ಷರತ್ತನ್ನು ವಿಧಿಸಿದ ನಿರ್ಭಯಳು, ಆಲಿಕಲ್ಲ ಹಸೆ ಏರಿದವಳು, ಸ್ತುತಿ ನಿಂದೆಗಳಿಗೆ ಅಂಜದವಳು, ಲೋಕ ಸಂದೇಶ ಸಾರಿದವಳು. ಅಕ್ಕನ ಕಾವ್ಯ ಶಕ್ತಿಯು ಬಹುದೊಡ್ಡದು.

"ಆದ್ಯರ ಅರವತ್ತು ವಚನಕ್ಕೆ ಡಣ್ಣಾಯಕರ ಇಪ್ಪತ್ತು ವಚನ
ಡಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ
ಅಜಗಣ್ಣನ ಐದು ವಚನಕ್ಕೆ ಕೂಡಲ ಚೆನ್ನಸಂಗಮದೇವಾ
ಮಹಾದೇವಿಯಕ್ಕಳ ಒಂದು ವಚನ ನಿರ್ವಚನಾ ಕಾಣಾ ಪ್ರಭುವೆ

ಅಕ್ಕ ತನ್ನ ಜ್ಞಾನದಿಂದ ಔಚಿತ್ಯವರಿತು ಸಾಧನೆಗೈದು ಹಿರಿಯಳೆನಿಸಿದ್ದಾಳೆ. "ಅನುವರಿತು ಘನವ ಬೆರೆಸುವ ಹಿರಿಯತನ ಕಿರಿಯ ವಯದಲ್ಲು ಸಾಧ್ಯ. ಆ ಹಿರಿಯತನವನ್ನು ಮಹಾದೇವಿಯಕ್ಕ ಸಾಧಿಸಿದ್ದಾಳೆ ಎನ್ನುತ್ತಾನೆ ಚೆನ್ನಬಸವಣ್ಣ. ಆಕೆಯ ವಚನ ರಚನಾ ಸಿದ್ಧಿಯೂ ವಿಶೇಷವಾದುದು ಎನ್ನುವ ಈ ಮಾತು ಅಕ್ಕನ ವಚನ ಸಾಹಿತ್ಯ ಶ್ರೇಷ್ಠತೆಗೆ ಸಾಕ್ಷಿಯಾಗಿದೆ. ಆದ್ಯರ ಅರವತ್ತು ವಚನಕ್ಕೆ ಆಕೆಯ ಒಂದೇ ವಚನ ಸಾಕು ಎಂದು ಚೆನ್ನಬಸವಣ್ಣ ಹಿರಿಯಕ್ಕನಿಗೆ ತೋರುವ ಮಮತೆಯನ್ನು ತೋರಿದ್ದಾನೆ.

ಅವಳ ಆಧ್ಯಾತ್ಮಿಕ ನಿಲುವಿನ ಅಭಿವ್ಯಕ್ತಿಯ ವೈಶಿಷ್ಟ್ಯತೆಗಳೇ ಅಕ್ಕನಲ್ಲಿ ಕಡೆಗೆ ಆಧ್ಯಾತ್ಮಿಕ ಅಂತಿಮ ಸತ್ಯವಾಗಿ ತಾನು ಮೆಚ್ಚಿದ ಮನದನ್ನನ ಕೂಡೆ ಶಾಶ್ವತವಾಗಿ ಉಳಿಸಿದವು. ಶರಣ ಸತಿ-ಲಿಂಗ ಪತಿ ಭಾವ ಮೆರೆದ ವಚನಕಾರ್ತಿಯೊಬ್ಬಳ ಸತ್ವಯುತ ಹೋರಾಟ. ಮಾನವ ಇತಿಹಾಸದಲ್ಲಿ ಅಕ್ಕನದು ತುಂಬು ಬಾಳು. ಇಂಥವರು ಅಪರೂಪಕ್ಕೊಮ್ಮೆ ಹುಟ್ಟುತ್ತಾರೆ. ಈ ಅಪರೂಪದ ಅಕ್ಕ ನಮ್ಮ ನಾಡಿನಲ್ಲಿ ಹುಟ್ಟಿರುವುದೇ ನಮ್ಮೆಲ್ಲರ ಪುಣ್ಯ. ಆಕೆಯ ಬದುಕು ಯುಗ ಯುಗಗಳ ಮುಂದಿನ ಪೀಳಿಗೆಗೆ ಆದರ್ಶವಾದುದು. ಹೀಗಾಗಿ ಅಕ್ಕ ಎಂದೆಂದಿಗೂ ಉಳಿಯಬಲ್ಲವಳಾಗಿದ್ದಾಳೆ.

ಹದಿನಾರು ಹದಿನೆಂಟರ ಹರೆಯದ ಸ್ಪುರದ್ರೂಪಿ, ಹೆಣ್ಣು ಮಗಳೊಬ್ಬಳು ಲೌಕಿಕವ ತೊರೆದು ಬೌದ್ಧಿಕತೆ ಮೆರೆದು ವೀರ ವಿರಕೆಯಾಗಿ ಶಿವನ ಸಂಗ ಬಯಸಿ ಕಾಡು ಮೇಡೆನ್ನದೆ, ಗಿರಿ ಗಹ್ವರಗಳೆನ್ನದೆ ಸುತ್ತಿ ಸುಳಿದು ಹೊಕ್ಕು ವೈರಾಗ್ಯ ನಿಧಿಯಾದುದು ಪ್ರಪಂಚದ ಇತಿಹಾಸದಲ್ಲಿಯೆ ವಿರಳವಾದುದು.

ಅಕ್ಕನ ವಚನಗಳಲ್ಲಿ ವೈಜ್ಞಾನಿಕ ಚಿಂತನೆಗಳು:-

ಅಕ್ಕನ ಹಲವು ವಚನಗಳಲ್ಲಿ ವೈಜ್ಞಾನಿಕ ಅಂಶಗಳನ್ನು ಕಾಣಬಹುದು. ಅವಳ ಈ ಪರಿಯ ಜ್ಞಾನ ಮೆಚ್ಚಬಹುದಾದುದು. ಈ ಹಿನ್ನೆಲೆಯಲ್ಲಿ ಅವಳ ಕೆಲವು ವಚನಗಳನ್ನು ನೋಡೋಣ.

ಮುತ್ತು ನೀರಲ್ಲಾಯಿತ್ತು, ವಾರಿಕಲ್ಲು ನೀರಲ್ಲಾಯಿತ್ತು
ಉಪ್ಪು ನೀರಲ್ಲಾಯಿತ್ತು,
ಉಪ್ಪು ಕರಗಿತ್ತು, ವಾರಿಕಲ್ಲು ಕರಗಿತ್ತು
ಮುತ್ತುಕರಗಿದುದನಾರೂ ಕಂಡವರಿಲ್ಲ
ಈ ಸಂಸಾರಿ ಮಾನವರು ಲಿಂಗವಮುಟ್ಟಿ ಭವಭಾರಿಗಳಾದರು
ನಾ ನಿಮ್ಮ ಮುಟ್ಟಿ ಕರಿಗೊಂಡೆನಯ್ಯಾ
ಚೆನ್ನಮಲ್ಲಿಕಾರ್ಜುನಯ್ಯಾ

ಅಕ್ಕನ ಈ ವಚನದಲ್ಲಿ ಬರುವ ಮುತ್ತು, ಉಪ್ಪು, ಆವಿಕಲ್ಲು ಈ ಮೂರರ ಸೃಷ್ಟಿಕ್ರಿಯೆಯನ್ನು ಅವುಗಳ ಕಾರ್ಯ ವೈಖರಿಯನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಮೊದಲ ನಾಲ್ಕು ಸಾಲುಗಳಲ್ಲಿ ಹಿಡಿದಿಟ್ಟು ನಂತರ ತನ್ನ ಅಲೌಕಿಕತೆಯ ಭಾವ ಬಿಂಬಿಸಿದ್ದಾಳೆ.

ಇಲ್ಲಿ ಪ್ರಮುಖವಾಗಿ ವಚನದ ದೃಷ್ಟಾಂತದಲ್ಲಿ ಬಂದಿರುವ ಈ ಮೂರು ಪದಾರ್ಥಗಳು ಸೃಷ್ಟಿಯಾಗುವುದು ನೀರಿನಿಂದಲೆ. ಆದರೆ ಅವುಗಳ ಸ್ವರೂಪ ಮಾತ್ರ ಬೇರೆ. ಮುತ್ತು ಸ್ವಾತಿಯ ಮಳೆಯಿಂದ ಸಮುದ್ರದಲ್ಲಿ ದೊರೆಯುತ್ತದೆ. ಇದಕ್ಕೆ ರಾಸಾಯನಿಕ ವಸ್ತುಗಳನ್ನು ಸೇರಿಸಿ ಮುತ್ತಾಗಿ ಪರಿವರ್ತಿಸುತ್ತಾರೆ. ಮೋಡಗಳು ಮಳೆ ಸುರಿಸುವ ಸಂದರ್ಭದಲ್ಲಿ ಆ ಮೋಡದ ನೀರಿನಿಂದಲೆ ಆವಿಕಲ್ಲು ಸೃಷ್ಟಿಯಾಗುತ್ತದೆ. ಉಪ್ಪು ಸಮುದ್ರದ ನೀರಿನಿಂದ ತಯಾರಾಗುತ್ತದೆ. ಈ ಮೂರರಲ್ಲಿ ನೀರಿನಿಂದಲೆ ತಯಾರಾದ ಉಪ್ಪು ನೀರಲ್ಲಿ ಬೆರೆತ ಕೂಡಲೆ ಮತ್ತೆ ನೀರಾಗಿಯೇ ಪರಿವರ್ತನೆ ಹೊಂದುತ್ತದೆ. ಅಂತೆಯೆ ಮೋಡದಿಂದಿಳಿದ ಆವಿಕಲ್ಲು ಕೂಡ ಅಂಗೈಯಲ್ಲಿ ಹಿಡಿದಾಕ್ಷಣವೆ ಕರಗಿ ನೀರಿನ ಸ್ವರೂಪ ತಾಳುತ್ತದೆ. ಆದರೆ ನೀರಿನಿಂದಲೇ ಸೃಷ್ಟಿಯಾದ ಮುತ್ತಿನ ಸ್ವರೂಪ ಮಾತ್ರ ವಿಭಿನ್ನ. ಈ ಮುತ್ತನ್ನು ಎಲ್ಲೆ ಇಟ್ಟರೂ ಕರಗುವುದಿಲ್ಲ. ತನ್ನ ನೈಜತೆಯನ್ನು

ಕಳೆದುಕೊಳ್ಳುವುದಿಲ್ಲ. ಅದೊಂದು ಮಹತ್ವದ ವಸ್ತುವಾಗಿ ಉಳಿಯುತ್ತದೆ.

ಅಕ್ಕನ ವೀರ ವೈರಾಗ್ಯ ಕೂಡ ಈ ಮುತ್ತಿನಂತೆ ಸಹಜವಾದುದು. ಎಂದೆಂದೂ ಕರಗದ ಭಾವವದು. ಆದರೆ ಈ ಲೋಕದ ಸಾಮಾನ್ಯ ಜನರು ಸಂಸಾರದ ಜಂಜಾಟಗಳಲ್ಲೆ ಮುಳುಗಿ ನಿಮ್ಮನ್ನರಿಯದವರಾಗಿದ್ದಾರೆ. ಆದರೆ ನಾ ನಿನ್ನ ನಂಬಿ ಘನಿಗೊಂಡಿದ್ದೇನೆ. ಎಲ್ಲ ಎಲ್ಲವನರಿಯುವುದಕ್ಕಿಂತ ತನ್ನ ತಾನರಿತ ಅಕ್ಕನ ಮುತ್ತಂತಹ ಈ ಘನಿತನವನ್ನು ಎಂದೂ ದ್ರವಗೊಳಿಸಲಾಗದು. ಅಂತಹ ಗಟ್ಟಿತನ ವೈಯಕ್ತಿಕ ಭಾವ ಸಂಚಯವೇ ಅಕ್ಕಮಹಾದೇವಿ..

ಅಕ್ಕನ ಆರೋಗ್ಯ ಧರ್ಮ

ಆಹಾರವ ಕಿರಿದು ಮಾಡಿರಣ್ಣಾ ಆಹಾರವ ಕಿರಿದು ಮಾಡಿ
ಆಹಾರದಿಂದ ವ್ಯಾಧಿ ಹಬ್ಬಿ ಬಲಿವುದಯ್ಯಾ
ಆಹಾರದಿಂ ನಿದ್ರೆ, ನಿದ್ರೆಯಿಂ ತಾಮಸ, ಅಜ್ಞಾನ, ಮೈಮರೆವು
ಅಜ್ಞಾನದಿಂ ಕಾಮವಿಕಾರ ಹೆಚ್ಚಿ
ಕಾಯವಿಕಾರ ಮನೋವಿಕಾರ ಇಂದ್ರಿಯ ವಿಕಾರ
ಭಾವ ವಿಕಾರ ವಾಯು ವಿಕಾರವನುಂಟುಮಾಡಿ
ಸೃಷ್ಟಿಗೆ ತಂದುದಾದ ಕಾರಣ ಕಾಯದ ಅತಿ ಪೋಷಣೆ ಮೃತ್ಯುವೆಂದುದು
ಜಪ, ತಪ, ಧ್ಯಾನ, ಪೂಜೆಗೆ ಸೂಕ್ಷ್ಮದಿಂದ
ತನು ಮಾತ್ರವಿದ್ದರೆ ಸಾಲದೇ? ತನುವ ಪೋಷಿಸುವ
ಆಸೆ ಅತೀತಕ್ಕೆ ವಿಘ್ನವೆಂದುದು ತನು ಪೋಷಣೆಯಿಂದ
ತಾಮಸ ಹೆಚ್ಚಿ ಅಜ್ಞಾನದಿಂದ ವಿರಕ್ತಿ ಹಾನಿ,
ಅರಿವು ನಷ್ಟ, ಪರವು ದೂರ, ನೀರಕೆ
ನಿಲವಿಲ್ಲದ ಕಾರಣ ಚೆನ್ನಮಲ್ಲಿಕಾರ್ಜುನನ
ಒಲಿಸ ಬಂದ ಕಾಯವ ಕೆಡಿಸದೆ ಉಳಿಸಿಕೊಳ್ಳಿರಯ್ಯ

"ಆಹಾರ ನಿದ್ರಾ ಭಯ ಮೈಥುನಂ ಚ ಸಾಮಾನ್ಯ ಮೇತತ್ ಪಶುರ್ಬಿನಾರಾಣಾಂ ಎಂಬ ಮಾತಿನಂತೆ ಮನುಷ್ಯನೂ ಸಹಜ ಜೀವಿಯೇ. ಅವನ ಇರುವಿಕೆಯ ಪ್ರತೀಕ ಆಹಾರ ಸೇವನೆ. ದೇಹ ಪೋಷಣೆಗೆ ಬೇಕಾದ ಈ ಆಹಾರದ ಬಗ್ಗೆ ಅಕ್ಕಮಹಾದೇವಿ ಅತ್ಯಮೂಲ್ಯ ಸಲಹೆ ಸೂಚನೆಗಳನ್ನು ಇಡೀ ಲೋಕಕ್ಕೆ ಉದ್ಘೋಷಣೆಯಂತೆ ನೀಡುತ್ತಿದ್ದಾಳೆ. ಈ ಶರೀರ ಸುಮ್ಮನೆ ಬಂದುದಲ್ಲ. ಇದೊಂದು ಪುಣ್ಯದ ಕೊಡುಗೆ ಇಂತಹ ಶಾರೀರಿಕ ಸಂಪತ್ತನ್ನು ಜೋಪಾನವಾಗಿಡುವಲ್ಲಿ ಬೇಕಾದ ಒಂದು ಪಟ್ಟಿಯನ್ನೆ ಕೊಡುತ್ತಾಳೆ ಆರೋಗ್ಯ ಚಿಂತಕಳಾದ ಅಕ್ಕಮಹಾದೇವಿ.

ಆಹಾರ ಲೌಕಿಕ ಕ್ರಿಯೆ. ಇದರ ಪ್ರಕ್ರಿಯೆ ಜೈವಿಕ ಕ್ರಿಯೆ. ಆಹಾರ ದೇಹ ಪೋಷಣೆಗೆ ಮುಖ್ಯ. ಆದರೆ ಇದರ ಜೊತೆಯಲ್ಲಿ ಅಲೌಕಿಕ ಚಿಂತನೆಗಳು ಪುಷ್ಟಿಗೊಳ್ಳಬೇಕು. ಕಾಯ ಪೋಷಣೆಯೊಂದಿಗೆ ಆತ್ಮದ ಪೋಷಣೆಯು ಮುಖ್ಯವೆ. ಆ ಪೋಷಣೆಯಾಗಬೇಕಾದರೆ ಅಕ್ಕ ಹೇಳುವಂತೆ ನಮ್ಮೆಲ್ಲ ಆಮಿಷಗಳನ್ನು ಮನದಿಂದ ಅಳಿಸಿ ಆ ಭಗವಂತನನ್ನೆ ನಂಬಿ ನಮ್ಮ ಮನವನ್ನು ಅವನಲ್ಲೆ ಇಡಬೇಕು.

ಆಹಾರವೇ ಆರೋಗ್ಯಕ್ಕೂ ಅನಾರೋಗ್ಯಕ್ಕು ಮೂಲ. ಈ ವಚನವು ಅತಿ ಆಹಾರ ಸೇವನೆಯಿಂದಾಗುವ ಅವಘಡಗಳನ್ನು ತಿಳಿಸುತ್ತಿದೆ. ನಿದ್ರೆಯಿಲ್ಲದೆ ನೆಮ್ಮದಿ ಹಾಳಾಗುತ್ತದೆ. ಆತ್ಮವು ಕೂಡ ಅಶುದ್ಧವಾಗುತ್ತದೆ. ದೇಹ ನಿರೋಗಿಯಾದಲ್ಲಿ ಆತ್ಮವು ನಿರೋಗಿಯಾಗುತ್ತದೆ. ಅತಿ ಆಹಾರ ಸೇವನೆಯಿಂದ ತಾಮಸ ಗುಣಗಳು ಬೆಳೆಯುತ್ತವೆ. ಅಜ್ಞಾನ ಅವಿವೇಕಗಳು ವೃದ್ಧಿಸುತ್ತವೆ. ಹಾಗಾಗಿ ಅಕ್ಕನ ಆರೋಗ್ಯದ ಗುಟ್ಟು ಆಹಾರವ ಕಿರಿದು ಮಾಡಿರಣ್ಣಾ ಎಂಬುದೆ ಆಗಿದೆ.

ಮಿತ ಆಹಾರ ಸೇವನೆಯಿಂದ ಆಯುಷ್ಯ ವೃದ್ಧಿಸುತ್ತದೆ ಎಂಬ ವೈಜ್ಞಾನಿಕ ವಿಶ್ಲೇಷಣೆಯಿದೆ. ಶರಣರು ಆಹಾರ ತಯಾರಿಕೆಯ ಪದಾರ್ಥಗಳನ್ನು (ದವಸ ದಾನ್ಯ) ಪ್ರಸಾದ ಎಂದಿದ್ದಾರೆ. ಆಹಾರವನ್ನು ಪ್ರಸಾದವೆಂದೆ ಸ್ವೀಕರಿಸಬೇಕು. ಆಹಾರ ಸೇವನೆಗೂ ರೀತಿ ನೀತಿಗಳಿರುತ್ತವೆ. ಸಮಯವಲ್ಲದ ಸಮಯದಲ್ಲಿ ಆಹಾರ ಸೇವಿಸುವುದರಿಂದ ಶರೀರದೊಳಗೆ ಕೆಲವು ನಿಷೇಧಾತ್ಮಕ ಆಮ್ಲಗಳು ಉತ್ಪತ್ತಿಯಾಗುತ್ತವೆ. ಪಚನ ಕ್ರಿಯೆ ಸರಾಗವಾಗುವುದಿಲ್ಲ. ದೇಹಕ್ಕೆ ಎಷ್ಟು ಪೂರಕವೋ ಅಷ್ಟನ್ನು ಮಾತ್ರ ಸೇವಿಸಿದರೆ ಅನಾರೋಗ್ಯದ ತೊಂದರೆಯಿರುವುದಿಲ್ಲ. ಯಾವ ಬಗೆಯ ಆಹಾರವನ್ನಾದರೂ ತಿಂದು ಜೀರ್ಣಿಸಿಕೊಳ್ಳುವ ಶಕ್ತಿ ದೇಹ ರಚನೆಗಿದ್ದರೂ ಯಾವಾಗಲು ಮತ್ತು ಅತಿಯಾಗಿ ತಿನ್ನುವುದಂತು ತಪ್ಪು. ದೇಹಕ್ಕೆ ತೆಗೆದುಕೊಳ್ಳುವ ಆಹಾರದ ಪ್ರಮಾಣ ಮುಖ್ಯವಲ್ಲ. ಗುಣ ಮುಖ್ಯವೆಂಬುದನ್ನು ನಾವೆಲ್ಲರು ಅರಿತಿರಬೇಕು.

ಅಕ್ಕ ಹೇಳುವ ಕಾಯವಿಕಾರ ಮನೋವಿಕಾರ ಇಂದ್ರಿಯವಿಕಾರ ಭಾವವಿಕಾರ ವಾಯು ವಿಕಾರಗಳನ್ನು ಅಕ್ಕನ ವಚನದೊಂದಿಗೆ ವಿಜ್ಞಾನದ ಹಿನ್ನೆಲೆಯಲ್ಲಿ ನೋಡೋಣ.

ಇಂದ್ರಿಯ ವಿಕಾರಗಳು:–

ಇಂದ್ರಿಯಗಳೆಂದರೆ ಪಂಚೇಂದ್ರಿಯಗಳು. ಕಣ್ಣು, ಮೂಗು, ಕಿವಿ, ನಾಲಗೆ ಮತ್ತು ಚರ್ಮ. ಇವೆಲ್ಲವುಗಳಿಗೆ ಆಜ್ಞೆ ಮಾಡುವುದು ಮೆದುಳು. ಪಂಚೇಂದ್ರಿಯಗಳಿಗೂ ಮೆದುಳಿಗೂ ಅವಿನಾಭಾವ ಸಂಬಂಧವಿದೆ. ತಿನ್ನು, ನೋಡು, ಗ್ರಹಿಸು, ಮಾತನಾಡು, ಸ್ಪರ್ಶಿಸು ಈ ಪಂಚ ಕ್ರಿಯೆಗಳನ್ನು ಆದೇಶಿಸುವುದು ಅಥವಾ ನಿಯಂತ್ರಿಸುವುದು ನಮ್ಮ ಮೆದುಳು. ಮೆದುಳು ಮತ್ತು ಈ ಪಂಚೇಂದ್ರಿಯಗಳಲ್ಲಿ ಒಂದು ರೀತಿಯ ಭಾವೈಕ್ಯತೆಯನ್ನು ಕಾಣುತ್ತೇವೆ.

ಕಣ್ಣು ಕಂಡ ಕಂಡ ಆಹಾರವನ್ನೆಲ್ಲ ಬಯಸುತ್ತದೆ. ಬಯಸುವುದು ಮಾತ್ರ ನಮ್ಮ ಮನಸ್ಸೆ. ಒಳಿತು ಕೆಡುಕಿನ ಬಗ್ಗೆ ವಿವೇಚಿಸುವುದು ಮೆದುಳು. ಕಣ್ಣಿನ ನೋಟ ಸತ್ವಭರಿತ ಆಹಾರದೆಡೆ ಇರಬೇಕು. ಮೆದುಳಿನ ಆಜ್ಞೆಯನ್ನು ಕಣ್ಣು ಚಾಚೂ ತಪ್ಪದೆ ಪರಿಪಾಲಿಸಬೇಕು.

ಕಿವಿ ಗ್ರಹಣ ಶಕ್ತಿಯುಳ್ಳ ಅಂಗ. ಉತ್ತಮವಾದುದನ್ನು ಗ್ರಹಿಸುವ ಶಕ್ತಿ ಕಿವಿಗಿರಬೇಕು. ಕೆಲವರು ಆ ಆಹಾರ ಈ ಆಹಾರ ಮತ್ತೊಂದು ಮಗದೊಂದು ತುಂಬಾ ಚೆನ್ನಾಗಿರುತ್ತದೆಂದು ಹೇಳುವುದುಂಟು ಅಂತಹ ಸನ್ನಿವೇಶದಲ್ಲಿ ನಮ್ಮ ಆರೋಗ್ಯದ ದೃಷ್ಟಿಯಿಂದ ಒಳಿತನ್ನು ಮಾತ್ರ ಗ್ರಹಿಸಬೇಕು.

ನಾಲಗೆಯೆಂಬುದು ರಸೋತ್ಪತ್ತಿಯ ಅಂಗ. ಉಪ್ಪು ಹುಳಿ ಖಾರ, ಸಿಹಿ, ಕಹಿ, ಒಗರು, ಈ ಷಡ್ರಸಗಳ ಸೇವನೆಗೆ ಪೂರಕವಾಗಿ ವಾಸನೆಯನ್ನು ಇದು ಗ್ರಹಿಸುತ್ತದೆ. ನಾಲಗೆಯು ಖಾರದ ರಸೋತ್ಪತ್ತಿಯನ್ನು ಮಾಡುವುದಿಲ್ಲ. ಉಪ್ಪು ಹುಳಿ ಖಾರ ಕಹಿ ಒಗರನ್ನು ಮಾತ್ರ ರುಚಿಸುತ್ತದೆ. ಖಾರವೆಂಬುದು ನಾಲಗೆಯಲ್ಲಿಳಿದಾಗ ಅಲ್ಲಿ ಚರ್ಮ ಉದ್ರೇಕಗೊಂಡು ಮೆಣಸಿನಕಾಯಿಯ ಉರಿಯ ಗುಣ ನಮ್ಮ ಅನುಭವಕ್ಕೆ ಬರುತ್ತದೆ. ಇದಕ್ಕೆ ಉದಾಹರಣೆಯಾಗಿ ನೋಡುವುದಾದರೆ ಸಕ್ಕರೆ ಬೆಲ್ಲ ಬೇಳೆ ಇತರ ಪದಾರ್ಥಗಳನ್ನು ಹಿಡಿದಾಗ ನಮ್ಮ ಕೈ ಉರಿಯುವುದಿಲ್ಲ. ಅನುಭವಕ್ಕೆ ಬರುತ್ತದೆ. ಖಾರದ ಪುಡಿವಸ್ತು ನಮ್ಮ ದೇಹದ ಯಾವುದೇ ಭಾಗಕ್ಕೆ ಸೋಕಿದರೂ ಉರಿಯುವ ಅನುಭವವಾಗುತ್ತದೆ.

ಬಾಯಿಯ ಎರಡೂ ಬದಿಯ ವಸಡುಗಳಲ್ಲಿ ಜೊಲ್ಲುರಸ ಉತ್ಪತ್ತಿಯಾಗುತ್ತದೆ. ನಮ್ಮ ಬಾಯೊಳಗಿನ ಎರಡು ದವಡೆಗಳು ಅರೆಯುವ ಯಂತ್ರಗಳು. ದವಡೆಯ ಮೇಲೆ ಕುಳಿತ ಪದಾರ್ಥ ಅಲ್ಲಿ ಅಂಟಿದ್ದಲ್ಲಿ ನಮ್ಮ ನಾಲಗೆಯು ಕಲ್ಲುಗುಂಡು ಸುತ್ತುವಂತೆ ನಮ್ಮ ಬಾಯಿಯ ಸುತ್ತ ಸುತ್ತುತ್ತ ಹಲ್ಲಿಗೆ ಅಂಟಿದ ಬೇಡದ್ದನ್ನು ತೆಗೆದುಬಿಡುತ್ತದೆ.

ಮೂಗು ಇದೊಂದು ಆಘ್ರಾಣಕೇಂದ್ರ. ಮೂಗಿನ ಒಳಭಾಗದಲ್ಲಿ ಆಘ್ರಾಣ ಗೋಡೆಯಿದೆ. ನಾವು ಆಹಾರ ಸೇವಿಸಿದಾಗ ಇಲ್ಲಿ ಆಹಾರದ ಕಣಗಳ ಸಂವೇದನೆಯಿಂದ ರಸಾಂಕುರವಾಗುತ್ತದೆ. ನಾವು ಈ ಹಿಂದೆ ತಿಂದ ರುಚಿಯ ಆಘ್ರಾಣದಿಂದ ನಾಲಗೆಯಲ್ಲಿ ನೀರೂರುತ್ತದೆ. ಕಾರಣ ಈ ವೇಳೆಗೆ ನಮ್ಮ ಮೂಗು ಆ ವಾಸನೆಯನ್ನು ಗ್ರಹಿಸಿರುತ್ತದೆ. ನಮ್ಮ ಪರಿಚಿತ ಆಹಾರದ ವಾಸನೆ ಮಾತ್ರ ನಮ್ಮ ಮೂಗಿಗೆ ಬಡಿಯುತ್ತದೆಯೆ ಹೊರತು ನಮ್ಮ ಅನುಭವಕ್ಕೆ ಬಾರದ ರುಚಿ ನಾಲಗೆಯಲ್ಲಿ ಸ್ಪಂದಿಸುವುದಿಲ್ಲ. ಉದಾಹರಣೆಗೆ ಆಟ ಆಡುತ್ತಿರುವ ಯಾರಾದರೂ ಸೋತವರು ಗೆದ್ದವರಿಗೆ ಮಸಾಲ್ ದೋಸೆ ಮತ್ತು ಮೈಸೂರು ಪಾಕು ಕೊಡಿಸಬೇಕೆಂಬ ಷರತ್ತನ್ನು ವಿಧಿಸಿದ್ದರೆಂದು ಇಟ್ಟುಕೊಳ್ಳೋಣ. ಪಂದ್ಯದಲ್ಲಿ ಇನ್ನೇನು ನಾವೇ ಗೆಲ್ಲುತ್ತೇವೆಂದು ಗೊತ್ತಾದವರು ಸೋಲಿನ ಅಂಚಿನಲ್ಲಿರುವವರಿಗೆ ಹೀಗೆ ಹೇಳುತ್ತಾರೆ "ಆಹಾ ಮಸಾಲೆ ದೋಸೆ ಮತ್ತು ಮೈಸೂರು ಪಾಕ್ ವಾಸನೆ ಮೂಗಿಗೆ ಬಡಿಯುತ್ತಿದೆ" ಎನ್ನುತ್ತಾರಲ್ಲವೆ. ಇದರ ರುಚಿ ಈ ಹಿಂದೆ ಅವರ ನಾಲಗೆಗೆ ದಕ್ಕಿರುತ್ತದೆ. ಎಂದೆಂದೂ ಮಸಾಲೆ ದೋಸೆ ತಿನ್ನದವರ ನಾಲಗೆಗೆ ಅದರ ರುಚಿ ತಿಳಿದಿರುವುದಿಲ್ಲ. ರುಚಿಯೆನಿಸಿದ್ದನ್ನೆಲ್ಲಾ ತಿಂದರೆ ಆರೋಗ್ಯ ಕೆಡುತ್ತದೆ.

ಇನ್ನು ಚರ್ಮ. ಇದೊಂದು ಸ್ಪರ್ಶಾನುಭವವನ್ನು ನೀಡುವಂಥದ್ದು. ನಮಗೆ ಮೆದೋಜೀರಕ ಗ್ರಂಥಿಯಿಂದ ಬಿಡುಗಡೆಯಾಗುವ ಇನ್ಸುಲಿನ್ ಮತ್ತು ಗ್ಲುಕೊಗಾನ್ ಹಾರ್ಮೊನುಗಳು (ರಸಧೂತಗಳು) ಚರ್ಮದ ಅಡಿಭಾಗದಲ್ಲಿ ಕೊಬ್ಬನ್ನು ಉತ್ಪಾದಿಸಿ ದೇಹದ ಚಟುವಟಿಕೆಗಳನ್ನು ನಿಯಂತ್ರಿಸುತ್ತವೆ. ಚರ್ಮ ಕ್ರಿಯಾಶೀಲವಾಗಿರಲು ಇನ್ಸುಲಿನ್ ಮತ್ತು ಗ್ಲುಕೋನ್ ಸಹಕಾರಿ. ಇದು ನಮ್ಮ ಚರ್ಮಕ್ಕೆ ಶಕ್ತಿ ಕೊಡುತ್ತದೆ. ಇವು ಉತ್ಪತ್ತಿ ಮಾಡುವಲ್ಲಿ ಕೊಬ್ಬಿನ ಅಂಶ ಜಾಸ್ತಿಯಾದಾಗ ಚರ್ಮದ ಆರೋಗ್ಯ ಕೆಡುತ್ತೆ. ಕೊಬ್ಬಿನ ಅಂಶವನ್ನು ಹೆಚ್ಚಿಸುವ ಆಹಾರವನ್ನು ಸೇವಿಸಬಾರದು.

ನಮ್ಮ ಈ ಪಂಚೇಂದ್ರಿಯಗಳು ಅತಿಯಾದ ಆಹಾರ ಸೇವನೆಯಿಂದ ಅಶುದ್ಧಗೊಂಡು ಆರೋಗ್ಯ ಕೆಡುತ್ತದೆ. ಆಗ ಕಾಯವಿಕಾರಗಳು ಕಾಣಿಸಿಕೊಳ್ಳುತ್ತವೆ.

ಕಾಯವಿಕಾರಗಳು:–

ದೇಹದಲ್ಲಿ ಬೊಜ್ಜು ಬೆಳೆಯುತ್ತದೆ. ವಾಯುರೋಗ ಕಾಣಿಸಿಕೊಳ್ಳುತ್ತದೆ. ದೇಹದ ಅಂಗಾಂಗಳು ಹಿಂಡಿದಂತೆ ಭಾಸವಾಗುತ್ತದೆ. ನಮ್ಮ ಕೈ ಕಾಲುಗಳನ್ನು ಒತ್ತಿಸಿಕೊಳ್ಳೋಣ ಅನ್ನಿಸುತ್ತದೆ. ದೇಹದಲ್ಲಿ ಬೆಳೆದ ಬೊಜ್ಜು ಚರ್ಮದ ಬುಡದಲ್ಲಿ ಮಾತ್ರವಿರದೆ ಹೃದಯದ ಸ್ನಾಯುಗಳ ನಡುವೆ ಸಂಗ್ರಹವಾಗಿ ಹೃದಯದ ಕಾರ್ಯದಲ್ಲಿ ಏರುಪೇರಾಗುತ್ತದೆ. ಹೃದಯ ಸಂಬಂಧಿ ಖಾಯಿಲೆಯಿಂದ ಶ್ವಾಸದ ತೊಂದರೆಗಳು ಕಾಣಿಸಿಕೊಳ್ಳುತ್ತವೆ. ರಕ್ತದೊತ್ತಡ ಹೆಚ್ಚುತ್ತದೆ. ಇದರಿಂದ ಇತರ ಅಂಗಾಂಗಗಳು ಸೋಲಲು ಪ್ರಾರಂಭಿಸುತ್ತವೆ. ಕಣ್ಣು ದೃಷ್ಟಿ ಕಳೆದುಕೊಳ್ಳುತ್ತವೆ. ಮೂತ್ರಪಿಂಡಗಳು ಸರಿಯಾಗಿ ಕೆಲಸ ಮಾಡಲಾರವು. ಇಂತಹ ಸ್ಥಿತಿಯಲ್ಲಿ ನಮ್ಮ ದೇಹದ ಅಸ್ತಿತ್ವ ಉಳಿಯುವುದೆಂತು. ಹಾಗಾಗಿಯೆ ಅಕ್ಕ ಹೇಳುವಂತೆ "ಕಾಯದ ಅತಿ ಪೋಷಣೆ ಮೃತ್ಯುವೆಂದುದು ಈ ದೈಹಿಕ ತೊಂದರೆಗಳಲ್ಲಿ ಇನ್ನೂ ಅನೇಕ ರೀತಿಯವು ಇವೆ. 'ಸಂತೆಯೊಳಗೊಂದು ಮನೆಯ ಮಾಡಿ ಶಬ್ದಕೆ ನಾಚಿದೊಡೆಂತಯ್ಯಾ" ಎನ್ನುತ್ತಾಳೆ ಅಕ್ಕ. ನಮ್ಮ ದೇಹ ಪ್ರಕೃತಿಗನುಗುಣವಾಗಿ ಸಹಜವಾದ ಕೆಲವು ಕ್ರಿಯೆಗಳು ಜರುಗುತ್ತವೆ. ಹೊಟ್ಟೆ ತುಂಬಿದಾಗ ತೇಗುತ್ತೇವೆ. ನಿದ್ರೆ ಬಂದಾಗ ಆಕಳಿಸುತ್ತೇವೆ. ಒಳಗಿನ ಕೆಲವಂಶಗಳು ವಿಸರ್ಜನೆಯಾಗುತ್ತವೆ. ಇವುಗಳನ್ನು ಹೊರಹಾಕುವಾಗ ಅಂಜಿಕೆ ಅಳುಕು ಸಂಕೋಚ ಪಡಬಾರದು.

**(ಮುಂದಿನ ಸಂಚಿಕೆಯಲ್ಲಿ ಮುಂದುವರಿಯುವುದು...)**

## ಗುರುಗಾಂವ್ ಕನ್ನಡ ಸಂಘದಲ್ಲಿ ಯುಗಾದಿ ಸಾಂಸ್ಕೃತಿಕ ಮಿಲನ :

# ಯುಗಾದಿ ಹಬ್ಬವು ಎಲ್ಲರಲ್ಲೂ ಸಂಭ್ರಮ ತರಲಿ-ಡಿಸಿಪಿ. ಸುರೇಶ್



ಯುಗಾದಿ ಹಬ್ಬವು ಎಲ್ಲರ ಮನೆ ಮನಗಳಲ್ಲಿ ಸಂಭ್ರಮ ತರಲಿ, ತಾಯ್ನಾಡಿನಿಂದ ಬಹುದೂರವಿದ್ದು ನಮ್ಮ ಸಂಪದ್ಭರಿತ ಸಂಸ್ಕೃತಿಯನ್ನು ಮರೆಯದೇ ಅದರ ಭಾಗವಾಗಿಸಿಕೊಂಡು ಇಂತಹ ಸಂಸ್ಕೃತಿಯನ್ನು ನಮ್ಮ ಮುಂದಿನ ಪೀಳಿಗೆಗೆ ಪಸರಿಸುವ ಜೊತೆಗೆ ಪರಿಚಯಿಸುವ ನಿಟ್ಟಿನಲ್ಲಿ ಆಚರಿಸಲ್ಪಡುವ ಇಂತಹ ಹಬ್ಬ ಹರಿದಿನಗಳಿಂದ ಮಾತ್ರ ಸಾಧ್ಯ ಎಂದು ದೆಹಲಿ ಪೊಲೀಸಿನ ಭ್ರಷ್ಟಾಚಾರ ನಿಗ್ರಹ ದಳದ ಡಿಸಿಪಿ ಶ್ರೀ ಬಿ.ಎಲ್. ಸುರೇಶ್ ಅವರು ಹೇಳಿದರು. ಗುರುಗಾಂವ್ ಕನ್ನಡ ಸಂಘವು ಇದೇ ಏಪ್ರಿಲ್–03 ರಂದು ಗುರುಗಾಂವ್‌ನಲ್ಲಿ ಆಯೋಜಿಸಿದ್ದ ಯುಗಾದಿ ಸಾಂಸ್ಕೃತಿಕ ಮಿಲನ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಯುಗಾದಿ ಹಬ್ಬವನ್ನು ತಮ್ಮ ಬಾಲ್ಯದಲ್ಲಿ ತಮ್ಮ ಕುಟುಂಬದವರೊಂದಿಗೆ ಆಚರಿಸುತ್ತಿರುವ ಅಂದಿನ ಸಂಭ್ರಮ ಈ ಸಂದರ್ಭ ಅವರು ಮೆಲುಕು ಹಾಕಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಸಿ.ಎಂ. ನಾಗರಾಜ ಅವರು ಮಾತನಾಡಿ ಯುಗಾದಿಯ ಸಡಗರ ಸಂಭ್ರಮದಲ್ಲಿ ತಾವು ಭಾಗವಹಿಸಿರುವುದು ಖುಷಿಕೊಟ್ಟಿದೆ ಎಂದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಡಾ. ಎಂ.ಎಸ್. ಶಶಿಕುಮಾರ್, ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಶಾಂತಕುಮಾರ್ ನಿಂಬಾಳ, ಪ್ರಧಾನ ಕಾರ್ಯದರ್ಶಿ ಸಂತೋಷ ಜೆ ಅವರು ವೇದಿಕೆಯಲ್ಲಿದ್ದು ಮಾತನಾಡಿದರು.

ಡಿಸಿಪಿ ಬಿ.ಎಲ್. ಸುರೇಶ್ ಅವರು ದೀಪ ಬೆಳಗಿಸುವ ಮೂಲಕ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಸಂತೋಷ ಜೆ ಅವರು ಸ್ವಾಗತಿಸಿ, ವಂದಿಸಿದರು. ರಾಜಕುಮಾರ್ ನಿಲೂರ್ ನಿರೂಪಿಸಿದರು.

ಗುರುಗಾಂವ್ ಕನ್ನಡ ಸಂಘದ ಸದಸ್ಯರು ಹಾಗೂ ಅವರ ಮಕ್ಕಳು ಹಲವು ಬಗೆಯ ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ಮೂಲಕ ಪ್ರೇಕ್ಷಕರನ್ನು ರಂಜಿಸಿದರು.

ಹಾಸನದ ಶ್ರೀ ಕುಮಾರ್ ಕಟ್ಟೆಬೇಳಗುಳಿ ಜಾನಪದ ಗಾಯನ ತಂಡದಿಂದ ಜಾನಪದ ಗೀತಗಾಯನ ನಡೆದವು. ದಾವಣಗೆರೆಯ ಚಿರಂತನ ನೃತ್ಯ ಅಕಾಡಮಿ ಮತ್ತು ಮೈಸೂರಿನ ಭರತಾಂಜಲಿ ನೃತ್ಯ ತಂಡದ 30ಕ್ಕೂ ಹೆಚ್ಚು ಕಲಾವಿದರ ಮೂರು ತಂಡಗಳು ನಡೆಸಿಕೊಟ್ಟ ನೃತ್ಯ ಹಾಗೂ ಗಾಯನ ದೆಹಲಿ ಹಾಗೂ ರಾಷ್ಟ್ರದ ರಾಜಧಾನಿ ಪ್ರದೇಶದ ಸುತ್ತಲಿನ ನಗರದಿಂದ ಆಗಮಿಸಿದ್ದ ಕನ್ನಡಿಗರ ಮನರಂಜಿಸಿದವು.

ಸುಜಾತ ನಿಂಬಾಳ್ ಅವರು ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆ ಮಾಡಿದರು.

ತಾಯ್ನಾಡಿಗೆ ಮರಳುತ್ತಿರುವ ರಾಜೇಶ್ ದಂಪತಿ, ಕಿಶೋರ್ ಕುಮಾರ್ ಕೆ.ಸಿ. ದಂಪತಿ, ಗಜಾನನ ಶರ್ಮ ದಂಪತಿ, ರಘು ಸಿ.ವಿ., ನಾಗಪ್ಪ ಎಸ್., ಚನ್ನಣ್ಣಗೌಡ ಮತ್ತು ಶ್ಯಾಮ್ ಬಬ್ರೇಕರ್ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು.

ಬೆಂಗಳೂರಿನಿಂದ ಬಂದಿದ್ದ ಬಾಣಸಿಗರ ತಂಡದ ಕೈರುಚಿಯ ವಿವಿಧ ಖಾದ್ಯ ಸವಿಯುವ ಮೂಲಕ ಕಾರ್ಯಕ್ರಮದಲ್ಲಿ ಭಾಗಿಯಾದ ಕನ್ನಡಿಗರು ಆನಂದಿಸಿದರು. □

***ಸಂತೋಷ ಜೆ.***







# ಭಿವಾಡಿಯ ಹಿಲ್ ವ್ಯೂ ಗಾರ್ಡನ್, ಟ್ರೆಹಾನ್‌ನಲ್ಲಿ ಯುಗಾದಿ ಸಂಭ್ರಮ

ಏಪ್ರಿಲ್ 3, 2022 ರಂದು ಭಿವಾಡಿಯ ಹಿಲ್ ವ್ಯೂ ಗಾರ್ಡನ್, ಟ್ರೆಹಾನ್‌ನಲ್ಲಿ ಭಿವಾಡಿ ಕನ್ನಡ ಸಂಘದಿಂದ ಆಯೋಜಿಸಲ್ಪಟ್ಟ–ಯುಗಾದಿ ಸಂಭ್ರಮ 2022 ಕಾರ್ಯಕ್ರಮ ಅಲ್ಲಿ ಕಲೆತಿದ್ದ ಎಂಬತ್ತಕ್ಕೂ ಮಿಕ್ಕಿದ ಕನ್ನಡಾತ್ಮಗಳಿಗೆಲ್ಲಾ ತುಂಬಾ ಆಹ್ಲಾದಕರವಾದ ಅನುಭವ ತಂದಿತ್ತು.

ತುಂಬಾ ಸಮಯದಿಂದ ಸತತವಾಗಿ ಜಾಲತಾಣದ ಮುಖೇನವೇ ನಡೆಯುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳ ಸರಪಣಿಯಿಂದ ಮುಕ್ತಿ ಪಡೆದು ಮುಖತಃ ಎಲ್ಲರ ಜೊತೆ ಕಲೆಯುತ್ತಾ ಭೌತಿಕವಾಗಿ ಆಚರಿಸಲ್ಪಟ್ಟ ಚೊಚ್ಚಲ ಹಬ್ಬ ಇದಾಗಿತ್ತು.

ದಿಢೀರಾಗಿ ಆಯೋಜಿಸಲ್ಪಟ್ಟಿದ್ದ ಈ ಕಾರ್ಯಕ್ರಮದಲ್ಲಿ ನಿರೀಕ್ಷೆಗಿಂತ ಮಿಗಿಲಾಗಿ ದೂರದ ದೆಹಲಿಯಿಂದ ಮಾತ್ರವಲ್ಲದೆ, ರೇವಾಡಿ ಮತ್ತು ಅಲ್ವರ್‌ನಿಂದಲೂ ಕನ್ನಡಿಗರು ಬಂದು ಭಾಗವಹಿಸಿ ಪ್ರೋತ್ಸಾಹಿಸಿದ್ದರು. ಈ ಸಾಂಸ್ಕೃತಿಕ ಹಬ್ಬದಲ್ಲಿ ಅತಿಶಯ ಆನಂದ ನೀಡಿದ ವಿಚಾರವೆಂದರೆ, ಕಾರ್ಯಕ್ರಮದ ನಿರೂಪಣೆ ಹಾಗೂ ಹೆಚ್ಚಿನ ಪ್ರಸ್ತುತಿಗಳು ಮಕ್ಕಳ ಮುಂಚೂಣಿತನದಲ್ಲೇ ನಡೆದದ್ದು.

ಸುಮಾರು 10 ಮಂದಿ ಮಕ್ಕಳು ವಿವಿಧ ಬಗೆಯ ಹಾಡು, ನೃತ್ಯ ಮತ್ತು ಭಾಷಣ ಇತ್ಯಾದಿಗಳನ್ನು ನುರಿತ ಪುಟಾಣಿಗಳಾದ ಕುಮಾರ ಪ್ರಥಮ ಜೆ.ಎನ್. ಹಾಗೂ ಕುಮಾರಿ ಸಾಯಿಶ್ರೀ ದೇಸಾಯಿ ದ್ವಯರ ಚುರುಕಿನ ನಿರೂಪಣೆಯಲ್ಲಿ ಮನಮುಟ್ಟುವಂತೆ ನಡೆಸಿಕೊಟ್ಟಿದ್ದರು. ಉತ್ತಮ ಸಂಖ್ಯೆಯಲ್ಲಿ ಕನ್ನಡಿಗರು ಭಾಗವಹಿಸಿ ಪ್ರೋತ್ಸಾಹಿಸಿ ಕಾರ್ಯಕ್ರಮ ಚೆಂದಗಾಣಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಡಾ. ಪುರಷೋತ್ತಮ ಬಿಳಿಮಲೆಯವರು ಮನಮುಟ್ಟುವಂತೆ ಮಾತನಾಡುತ್ತಾ ಕನ್ನಡ ಭಾಷೆಯ ಬೆಳವಣಿಗೆಯ ಇತಿಹಾಸದಲ್ಲಿ ರನ್ನ, ಪೊನ್ನ, ಕುವೆಂಪು, ಮಾಸ್ತಿ ಇತ್ಯಾದಿ ವರಕವಿ ಸಾಹಿತಿಗಳ ಕೊಡುಗೆಯನ್ನು ನೆನೆದರು. ದೇಶದ ವಿವಿಧ ಭಾಗಗಳಲ್ಲಿ ಪಸರಿಸಿ, ಕನ್ನಡದ ಕಂಪನ್ನು ವಿಶಾಲವಾಗಿ ಹರಡುತ್ತಿರುವುದಕ್ಕಾಗಿ ಹೊರನಾಡಿನ ಕನ್ನಡಿಗರನ್ನು ವಿಶೇಷವಾಗಿ ಕೊಂಡಾಡಿದರು. ತ್ರಿಭಾಷಾ ಸೂತ್ರದ ಬಗ್ಗೆ ಪ್ರಸ್ತಾಪಿಸುತ್ತಾ ಅದನ್ನು ಒಪ್ಪಿದ ಕರ್ನಾಟಕ ಅಥವಾ ಒಪ್ಪದ ತಮಿಳುನಾಡು ಇವರಲ್ಲಿ ಯಾರಿಗೆ ಲಾಭ ಯಾ ನಷ್ಟ ಎಂಬ ಬಗ್ಗೆ ಸಮಗ್ರ ಚರ್ಚೆ ಅಗತ್ಯ ಹಾಗೂ ದೇಶಕ್ಕೆ ಒಂದು ಸಮಾನ್ಯ ಭಾಷಾ ನೀತಿಯೂಬೇಕಾಗಿದೆ ಎಂದು ಪ್ರತಿಪಾದಿಸಿದರು.

ಹಿರಿಕಿರಿಯರೆಲ್ಲರ ನೆಚ್ಚಿನ ಶ್ರೀ ಅರವಿಂದ ಬಿಜ್ಜೈ ಸರ್ ಅವರ ಒಲವಿನ ಹಿತನುಡಿಗಳು ಜೊತೆಗೆ ನಮ್ಮ ಸಂಘದ ಅಧ್ಯಕ್ಷರಾದ ಶ್ರೀ ಪ್ರಭು ಪಾಟೀಲ್ ಅವರ ಕನ್ನಡಾಭಿಮಾನವನ್ನು ಜಾಗೃತ ಗೊಳಿಸುವ ಆಹ್ವಾನ ನಮ್ಮೆಲ್ಲರನ್ನೂ ಕನ್ನಡ ಸಾರಸ್ವತ ಲೋಕಕ್ಕೆ ಕೊಂಡೊಯ್ದಿದ್ದವು.

ಸಭಾ ಕಾರ್ಯಕ್ರಮದ ಮಧ್ಯೆಯೇ ಭೂತಪೂರ್ವ ಶಿಕ್ಷಕಿ ಕು. ಮೇಘನಾ ಜೆ.ಎಚ್. ಅವರನ್ನು ಅಭಿನಂದಿಸಿದ್ದು ಮಾತ್ರವಲ್ಲದೆ, ಹೋಂಡಾ ಕಂಪೆನಿಯಲ್ಲಿ ಭಡ್ತಿ ಪಡೆದು ಬೆಂಗಳೂರಿಗೆ ತೆರಳುತ್ತಿರುವ ಮೂವರು ಕನ್ನಡಿಗ ಮಿತ್ರರಾದ ಶ್ರೀ ರಘು, ನಾಗಪ್ಪ ಹಾಗೂ ಚನ್ನಣ್ಣಗೌಡರಿಗೂ ವಿದಾಯ ಕೋರುತ್ತಾ ನೆನಪಿನ ಕಾಣಿಕೆಗಳನ್ನೂ ನೀಡಲಾಯಿತು.




ಅವರ ಮುಂದಿನ ಜೀವನಕ್ಕೆ ಶುಭ ಹಾರೈಸುತ್ತಾ ಅವರ ಜೊತೆ ನಮ್ಮ ಭಿವಾಡಿ ಕನ್ನಡ ಕಲಿಕಾ ಕೇಂದ್ರದ ಪ್ರಥಮ ಶಿಕ್ಷಕಿಯಾದ ಎಲ್ಲರ ನೆಚ್ಚಿನ ಶ್ರೀಮತಿ ಅರುಣಾ ನಾಗಪ್ಪ ಅವರನ್ನೂ ಬೀಳ್ಕೊಡುವುದು ಎಲ್ಲರಿಗೂ ದುಃಖದಾಯಕ ಅನುಭವವಾಗಿದ್ದರೂ ತಾಯ್ನಾಡಿಗೆ ತೆರಳುತ್ತಿರುವ ಅವರನ್ನೂ ತುಂಬುಹೃದಯದಿಂದ ಬೀಳ್ಕೊಡಲಾಯಿತು.

ಜೊತೆಗೆ ಈ ಹಿಂದೆ ಜಾಲತಾಣದ ಮೂಲಕ ಭಿವಾಡಿ ಕನ್ನಡ ಸಂಘ ಹಾಗೂ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ಆಯೋಜಿಸಿದ್ದ ಸ್ಪರ್ಧಾತ್ಮಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದ ಹಾಗೂ ಪ್ರಶಸ್ತಿ ವಿಜೇತ ಕಂದಮ್ಮಗಳಿಗೆಲ್ಲಾ ಪ್ರಮಾಣಪತ್ರಗಳನ್ನೂ ವಿತರಿಸಲಾಯಿತು.



ಚೊಕ್ಕವಾಗಿ ಅತಿಥಿಗಳ ಪರಿಚಯ ಮಾಡಿಕೊಟ್ಟ ಹಾಲೀ ಶಿಕ್ಷಕಿ ಶ್ರೀಮತಿ ವರ್ಷಾ ಕುಲಕರ್ಣಿ, ಪ್ರತಿಯೊಂದು ಹಂತದಲ್ಲೂ ಹೆಗಲೊಡ್ಡಿ ಕಾರ್ಯನಿರ್ವಹಿಸಿದ ಖಜಾಂಚಿ ಶ್ರೀ ಸೋಮನಿಂಗ್ ಕುರ್ಲೆ, ತಮ್ಮ ಮನೆಯ ಕಾರ್ಯಕ್ರಮವೇನೋ ಎಂಬಂತೆ ಆಸ್ಥೆಯಿಂದ ಎಲ್ಲಾ ಚಟುವಟಿಕೆಗಳಿಗೆ ಸಿದ್ಧಹಸ್ತರಾಗಿದ್ದ ಉಪಾಧ್ಯಕ್ಷೆ ಶ್ರೀಮತಿ ವೀಣಾ ದೇಸಾಯಿ ಮತ್ತು ವ್ಯವಸ್ಥಾಪಕ ಸಮಿತಿಯ ಸದಸ್ಯರಾದ ಶ್ರೀ ಶಶಿಧರ ದೇಸಾಯಿ, ಒಟ್ಟು ಕಾರ್ಯಕ್ರಮದ ರೂವಾರಿತನವನ್ನು ಚಾಕಚಕ್ಯತೆಯಿಂದ ನಿಭಾಯಿಸಿದ ಉಪಾಧ್ಯಕ್ಷ ಶ್ರೀ ಗೋಪಾಲಕೃಷ್ಣ ಭಟ್ ಮತ್ತು ಸುಲಲಿತವಾಗಿ ಸಭಾ ಕಾರ್ಯಕ್ರಮವನ್ನು ಪ್ರಸ್ತುತಪಡಿಸಿದ ಪ್ರಧಾನ ಕಾರ್ಯದರ್ಶಿ ಶ್ರೀ ನವೀನ ಜೆ.ಎಚ್. ಅವರೆಲ್ಲರ ಯೋಗದಾನ, ತೆರೆಮರೆಯ ಕಾಯಿಗಳಂತೆ ಅಹರ್ನಿಶಿ ಶ್ರಮಿಸಿದ ಇನ್ನಿತರ ಕಾರ್ಯಕರ್ತರೆಲ್ಲರ ಸಾಧನೆ ಶ್ಲಾಘನೀಯ.

ಕಾರ್ಯಕ್ರಮದ ಕೊನೆಗೆ ರುಚಿಯಾದ ಮೃಷ್ಟಾನ್ನ ಭೋಜನದೊಂದಿಗೆ ಎಲ್ಲರೂ ಯುಗಾದಿ ಹಬ್ಬವನ್ನು ಆಚರಿಸಿದ ಖುಷಿಪಟ್ಟಿದ್ದು ಆಯೋಜಕರಿಗೆಲ್ಲಾ ಸಫಲತಾ ಭಾವ ತರುವುದರ ಜೊತೆಗೆ ಮುಂದಿನ ಕಾರ್ಯಕ್ರಮ ಆಯೋಜಿಸುವಲ್ಲಿ ಕಾತರತೆಯನ್ನು ಸೃಷ್ಟಿಸಿತ್ತು. □

***ಗೋಪಾಲಕೃಷ್ಣ ಭಟ್***

## ದೆಹಲಿ ಘಟಕದ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ನೂತನ ಪದಾಧಿಕಾರಿಗಳ ಆಯ್ಕೆ

ದೆಹಲಿ ಘಟಕದ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಅರವಿಂದ ಬಿಜ್ಜೈ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಾಮಾನ್ಯ ಸಭೆಯಲ್ಲಿ 2022–23ರ ಅವಧಿಗೆ ಮಕ್ಕಳ ಪರಿಷತ್ತಿನ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಗೌರವ ಸಲಹೆಗಾರರು–ಡಾ. ಪುರುಷೋತ್ತಮ ಬಿಳಿಮಲೆ, ಎಸ್. ಕಷ್ಣ ಭಟ್, ಡಾ. ವೆಂಕಟಾಚಲ ಜಿ. ಹೆಗಡೆ, ಡಾ. ವಿಶ್ವನಾಥ, ವಸಂತ ಶೆಟ್ಟಿ ಬೆಳ್ಳಾರೆ, ಸಿ.ಎಂ. ನಾಗರಾಜ, ಸಂಚಾಲಕರು–ಕೃಷ್ಣರಾಜ್, ಎಂ. ಗೋಪಾಲಕೃಷ್ಣ ಭಟ್, ಗೌರವಾಧ್ಯಕ್ಷರು – ಜಯರಾಜ್ ಪಿ., ಅಧ್ಯಕ್ಷರು – ಅರವಿಂದ ಬಿಜ್ಜೈ, ಉಪಾಧ್ಯಕ್ಷರುಗಳು –ಮಾಲಿನಿ ಪ್ರಹ್ಲಾದ್, ಕೆ. ಎಸ್. ಮೂರ್ತಿ, ಪ್ರಧಾನ ಕಾರ್ಯದರ್ಶಿ–ರತ್ನ, ಗೌರವ ಖಜಾಂಚಿ –ರಾಮಚಂದ್ರ ಉಭಾಳೆ, ಜಂಟಿ ಕಾರ್ಯದರ್ಶಿ–ಸುಜಾತ ನಿಂಭಾಳ್, ಮಹಿಳಾ ಕಾರ್ಯದರ್ಶಿ–ಪೂರ್ಣಿಮಾ ಅಡಿಗ, ಸಂಘಟನಾ ಕಾರ್ಯದರ್ಶಿ–ಯಲ್ಲಾಲಿಂಗ ಕೊಪ್ಪದ, ಕಾರ್ಯಕಾರಿ ಸಮಿತಿ ಸದಸ್ಯರು–ಅಮರೇಶ, ನಾಗರಾಜ್ ಎಂ., ವಿಮಲಾ ರಂಗನಾಥ್, ನೇತ್ರಾ ಕುಮಾರ್ ಹಾಗೂ ವರ್ಷಾ ಕುಲಕರ್ಣಿ □

***ಅರವಿಂದ ಬಿಜ್ಜೈ***

# ದೆಹಲಿ ಕರ್ನಾಟಕ ಸಂಘದಲ್ಲಿ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 131 ನೇ ಜನ್ಮದಿನಾಚರಣೆ



ಡಾ. ಬಿ.ಆರ್. ಅಂಬೇಡ್ಕರ್ ಸಾಂಸ್ಕೃತಿಕ ಸ್ಫೂರ್ತಿ ಫೌಂಡೇಶನ್ ಹಾಗೂ ದೆಹಲಿ ಕರ್ನಾಟಕ ಸಂಘದ ಸಹಯೋಗದಲ್ಲಿ ಏಪ್ರಿಲ್ 14ರಂದು ಹಮ್ಮಿಕೊಂಡಿದ್ದ ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 131ನೇ ಜನ್ಮ ದಿನಾಚರಣೆಯಂದು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಆರ್. ರೇಣುಕುಮಾರ್ ಅವರು ಶಿಕ್ಷಣದಿಂದ ಮಾತ್ರ ಸಮಾಜದ ಬೆಳವಣಿಗೆ ಸಾಧ್ಯ ಎನ್ನುವುದು ಮಹಾಮಾನವತಾವಾದಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಆಶಯವಾಗಿತ್ತು. ಸುಶಿಕ್ಷಿತ–ಸಮಾನತೆಯ ಸಮಾಜಕ್ಕಾಗಿ ನಾವುಗಳು ಕೊಡುಗೆ ನೀಡಬೇಕಾದದ್ದು ನಮ್ಮೆಲ್ಲರ ಧರ್ಮ. ಜಾತಿ–ವರ್ಗರಹಿತ ಸಮಾಜದ ನಿರ್ವಹಣೆಗಾಗಿ ದುಡಿದು, ಮಾನವತೆಯ ಸಂದೇಶ ಸಾರಿದ ಬುದ್ಧ, ಬಸವಣ್ಣ ಹಾಗೂ ಅಂಬೇಡ್ಕರ್ ಅವರ ವಿಚಾರಧಾರೆಗಳು ಅಂದಿಗೂ ಇಂದಿಗೂ ಎಂದೆಂದಿಗೂ ಪ್ರಸ್ತುತ. ಜಗತ್ತಿನ ಬೃಹತ್ ಪ್ರಜಾಪ್ರಭುತ್ವ ಹೊಂದಿದ ನಮ್ಮ ದೇಶವು ತನ್ನ ಯಶಸ್ವಿ ಮುನ್ನಡೆಗೆ ಡಾ. ಬಿ.ಆರ್. ಅಂಬೇಡ್ಕರ್ ನೀಡಿದ ಸಂವಿಧಾನ ಪ್ರಮುಖ ಅಡಿಪಾಯವಾಗಿದೆ ದೆಹಲಿ ಕರ್ನಾಟಕ ಸಂಘವು ದೆಹಲಿಯಲ್ಲಿ ಸ್ಥಾಪಿತವಾದ ಇತರ ಕನ್ನಡ ಸಂಘ ಸಂಸ್ಥೆಗಳ ಮಾತೃ ಸಂಘವಾಗಿ ಗುರುತಿಸಿಕೊಂಡಿದೆ ಎಂದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷ ಡಾ. ಎಂ.ಎಸ್. ಶಶಿಕುಮಾರ್, ದೆಹಲಿ ಕನ್ನಡಿಗ ವಿ.ವಿ. ಬಿರಾದಾರ್, ನೀತಿ ಆಯೋಗದ ವಿಜ್ಞಾನ ಹಾಗೂ ತಂತ್ರಜ್ಞಾನದ ವಿಭಾಗದ ಉಪ ಸಲಹೆಗಾರರೂ ಆದ ಡಾ. ತ್ಯಾಗರಾಜು ಬಿ.ಎಂ. ಹಾಗೂ ಜನಕಪುರಿ ಕನ್ನಡ ಕೂಟದ ಅಧ್ಯಕ್ಷ ಎನ್.ಆರ್. ಶ್ರೀನಾಥ್‌ರವರು ಅಂಬೇಡ್ಕರ್ ಅವರ ತತ್ವಾದರ್ಶ ಕುರಿತು ಮಾತನಾಡಿದರು. ಡಾ. ಬಿ.ಆರ್. ಅಂಬೇಡ್ಕರ್ ಮಹಾನ್ ಚೇತನವನ್ನು ಸ್ಮರಿಸಿಕೊಳ್ಳಲು ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವ ಎಲ್ಲರನ್ನು ಶ್ಲಾಘಿಸಿದರು. ಸ್ಫೂರ್ತಿ ಸಾಂಸ್ಕೃತಿಕ ಫೌಂಡೇಶನ್ ಕ್ರಿಯಾಶೀಲ ಮನಸ್ಸುಗಳುಳ್ಳ ಸದಸ್ಯರಿಂದೊಳಗೊಂಡಿದೆ.

ಕಾರ್ಯಕ್ರಮದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ನೆರವೇರಿಸಿ, ದೀಪ ಬೆಳಗಿಸಿ ಪುಷ್ಪಾರ್ಚನೆ ಮಾಡಿ, ನಮನ ಸಲ್ಲಿಸಲಾಯಿತು. ಕರ್ನಾಟಕದಿಂದ ಆಗಮಿಸಿದ ಕರುಣಾ ಮುರಗೋಡ ಅವರಿಂದ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕುರಿತ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಿ. ಮೋಹನ್ ಕುಮಾರ್ ಅವರು ಪ್ರಾಸ್ತಾವಿಕ ನುಡಿಗಳನ್ನಾಡಿ, ಎಲ್ಲರನ್ನೂ ಈ ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಅಮರೇಶ ಅವರು ಕಾರ್ಯಕ್ರಮ ನಿರ್ವಹಿಸಿದರು. ಸ್ಫೂರ್ತಿ ಫೌಂಡೇಶನ್ನಿನ ಕಾರ್ಯದರ್ಶಿ ಎಸ್. ಕುಮಾರ್ ಅವರು ವಂದಿಸಿದರು.

ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು ಮತ್ತು ಸದಸ್ಯರು ಸೇರಿದಂತೆ ಅನೇಕ ದೆಹಲಿ ಕನ್ನಡಿಗರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಕರ್ನಾಟಕ ಭವನದಲ್ಲಿ ಭಾರತ ರತ್ನ, ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತಿ ಆಚರಣೆ



ನವದೆಹಲಿಯ ಕರ್ನಾಟಕ ಭವನದಲ್ಲಿ ಏಪ್ರಿಲ್ 14, 2022 ರಂದು ಭಾರತ ರತ್ನ, ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಅವರ 131ನೇ ಜಯಂತಿ ಆಚರಿಸಲಾಯಿತು.

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀಮತಿ ವಂದಿತಾ ಶರ್ಮಾ, ಆರ್ಥಿಕ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಶ್ರೀ ಐ.ಎಸ್. ಎನ್. ಪ್ರಸಾದ್, ವಾಣಿಜ್ಯ ಮತ್ತು ಕೈಗಾರಿಕಾ ಇಲಖೆಯ ಅಪರ ಮುಖ್ಯದರ್ಶಿಗಳಾದ ಡಾ. ಇ.ವಿ. ರಮಣರಡ್ಡಿ, ನವದೆಹಲಿಯ ಕರ್ನಾಟಕ ಭವನದ ನಿವಾಸಿ ಆಯುಕ್ತರಾದ ಶ್ರೀಮತಿ ಎಂ.ಇಮ್ ಕೊಂಗ್ಲ ಜಮೀರ್, ವಿಶೇಷ ನಿವಾಸಿ ಆಯುಕ್ತರಾದ ಶ್ರೀ ವಿಜಯ ರಂಜನ್ ಸಿಂಗ್, ಅಪರ ನಿವಾಸಿ ಆಯುಕ್ತರಾದ ಶ್ರೀಮತಿ ಆಕ್ರಿತಿ ಬನ್ಸಾಲ್ ಅವರು ಡಾ. ಬಿ.ಆರ್. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಪುಷ್ಪಾರ್ಚನೆ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ ಭವನದ ಉಪ ಸಮನ್ವಯಾಧಿಕಾರಿಗಳಾದ ಶಂಭುಲಿಂಗಪ್ಪ, ಆರ್. ರೇಣುಕುಮಾರ್, ದಿವಾಕರ್, ಸಹಾಯಕ ಸಮನ್ವಯಾಧಿಕಾರಿ ಪ್ರದೀಪ್, ಸಹಾಯಕ ಅಭಿಯಂತರರಾದ ಈಶ್ವರ ಕಟ್ಟಿಮನಿ, ಕಿರಿಯ ಅಭಿಯಂತರರಾದ ಶರತ್ ಕುಮಾರ್, ವ್ಯವಸ್ಥಾಪಕರಾದ ಕೆ.ಆರ್. ವೆಂಕಟೇಶ್, ಸಿ. ಮೋಹನ್ ಕುಮಾರ್, ಅನಂತ್, ಜಗದೀಶ್ ಸೇರಿದಂತೆ ಕರ್ನಾಟಕ ಭವನದ ಅಧಿಕಾರಿ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು. □

**ಅಭಿಮತ ವರದಿ**

# ಬಸವ ಇಂಟರ್ ನ್ಯಾಷನಲ್ ಸೆಂಟರ್ ಸಂಸ್ಥೆಯಿಂದ ಕನ್ನಡದ ಮೊದಲ ಕವಯತ್ರಿ ಅಕ್ಕಮಹಾದೇವಿ ಜಯಂತಿ ಆಚರಣೆ



ಕನ್ನಡದ ಮೊದಲ ಕವಯತ್ರಿ ಅಕ್ಕಮಹಾದೇವಿ ಅವರ ವಚನಗಳು ವಿಶಿಷ್ಟ ಜೀವನಾನುಭವದಿಂದ ಕೂಡಿರುವುದರಿಂದ ಕನ್ನಡ ಸಾಹಿತ್ಯದ ಮೌಲಿಕ ಬರವಣಿಗೆಗಳಾಗಿವೆ ಎಂದು ನವದೆಹಲಿಯ ದ್ವಾರಕದಲ್ಲಿರುವ ಬಸವ ಮಂಟಪದ ಪೂಜ್ಯ ಶ್ರೀ ಸರ್ವಮಂಗಳಾದೇವಿ ಮಾತೆ ಅಭಿಪ್ರಾಯಪಟ್ಟರು. ಅವರು ಇಲ್ಲಿನ ಲೋಧಿ ಎಸ್ಟೇಟ್‌ನಲ್ಲಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಬಸವ ಇಂಟರ್ ನ್ಯಾಷನಲ್ ಸೆಂಟರ್ ಸಂಸ್ಥೆ ಏಪ್ರಿಲ್ 16 ರಂದು ಆಯೋಜಿಸಿದ್ದ ಶಿವಶರಣೆ ಅಕ್ಕ ಮಹಾದೇವಿ ಅವರ ಜಯಂತಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು. ಮುತ್ತು ನೀರಿನಲ್ಲಿ ಕರಗದೇ ತನ್ನ ಹೊಳಪಿನಿಂದ ದೇದಿಪ್ಯಮಾನವಾಗಿ ಬೆಳಗುವಂತೆ, ನಮ್ಮ ಜೀವನವು ಮುತ್ತಿನಂತೆ ಪ್ರಕಾಶಮಾನವಾಗಿ ಜ್ಞಾನದಿಂದ ಬೆಳಗಬೇಕು. ಅಕ್ಕಮಹಾದೇವಿ ಅವರ ವಚನ ಸಾಹಿತ್ಯದಲ್ಲಿ ಭಕ್ತಿ,ವಿರಕ್ತಿ ಹಾಗೂ ಅನುಭಾವ ಅಂಶಗಳನ್ನು ಕಾಣುತ್ತೇವೆ. ಕಳೆದ ವರ್ಷ ಅಕ್ಕ ಮಹಾದೇವಿ ಜಯಂತಿಯನ್ನು ಆನ್‌ಲೈನ್ ಮೂಲಕ ಆಯೋಜಿಸಲಾಗಿದ್ದುದನ್ನು ಈ ಸಂದರ್ಭದಲ್ಲಿ ಅವರು ನೆನೆಪಿಸಿಕೊಂಡರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ವಸಂತ ಶೆಟ್ಟಿ ಬೆಳ್ಳಾರೆ ಅವರು ಮಾತನಾಡುತ್ತಾ, ಚೊಕ್ಕದಾದ ಈ ಕಾರ್ಯಕ್ರಮ ಆಯೋಜಿಸಿರುವ ಬಸವ ಇಂಟರ್ ನ್ಯಾಷನಲ್ ಸೆಂಟರ್ ಅವರಿಗೆ ಅಭಿನಂದನೆಗಳನ್ನು ಸಲ್ಲಿಸಿ ಜೀವನದಲ್ಲಿ ಬಸವ ಮತ್ತು ಅಕ್ಕಮಹಾದೇವಿ ತತ್ವಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಡಾ. ಅವನೀಂದ್ರನಾಥ ರಾವ್ ಅವರು ಮಾತನಾಡಿ, ಸ್ತ್ರೀ ಸಬಲೀಕರಣ ಪರಿಕಲ್ಪನೆ 12ನೇ ಶತಮಾನದ ಅಕ್ಕಮಹಾದೇವಿ ಅವರ ವಚನಗಳಲ್ಲಿ ಕಾಣಬಹುದಾಗಿದೆ. ಅಕ್ಕಮಹಾದೇವಿ ಅವರು ಸಾಮಾಜಿಕ ಬದಲಾವಣೆಗೆ ಶ್ರಮಿಸಿದವರು ಎಂದು ಹೇಳಿದರು. ಸುಮಾರು 430 ವಚನಗಳನ್ನು ರಚಿಸಿದ ಶಿವಶರಣೆ ಅಕ್ಕ ಮಹಾದೇವಿ ಅವರ ವಚನಗಳಲ್ಲಿ ಅನುಭವದ, ಸ್ವಾಭಿಮಾನದ ಅಭಿವ್ಯಕ್ತಿಯಿದ್ದು, ಆದರ ಪ್ರತೀಕವಾಗಿ, ಸ್ತ್ರೀವಾದದ ಚಳವಳಿಯ ನಿಜವಾದ ಪ್ರತಿಪಾದಕಿಯಾಗಿದ್ದರು ಎಂದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಮಾತನಾಡುತ್ತಾ, ಭಾರತೀಯ ಸಂಪ್ರದಾಯದಲ್ಲಿ ಸ್ತ್ರೀಯರಿಗೆ ಅಪಾರ ಗೌರವವಿದೆ. ಅಕ್ಕಮಹಾದೇವಿ ಅವರ ವಚನಗಳ ತತ್ವಾದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು. ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಶಾಂತಕುಮಾರ್ ನಿಂಬಾಳ್ ಮಾತಾನಾಡುತ್ತ, ನಾವು ವಚನಗಳನ್ನು ಜೀವನದಲ್ಲಿ ಅಳವಡಿಸಿಕೊಂಡಿದ್ದಾದರೆ ಬಹಳಷ್ಟು ಮಟ್ಟಿಗೆ ನಮ್ಮ ಜೀವನ ಸುಧಾರಣೆಯಾಗುತ್ತದೆ ಎಂದರು. ಈ ಕಾರ್ಯಕ್ರಮದಲ್ಲಿ ಅಕ್ಕಮಹಾದೇವಿ ಅವರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ದೀಪ ಬೆಳಗುವ ಮೂಲಕ ಕಾರ್ಯಕ್ರಮ ಪ್ರಾರಂಭವಾಯಿತು.

ದೆಹಲಿ ಕನ್ನಡ ಶಿಕ್ಷಣ ಶಾಲೆಯ ಕನ್ನಡ ಶಿಕ್ಷಕ ಅರವಿಂದ ಬಿಜ್ಜೈ ಅವರು 'ಬೆಟ್ಟದ ಮೇಲೊಂದು ಮನೆಯ ಮಾಡಿ' ವಚನ ಗಾಯನ ಮಾಡಿದರು. ದೆಹಲಿಯ ರಾಷ್ಟ್ರೀಯ ಮಾಹಿತಿ ಕೇಂದ್ರ (NIC) ದಲ್ಲಿ ತಾಂತ್ರಿಕ ನಿರ್ದೇಶಕರಾಗಿ ದೆಹಲಿಯಲ್ಲಿ ಕಾರ್ಯನಿರ್ವಹಿಸಿ, ವರ್ಗಾವಣೆಯ ನಿಮಿತ್ತ ತಾಯ್ನಾಡಿಗೆ ಮರಳುತ್ತಿರುವ ಶ್ರೀ ಜಗದೀಶ ಬಂಗಾರಿ ಅವರನ್ನು ಈ ಸಂದರ್ಭದಲ್ಲಿ ಆತ್ಮೀಯವಾಗಿ ಬೀಳ್ಕೊಡಲಾಯಿತು. ಇವರು ಬಸವ ಇಂಟರ್ ನ್ಯಾಷನಲ್ ಸೆಂಟರ್ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿದ್ದಾರೆ ಎಂದು ವಿ.ವಿ. ಬಿರಾದಾರ್ ಹೇಳಿದರು. ಜಗದೀಶ ಬಂಗಾರಿಯವರು ಮಾತನಾಡಿ, ಇಂತಹ ಮಹನೀಯರ ಜಯಂತಿ ಆಚರಣೆ ಮಾಡುವ ಮೂಲಕ ಅವರ ತತ್ವಗಳನ್ನು ಪಾಲನೆ ಮಾಡುವುದರ ಜೊತೆಗೆ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು. ಇದೇ ಸಂದರ್ಭದಲ್ಲಿ ಚೌಕೀಮಠ, ಎನ್.ಎ. ಮಾಧವ, ಮಂಜುನಾಥ, ದೆಹಲಿ ಕನ್ನಡ ಶಾಲೆಯ ಪ್ರಾಂಶುಪಾಲ ಪ್ರಶಾಂತ ಕುಮಾರ್ ಅವರು ಮಾತನಾಡಿದರು.

ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ನವೀನ ಕುಮಾರ್ ವಿ ಅವರು ಅಕ್ಕ ಮಹಾದೇವಿ ಅವರ ವಚನ ವಾಚಿಸಿ ಸಭೀಕರ ಪ್ರಶಂಸೆಗೆ ಪಾತ್ರರಾದರು. ಕರುಣಾ ಮುರಗೋಡ ಅವರು ಅಕ್ಕಮಹಾದೇವಿ ಅವರ ವಚನಗಾಯನ ಸುಮಧುರವಾಗಿ ಪ್ರಸ್ತುತಪಡಿಸಿ ಸಭೀಕರ ಮನಗೆದ್ದರು. ಬಸವ ಇಂಟರ್ ನ್ಯಾಷನಲ್ ಸೆಂಟರ್ ಉಪಾಧ್ಯಕ್ಷ ಮತ್ತು ಆಯೋಜಕರಾದ ಶ್ರೀ ವಿ.ವಿ. ಬಿರಾದರ ಅವರು ಎಲ್ಲರನ್ನೂ ಸ್ವಾಗತಿಸಿ, ಕಾರ್ಯಕ್ರಮವನ್ನು ಅಂದವಾಗಿ ನಿರೂಪಿಸಿದರು. ದೆಹಲಿಯ ಸಕ್ರಿಯ ಕನ್ನಡಿಗರಾದ ಹರಿಪ್ರಿಯ ಎಸ್ ಅವರು ವಂದಿಸಿದರು.

ಈ ಕಾರ್ಯಕ್ರಮದಲ್ಲಿ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಸದಸ್ಯರುಗಳು ಮತ್ತು ಪದಾಧಿಕಾರಿಗಳು ಹಾಗೂ ಉತ್ತಮ ಸಂಖ್ಯೆಯಲ್ಲಿ ದೆಹಲಿ ಕನ್ನಡಿಗರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

***ಅಭಿಮತ ವರದಿ***

# ದಾಸಿಮಯ್ಯ, ಅಕ್ಕ ಹಾಗೂ ಡಾ. ಅಂಬೇಡ್ಕರ್ ಜಯಂತಿ ಪ್ರಯುಕ್ತ ದೆಹಲಿ ಪ್ರದೇಶ ಶರಣ ಸಾಹಿತ್ಯ ಪರಿಷತ್‌ನಿಂದ ಆನ್‌ಲೈನ್ ಉಪನ್ಯಾಸ

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕ ದಿನಾಂಕ 29.04.2022 ರಂದು ಆದ್ಯ ವಚನಕಾರ ಜೇಡರ ದಾಸಿಮಯ್ಯ ಹಾಗೂ ಶಿವಶರಣೆ ಅಕ್ಕ ಮಹಾದೇವಿ ಹಾಗೂ ಸಂವಿಧಾನ ಶಿಲ್ಪಿ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ಅಂಗವಾಗಿ ಆಯೋಜಿಸಿದ್ದ 'ಅಕ್ಕನ ವಚನಗಳಲ್ಲಿ ವೈಜ್ಞಾನಿಕ ಚಿಂತನೆ' ವಿಷಯ ಕುರಿತ ಆನ್ಲೈನ್ ಉಪನ್ಯಾಸ ಕಾರ್ಯಕ್ರಮದಲ್ಲಿ ಕದಳಿ ಮಹಿಳಾ ವೇದಿಕೆಯ ರಾಜ್ಯ ಸಂಚಾಲಕರಾದ ಶ್ರೀಮತಿ ಸುಶೀಲಾ ಸೋಮಶೇಖರ್ ಅವರು ವಿಚಾರ ಮಂಡನೆ ಮಾಡಿದರು.

'ಲೋಕದಾ ಚೇಷ್ಟೆಗೆ ರವಿ ಬೀಜವಾದಂತೆ, ಈಳೆ ನಿಂಬೆ ಮಾವು ಮಾದಲಕೆ ಹುಳಿ ನೀರನೆರೆದವರಾರಯ್ಯ, ಅಕ್ಕನ ಆರೋಗ್ಯ ಧರ್ಮ' 'ಆಹಾರವ ಕಿರಿದು ಮಾಡಿರಣ್ಣಾ ಆಹಾರವ ಕಿರಿದು ಮಾಡಿ' 'ಮುತ್ತು ನೀರಲ್ಲಾಯಿತ್ತು, ವಾರಿಕಲ್ಲು ನೀರಲ್ಲಾಯಿತ್ತು ಉಪ್ಪು ನೀರಲ್ಲಾಯಿತ್ತು' ಪ್ರಕೃತಿಯ ಭಿನ್ನತೆಯಲ್ಲಿ ಏಕತೆಯನ್ನು ಕಂಡಿದ್ದಾಳೆ ಅಕ್ಕ. ವೈಜ್ಞಾನಿಕ ಕಲಾತ್ಮಕತೆ ಮೇಳೈಸಿದೆ. ವಚನದ ಕಡೆಯಲ್ಲಿ ಇವಳ ಮತ್ತು ಚೆನ್ನಮಲ್ಲಿಕಾರ್ಜುನನೊಂದಿಗಿನ ಇವಳ ಭಕ್ತಿ ಮೇಳೈಸಿದೆ. ಅಕ್ಕ ಈ ವಚನದಲ್ಲಿ ಪಂಚ ಭೂತಗಳ ಪ್ರಾಮುಖ್ಯತೆಯನ್ನು ಕುರಿತು ಹೇಳಿದ್ದಾಳೆ. ಅವುಗಳೆ ನೀರು, ಭೂಮಿ ಆಕಾಶ, ಅಗ್ನಿ, ವಾಯು. ಮಣ್ಣೆ ಇಲ್ಲದ ನೀರು ಗಾಳಿ ಬೆಳಕಿಲ್ಲದ ಜಗತ್ತನ್ನು ಊಹಿಸಿಕೊಳ್ಳಲು ಅಸಾಧ್ಯ. ನಮ್ಮ ಜಾನಪದ ಮಹಿಳೆಯು ಈ ಭೂಮಿಯ ಬಗ್ಗೆ ಭಕ್ತಿ ಅಭಿಮಾನ ಹೊಂದಿದವಳು. ಹಾಗಾಗಿಯೇ ಭೂಮಿಯನ್ನು ಕುರಿತು ಹೀಗೆ ಹೇಳುತ್ತಾಳೆ "ಮಣ್ಣನ್ನು ನಂಬಿ ನಾ ಮಣ್ಣಿಂದ ಬದುಕೇನು । ಮಣ್ಣು ಎನಗೆ ಹೊನ್ನು ಅಣ್ಣಯ್ಯ। ಮಣ್ಣೆ ಲೋಕದಲಿ ಬೆಲೆಯಾದ್ದು ಎನ್ನುತ್ತಾಳೆ". ಮೊದಲಾದ ಅನೇಕ ವಚನಗಳ ಮೂಲಕ ಪ್ರಕೃತಿಯ ವೈಚಿತ್ರ್ಯ ಹಾಗೂ ಮನುಷ್ಯ ಜೀವನದಲ್ಲಿ ಪ್ರಕೃತಿಯ ಪ್ರಭಾವವನ್ನು ಅಕ್ಕ ಮಹಾವಿಯವರು ವ್ಯಕ್ತಪಡಿಸಿರುವ ಬಗೆಯನ್ನು ಅತ್ಯಂತ ಹೃದಯಂಗಮವಾಗಿ ವಿವರಿಸಿದರು.

ಬಸವಣ್ಣ ಮತ್ತು ಅಂಬೇಡ್ಕರ್ ಅವರ ದೃಷ್ಟಿಯಲ್ಲಿ ದುಡಿಮೆ ಮತ್ತು ದುಡಿಮೆಗಾರರು ಎಂಬ ವಿಷಯ ಕುರಿತು ಮಾತನಾಡಿದ ದೆಹಲಿಯ ಕಮಲಾ ನೆಹರು ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಡಾ. ರಮೇಶ್ ಆರೋಲಿ ಅವರು ಬಸವಣ್ಣ ಹಾಗೂ ಡಾ. ಅಂಬೇಡ್ಕರ್ ಇಬ್ಬರೂ ತಾವು ಹುಟ್ಟಿದ ಧರ್ಮದ ಒಳಗಿನ ತರಮಗಳನ್ನು ಪ್ರಶ್ನಿಸಿ ಹೊರಬಂದು ಬೇರೊಂದು ಧರ್ಮಮಾರ್ಗದಲ್ಲಿ ನಡೆದರು. ಅಲ್ಲದೇ ಇಬ್ಬರೂ ಮಂತ್ರಿಗಳಾಗಿದ್ದುದರಿಂದ ಉತ್ಪನ್ನಗಳ ಉತ್ಪಾದನೆಗೆ ಸಂಬಂಧಿಸಿದಂತೆ ದುಡಿಮೆಗಾರರು ಮತ್ತು ದುಡಿಯುವ ವ್ಯವಸ್ಥೆಯೊಳಗಿನ ಸುಧಾರಣೆಗೆ ಪ್ರಯತ್ನಿಸಿದರು. ಬಸವಣ್ಣನವರು ಎಲ್ಲ ಕಾಯಕಗಳಿಗೂ ಗೌರವ ದೊರಕಿಸಲು ಶ್ರಮಿಸಿದರು. ಹಾಗೆಯೆ ಅಂಬೇಡ್ಕರ್ ಅವರು ಹಲವಾರು ಕಾನೂನುಗಳನ್ನು ಜಾರಿಗೆ ತಂದು ಆ ಮೂಲಕ ಶ್ರಮಿಕ ವರ್ಗದ ಕೆಲಸದ ಅವಧಿ ಹಾಗೂ ಇನ್ನಿತರ ಸವಲತ್ತುಗಳನ್ನು ಒದಗಿಸಲು ಅವಿರತವಾಗಿ ಶ್ರಮಿಸಿದರು.

ಶ್ರೀಮತಿ ಮೈಥಿಲಿ ಅಟ್ಟಾವರ್ ಅಧ್ಯಕ್ಷತೆ ವಹಿಸಿದ್ದರು. ದೆಹಲಿಯ ಸ್ಥಳೀಯ ಮಹಿಳೆಯರಾದ ಶ್ರೀಮತಿ ಶಾಂತಲಾ ಕಿರಣ್, ಶ್ರೀಮತಿ ಉಮಾ ಶ್ರೀನಿವಾಸ್ ವಚನ ಗಾಯನ ಮಾಡಿದರು. ಮಕ್ಕಳಾದ ಸುಮಂತ್ ಆಚಾರ್ಯ, ಸಮರ್ಥ್ ಸಂಗೊಂದಿ ಮಠ, ಮಂಥನ್ ಗಂಟಿ, ಕುಮಾರಿ ಸುಷ್ಮಾ ನಿಂಬಾಳ್, ಆದ್ಯ ಹಿರೇಮಠ, ಅದಿತಿ ಹಿರೇಮಠ, ಹರ್ಷಿತ ಉಭಾಳೆ ವಚನ ವಾಚನ ಮಾಡಿದರು.

ಶ್ರೀಮತಿ ಶುಭಾದೇವಿ ಪ್ರಸಾದ್ ವಚನ ಪ್ರಾರ್ಥನೆ ಮೂಲಕ ಕಾರ್ಯಕ್ರಮಕ್ಕೆ ಶುಭಾರಂಭ ನೀಡಿದರು. ಕಾರ್ಯಕ್ರಮದಲ್ಲಿ ಇಟಲಿಯ ಕನ್ನಡ ಸಂಘದ ಅಧ್ಯಕ್ಷ ಶ್ರೀ ಹೇಮೇಗೌಡ ರುದ್ರಪ್ಪ ಹಾಗೂ ಇಟಲಿಯ ಕನ್ನಡ ಲೇಖಕಿ ಶ್ರೀಮತಿ ಜಯಾಮೂರ್ತಿ ಅವರು ಹೊರನಾಡಿನಲ್ಲಿದ್ದುಕೊಂಡು ತಾವು ಮಾಡುತ್ತಿರುವ ಕನ್ನಡ ಕಾರ್ಯಕ್ರಮಗಳ ಕುರಿತು ಹೆಮ್ಮೆಯಿಂದ ಮಾತನಾಡಿದರು. ಡಾ. ಸುಮನ್ ಸಾಲಿಮಠ, ಶ್ರೀಮತಿ ಜಯಶ್ರೀ ಬಸವರಾಜು, ಹೇಮಶ್ರೀ ಚಂದ್ರಶೇಖರ್, ಶ್ರೀ ರಾಜಕುಮಾರ್ ನೀಲೂರ ಅವರು ಅತಿಥಿ ಪರಿಚಯ ಮಾಡಿಕೊಟ್ಟರು.

ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಪ್ರದೇಶ ಘಟಕದ ಅಧ್ಯಕ್ಷರಾದ ಶ್ರೀ ಚಂದ್ರಶೇಖರ ಎನ್.ಪಿ. ಅವರು ಕಾರ್ಯಕ್ರಮದ ನಿರ್ವಹಣೆ ಮಾಡಿದರು. ಘಟಕದ ಖಜಾಂಚಿ ಶ್ರೀ ಶಿವಪ್ಪ ಅವರು ಸ್ವಾಗತಿಸಿದರು ಮತ್ತು ಉಪಾಧ್ಯಕ್ಷರಾದ ಶ್ರೀ ಪ್ರಭು ಪಾಟೀಲ್ ವಂದಿಸಿದರು.

***ಶಿವಪ್ಪ ಎಂ.***

# ದೆಹಲಿ ಕನ್ನಡ ಶಾಲೆಗೆ ಇತ್ತೀಚೆಗೆ ನೇಮಕಗೊಂಡ ಅಭ್ಯರ್ಥಿಗಳ ಪರಿಚಯ



**ಸೌಮ್ಯ ಎನ್.ಎಂ.**

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಉಪ ಪ್ರಾಂಶುಪಾಲರಾಗಿ ಶ್ರೀಮತಿ ಸೌಮ್ಯ ಎನ್.ಎಂ. ಅವರು ನೇಮಕಗೊಂಡಿರುತ್ತಾರೆ. ಮೂಲತಃ ಕೊಡುಗು ಜಿಲ್ಲೆಯ ಭಾಗಮಂಡಲದವರಾದ ಇವರು ಬಿಇ (ಕಂಪ್ಯೂಟರ್ ಇಂಜಿನಿಯರಿಂಗ್) ಪದವೀಧರರಾಗಿದ್ದು, ಇದೇ ಶಾಲೆಯಲ್ಲಿ 2001 ರಿಂದ ಇಂಜಿನಿಯರಿಂಗ್ ಡ್ರಾಯಿಂಗ್ ಉಪನ್ಯಾಸಕಿಯಾಗಿ ಸೇವೆ ಸಲ್ಲಿಸಿದ್ದಾರೆ.



**ನಾಗರಾಜ್ ಎಂ.**

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲದವರಾದ ಶ್ರೀ ನಾಗರಾಜ್ ಎಂ. ಅವರು ಜನವರಿ 31, 2022ರಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾಗಿ ಸೇವೆಗೆ ಸೇರಿದ್ದಾರೆ. ತಮ್ಮ ಪದವಿ ಶಿಕ್ಷಣವನ್ನು ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಪೂರೈಸಿ ನಂತರ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ರಾಜ್ಯಶಾಸ್ತ್ರ ವಿಷಯದಲ್ಲಿ ಪ್ರಥಮ ರ್‍ಯಾಂಕ್ ಮತ್ತು B.Ed ಪದವಿಯನ್ನು ವಿಶಿಷ್ಟ ಶ್ರೇಣಿಯಲ್ಲಿ ತೇರ್ಗಡೆಯಾಗಿರುವರಲ್ಲದೆ, ರಾಜ್ಯ ಉಪನ್ಯಾಸಕ ಅರ್ಹತಾ ಪರೀಕ್ಷೆ (SLET) ಹಾಗೂ ರಾಷ್ಟ್ರೀಯ ಉಪನ್ಯಾಸಕರ ಪರೀಕ್ಷೆ (NET) ಯಲ್ಲಿಯೂ ಉತ್ತೀರ್ಣರಾಗಿರುತ್ತಾರೆ

ಮಂಗಳೂರಿನ ಮೆಡಲಿನ್ ಪದವಿ ಪೂರ್ವ ಕಾಲೇಜು, ಸರಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಹಾಗೂ ಪ್ರತಿಷ್ಠಿತ ಆಳ್ವಾಸ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿ ಅನುಭವವನ್ನು ಹೊಂದಿ ಆಳ್ವಾಸ್ ಕಾಲೇಜಿನಲ್ಲಿ ಉಪನ್ಯಾಸಕ ವೃತ್ತಿಯೊಂದಿಗೆ ಎನ್.ಸಿ.ಸಿ. ನೌಕಾದಳದಲ್ಲಿ ಸಬ್‌ಲೆಫ್ಟಿನೆಂಟ್ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದಲ್ಲದೆ, ಅವರ ಈ ಸಮಗ್ರ ಸಾಧನೆಗೆ ಡೈರೆಕ್ಟರ್ ಜನರಲ್ ಆಫ್ NCC ನವದೆಹಲಿಯಿಂದ ರಾಷ್ಟ್ರಮಟ್ಟದಲ್ಲಿ ಕಂಚಿನ ಪದಕವನ್ನು ಪಡೆದಿರುತ್ತಾರೆ. NCC ನೌಕಾದಳದ ಅಧಿಕಾರಿಯಾಗಿ, ಮಾನವಿಕ ಪೋರಂನ ಸಂಯೋಜಕರಾಗಿ ಹಲವಾರು ಶೈಕ್ಷಣಿಕ ಕಾರ್ಯಕ್ರಮಗಳನ್ನು ಸಂಯೋಜಿಸಿದ ಅನುಭವವನ್ನು ಹೊಂದಿರುತ್ತಾರೆ. ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ವಿಚಾರಗೋಷ್ಠಿಯಲ್ಲಿ ಭಾಗವಹಿಸಿ ಪ್ರಬಂಧವನ್ನು ಮಂಡಿಸಿರುತ್ತಾರೆ. ಈಜು, ಚೆಸ್ ಹಾಗೂ ಚಾರಣವು ಇವರ ಆಸಕ್ತಿಯ ವಿಷಯಗಳಾಗಿದೆ.



**ಎನ್. ಪೂರ್ಣಿಮಾ**

ಫೆಬ್ರವರಿ 3, 2022ರಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಸಹಶಿಕ್ಷಕಿಯಾಗಿ ಸೇವೆಗೆ ಸೇರಿರುವ ಎನ್. ಪೂರ್ಣಿಮಾ ಅವರು ನವದೆಹಲಿಯ ಶಂಕರ ವಿದ್ಯಾಕೇಂದ್ರದಲ್ಲಿ ಅರ್ಚಕರಾದ ಶ್ರೀ ನಾಗರಾಜ ಅಡಿಗ ಮತ್ತು ಶ್ರೀಮತಿ ಸುಕನ್ಯಾ ಅವರ ಸುಪುತ್ರಿ. ಇವರು ಬೆಳೆದದ್ದು ದೆಹಲಿಯಲ್ಲಿಯಾದರೂ ಹುಟ್ಟೂರು ಶಿವಮೊಗ್ಗ. ಕರ್ನಾಟಕದ ಮೇಲಿನ ಪ್ರೀತಿ ಮತ್ತು ಅಲ್ಲಿನ ಸಂಸ್ಕೃತಿ ಇವರನ್ನು ನಮ್ಮ ಶಾಲೆಗೆ ಸೆಳೆಯಿತು. ಇವರು ದೆಹಲಿ ವಿಶ್ವವಿದ್ಯಾನಿಲಯದ ಲೇಡಿ ಇರ್ವಿನ್ ಕಾಲೇಜಿನಲ್ಲಿ B.Ed ಶಿಕ್ಷಣವನ್ನು ಪಡೆದರು ಮತ್ತು ದೆಹಲಿ ವಿಶ್ವವಿದ್ಯಾಲಯದ ಇನ್ಸ್ಟಿಟ್ಯೂಟ್ ಆಫ್ ಹೋಮ್ ಎಕನಾಮಿಕ್ಸ್‌ನಿಂದ ಬಿ.ಎಸ್ಸಿ ಹೋಮ್ ಸೈನ್ಸ್‌ನಲ್ಲಿ ಪದವಿ ಪಡೆದರು. 2021ರಲ್ಲಿ ಇವರು ಕೇಂದ್ರ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ್ದಾರೆ. ಅವರು SOCH ಫೌಂಡೇಶನ್ ಸರ್ಕಾರೇತರ ಸಂಸ್ಥೆಯಲ್ಲಿ ಕಲಿಕಾ ನ್ಯೂನತೆ ಇರುವ ಮಕ್ಕಳಿಗೆ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ನುರಿತರಾದ ಇವರು ಹಲವು ವೇದಿಕೆಗಳಲ್ಲಿ ಪ್ರದರ್ಶನ ನೀಡಿದ್ದಾರಲ್ಲದೆ, ಅಂತರ ಕಾಲೇಜು ಸಂಗೀತ ಸ್ಪರ್ಧೆಗಳಲ್ಲಿಯೂ ಬಹುಮಾನಗಳನ್ನು ಗೆದ್ದಿದ್ದಾರೆ. ಅವರು ದೆಹಲಿ ಕರ್ನಾಟಕ ಸಂಘದಲ್ಲಿ ವಿವಿಧ ಸಂದರ್ಭಗಳಲ್ಲಿ ಪ್ರದರ್ಶನ ನೀಡಿ ದೆಹಲಿ ಕನ್ನಡಿಗರಿಗೆ ಚಿರಪರಿಚಿತರಾಗಿದ್ದಾರೆ.



**ಸುನೀತಾ ಎನ್. ಜೆ.**

ಶ್ರೀಮತಿ ಸುನೀತಾ ಎನ್. ಜೆ. ಅವರು ಫೆಬ್ರವರಿ 3, 2022ರಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಸಹಶಿಕ್ಷಕಿಯಾಗಿ ಸೇವೆಗೆ ಸೇರಿದ್ದು ಇವರು ಮೂಲತಃ ದಕ್ಷಿಣ ಕನ್ನಡ

ಜಿಲ್ಲೆಯ ಸುಳ್ಯ ತಾಲೂಕಿನವರು. ಇವರ ತಂದೆ ಜನಾರ್ಧನ ನಾಯ್ಕ ಹಾಗೂ ತಾಯಿ ಶ್ರೀಮತಿ ಕುಸುಮ. ಪದವಿ ಶಿಕ್ಷಣವನ್ನು ಬೆಳ್ತಂಗಡಿಯ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪೂರೈಸಿ ಮೈಸೂರು ಮುಕ್ತ ವಿಶ್ವವಿದ್ಯಾನಿಲಯದಲ್ಲಿ M.Com ಪದವಿ ಹಾಗೂ ಬೆಂಗಳೂರಿನ ಧನ್ವಂತರಿ ಕಾಲೇಜಿನಲ್ಲಿ B.Ed ಪದವಿಯನ್ನು ಪಡೆದಿರುತ್ತಾರೆ. 2019ರಲ್ಲಿ ಕೇಂದ್ರ ಶಿಕ್ಷಕರ ಅರ್ಹತಾ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದು ಸರಕಾರಿ ಪ್ರೌಢಶಾಲೆ ಆಲೆಟ್ಟಿಯಲ್ಲಿ ಕಂಪ್ಯೂಟರ್ ಶಿಕ್ಷಕಿಯಾಗಿ ಹಾಗೂ ಎನ್.ಜಿ.ಎಂ. ಪ್ರೌಢಶಾಲೆ ಮಲೆನಾಡು ಕೊಡಿಯಾಲ್‌ಬೈಲ್ ಇಲ್ಲಿ ಸಹಶಿಕ್ಷಕಿಯಾಗಿ ಸೇವೆ ಸಲ್ಲಿಸಿದ ಅನುಭವವನ್ನು ಹೊಂದಿರುತ್ತಾರೆ. ಚಿತ್ರಕಲೆ, ಕ್ರೀಡೆಯಲ್ಲಿ ಆಸಕ್ತರಾಗಿರುವ ಇವರು ಸಂಗೀತದಲ್ಲಿ ಜೂನಿಯರ್ ಹಂತವನ್ನು ಮುಗಿಸಿರುತ್ತಾರೆ.



**ಮೋಹನ್**

ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿಯವರಾದ ಶ್ರೀ ಮೋಹನ್ ಅವರು ಜನವರಿ 31, 2022ರಂದು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯಲ್ಲಿ ಹೆಡ್ ಕ್ಲರ್ಕ್ ಆಗಿ ಸೇವೆಗೆ ಸೇರಿರುತ್ತಾರೆ. ಶ್ರೀ ಸುಂದರ ಗೌಡ ಹಾಗೂ ಶ್ರೀಮತಿ ಸುಂದರಿ ಅವರ ಸುಪುತ್ರರಾದ ಇವರು ತಮ್ಮ ಪದವಿ ಶಿಕ್ಷಣವನ್ನು ಮಡಂತ್ಯಾರಿನ ಸೇಕ್ರೆಡ್ ಹಾರ್ಟ್ ಕಾಲೇಜಿನಲ್ಲಿ ಪೂರೈಸಿ, ಮಂಗಳೂರು ವಿಶ್ವವಿದ್ಯಾನಿಲಯದಿಂದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮ ವಿಷಯದಲ್ಲಿ ಸ್ನಾತಕೋತ್ತರ ಪದವಿ ಗಳಿಸಿದ್ದಾರೆ. ಕುವೆಂಪು ವಿಶ್ವವಿದ್ಯಾಲಯದಿಂದ ದೂರ ಶಿಕ್ಷಣದ ಮೂಲಕ ಎಂ.ಎ. ಪದವಿಯನ್ನು ಪೂರೈಸಿದ್ದು, ಕನ್ನಡದ ಪ್ರಮುಖ ದಿನಪತ್ರಿಕೆಗಳಾದ ಪ್ರಜಾವಾಣಿ, ಕನ್ನಡಪ್ರಭದಲ್ಲಿ ಕೆಲಸ ಮಾಡಿರುವ ಅನುಭವ ಹೊಂದಿದ್ದಾರೆ. ಕೇಂದ್ರ ಸರ್ಕಾರದ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ Electronic Media Monitoring Center (EMMC), New Delhi ಯಲ್ಲಿ Media Monitor ಆಗಿ ಕಾರ್ಯ ನಿರ್ವಹಿಸಿದ ಇವರು ಕ್ರೀಡೆ, ಪ್ರವಾಸ ಮತ್ತಿತರ ಚಟುವಟಿಕೆಗಳಲ್ಲಿ ಆಸಕ್ತಿ ಹೊಂದಿದ್ದಾರೆ. ಮಂಗಳೂರು ವಿಶ್ವವಿದ್ಯಾನಿಲಯದ ಸಮೂಹ ಸಂವಹನ ಮತ್ತು ಪತ್ರಿಕೋದ್ಯಮದ ವಿಭಾಗದ Communication Club ನಲ್ಲಿ ಖಜಾಂಚಿಯಾಗಿ ಕಾರ್ಯ ನಿರ್ವಹಿಸಿರುವ ಅನುಭವ. Corporate Communication ವಿಷಯದಲ್ಲಿ ಅತಿ ಹೆಚ್ಚು ಅಂಕ ಗಳಿಕೆಗಾಗಿ Public Relations Society of India (PRSI) ನೀಡುವ ನಗದು ಬಹುಮಾನ ಪಡೆದಿದ್ದಾರೆ.

# ದೆಹಲಿ ಕನ್ನಡ ಶಾಲೆಯ ಕಾರ್ಯಕ್ರಮಗಳು

## ವಿಶ್ವ ಪುಸ್ತಕ ದಿನಾಚರಣೆ

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ವಿಶ್ವಪುಸ್ತಕ ದಿನಾಚರಣೆ ಕಾರ್ಯಕ್ರಮವನ್ನು ಇತ್ತೀಚೆಗೆ ಶಾಲೆಯ ವಿಚಾರ ಸಂಕಿರಣ ಭವನದಲ್ಲಿ ಆಯೋಜಿಸಲಾಗಿತ್ತು.

ದೀಪ ಪ್ರಜ್ವಲಿಸಿ, ಪುಸ್ತಕ ಪ್ರದರ್ಶನದಲ್ಲಿದ್ದ ಒಂದು ಕೃತಿಯನ್ನು ಆಯ್ದು ಅದರ ಎರಡು ಸಾಲುಗಳನ್ನು ಓದುವ ಮೂಲಕ ಕಾರ್ಯಕ್ರಮವನ್ನು ವಿನೂತನವಾಗಿ ಉದ್ಘಾಟಿಸಿ ಮಾತನಾಡಿದ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಗೌರವ ವ್ಯವಸ್ಥಾಪಕರಾದ ಡಾ. ಎಂ.ಎಸ್. ಶಶಿಕುಮಾರ್ ಅವರು ಮಾತನಾಡಿ ಮಕ್ಕಳಲ್ಲಿ ಸೃಜನಶೀಲತೆಯನ್ನು, ಹೊಸ ಆಲೋಚನೆಯನ್ನು, ಮುಖ್ಯವಾಗಿ ತಾಳ್ಮೆಯನ್ನು ಬೆಳೆಸುವಲ್ಲಿ ಪುಸ್ತಕದ ಪಾತ್ರ ಮಹತ್ತರವಾದುದು. ಆಧುನಿಕ ತಂತ್ರಜ್ಞಾನದ ಜೊತೆಗೆ ಸಾಮಾಜಿಕ ಜಾಲತಾಣಗಳ ಅಬ್ಬರಗಳ ನಡುವೆ ಇಂದು ಓದುವ ಮನಸ್ಸುಗಳು ಕ್ಷೀಣವಾಗುತ್ತಿವೆ. ಪೋಷಕರು, ಶಿಕ್ಷಕರು ಮಕ್ಕಳ ಬೌದ್ಧಿಕ ಸಾಮರ್ಥ್ಯಕ್ಕೆ ನಿಲುಕುವ ಪುಸ್ತಕಗಳನ್ನು ಒದಗಿಸಿ ಓದುವ ಆಸಕ್ತಿಯನ್ನು ಅವರಲ್ಲಿ ಬೆಳೆಸಬೇಕು. ಇಂದು ಈ ಕಾರ್ಯಕ್ರಮದಲ್ಲಿ ಮಕ್ಕಳು ತಮ್ಮ ಮೆಚ್ಚಿನ ಪುಸ್ತಕದ ಕುರಿತಾಗಿ ವಿಚಾರವನ್ನು ಮಂಡಿಸುತ್ತಿರುವುದು ನಿಜಕ್ಕೂ ಪ್ರಶಂಸಾರ್ಹವಾದ ಕಾರ್ಯ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾದ ಸಿಟಿಜನ್ ಇಂಡಿಯಾ ಗ್ರೂಪ್‌ನ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿಯಾದ ಶ್ರೀಮತಿ ಸ್ವಾತಿ ಚಂದ್ರಶೇಖರ್ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತ ಬಾಲ್ಯದಲ್ಲಿ ನಾವೆಲ್ಲರೂ ಪುಸ್ತಕಗಳು ಎಂದರೆ ಕೇವಲ ಪಠ್ಯಪುಸ್ತಕಗಳು ಎಂಬ ಕಲ್ಪನೆಯಲ್ಲಿ ಬೆಳೆದವರು. ಆದರೆ ಪುಸ್ತಕ ಪ್ರಪಂಚದ ವಿಸ್ತಾರತೆ ಅಗಾಧವಾದುದು. ಸಾಮಾಜಿಕ ಜಾಲತಾಣಗಳನ್ನೇ ಮನರಂಜನೆ ಎಂದು ಭ್ರಮಿಸಿ ಮೈಮರೆವ ಈ ಕಾಲದಲ್ಲಿ ಪುಸ್ತಕದ ಕುರಿತಾಗಿಯೇ ಒಂದು ಕಾರ್ಯಕ್ರಮವನ್ನು ಆಯೋಜಿಸಿ ಅದರಲ್ಲಿ ವಿದ್ಯಾರ್ಥಿಗಳೆಲ್ಲರೂ ಪಾಲ್ಗೊಂಡು ಪುಸ್ತಕ ದಿನಾಚರಣೆಯನ್ನು ಆಚರಿಸುತ್ತಿರುವುದು ಅನುಕರಣೀಯ. ವಿದೇಶದಲ್ಲಿ ವಾರಾಂತ್ಯವನ್ನು ಪುಸ್ತಕವನ್ನು ಓದುವುದರ ಮೂಲಕ ಕಳೆಯುತ್ತಾರೆ. ಆ ಮೂಲಕ ತಮ್ಮ ಅಂತರಿಕ ಬೆಳವಣಿಗೆಗೆ ಒತ್ತು ನೀಡುತ್ತಾರೆ. ವಿದ್ಯಾರ್ಥಿಗಳು ಪುಸ್ತಕಗಳನ್ನು ಓದುವ ಅಭಿರುಚಿಯನ್ನು ಎಳೆ ವಯಸ್ಸಿನಲ್ಲಿಯೇ ಬೆಳೆಸಿಕೊಳ್ಳಬೇಕು. ಯಾವುದಾದರೂ ಆಗಲಿ ಕೈಗೆ ಸಿಕ್ಕಿದ ಒಂದು ಪುಸ್ತಕವನ್ನು ಓದಿ, ಅದು ಮುಂದೆ ಅನೇಕ ಪುಸ್ತಕಗಳನ್ನು ಓದುವಂತೆ ಪ್ರೇರೆಪಿಸುತ್ತದೆ. ಪುಸ್ತಕವು ಜ್ಞಾನದೊಂದಿಗೆ ಜಂಜಾಟವಿಲ್ಲದ ಸಾಮ್ಯತೆಯ ಬದುಕು ನಡೆಸಲು ಅನುವು ಮಾಡಿಕೊಡುತ್ತದೆ ಎಂದು ಹೇಳಿದರು.

ವಿದ್ಯಾರ್ಥಿಗಳಾದ ಅಭಿಷೇಕ್ ಉಭಾಳೆ, ಸುಮಂತ್ ಆಚಾರ್ಯ, ಮಧುಸೂದನ್, ಪ್ರೇಮ್ ಲದ್ದೆ, ಕಾವ್ಯಾಂಶ್, ಜಯಶ್ರೀ, ಶ್ರೇಯಾಶ್ರೀ, ವೀರ್ ನರಶೆಟ್ಟಿ ಅವರು ತಮ್ಮ ಮೆಚ್ಚಿನ ಪುಸ್ತಕದ ಬಗ್ಗೆ ವಿಚಾರಗಳನ್ನು ಪ್ರಸ್ತುತಪಡಿಸಿದರು.

ಕ್ರಿಸ್ಟಲ್ ಲಿಮಿಟೆಡ್ ಕಂಪೆನಿಯ ಸಂಶೋಧನಾ ವಿಭಾಗದ ಅಧ್ಯಕ್ಷರಾದ ಕೆ.ಎಸ್. ತ್ಯಾಗರಾಜನ್ ಗೌರವ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಶಾಲಾ ಉಪ ಪ್ರಾಂಶುಪಾಲರಾದ ಸೌಮ್ಯ ಎನ್. ಎಂ., ವಿದ್ಯಾರ್ಥಿಗಳು, ಶಿಕ್ಷಕ ವೃಂದ ಹಾಗೂ ಪೋಷಕರು ಉಪಸ್ಥಿತರಿದ್ದರು. ಶಿಕ್ಷಕರಾದ ಲಾವಣ್ಯ ಎಂ.ಎಸ್. ಪ್ರಾರ್ಥನಾ ಗೀತೆಯನ್ನು ಪ್ರಸ್ತುತಪಡಿಸಿದರು. ಶಾಲಾ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಅರವಿಂದ ಬಿಜ್ಜೈ ವಂದಿಸಿದರು. ಜ್ಯೋತಿ ಎಸ್. ಪೊದ್ದಾರ್ ಕಾರ್ಯಕ್ರಮ ನಿರೂಪಿಸಿದರು. ನಾಗರಾಜ ಎಂ. ಸಹಕರಿಸಿದರು.

## ಡಿವಿಜಿ ನೆನಪು

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವತಿಯಿಂದ ಪತ್ರಕರ್ತ, ಸಾಹಿತಿ, ದಾರ್ಶನಿಕ, ಆಧುನಿಕ ಸರ್ವಜ್ಞ ಎಂದೇ ಪ್ರಸಿದ್ಧರಾದ ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ ಅವರ ಕುರಿತಾದ ಡಿವಿಜಿ ನೆನಪು ಕಾರ್ಯಕ್ರಮವನ್ನು ಏಪ್ರಿಲ್ 12, 2022 ರಂದು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾದ ಸಮಾಜ ಸೇವಕರ ಸಮಿತಿ ಬೆಂಗಳೂರು ಇದರ ಸದಸ್ಯರಾದ ಶ್ರೀ ರಾಘವೇಂದ್ರ ಬಿ. ಅಗರಖೇಡ ಅವರು ಮಕ್ಕಳನ್ನುದ್ದೇಶಿಸಿ ಮಾತನಾಡುತ್ತಾ ಎಂದಿಗೂ ಪ್ರಚಾರವನ್ನು, ಪ್ರಶಸ್ತಿಯನ್ನು ಬಯಸದ ಅಪರೂಪದ ಸಾಹಿತಿ ಡಿವಿಜಿ ಅವರು. ನಾವೆಲ್ಲರೂ ಡಿವಿಜಿ ಅವರನ್ನು ಮಂಕುತಿಮ್ಮನ ಕಗ್ಗಕ್ಕೆ ಸೀಮಿತಗೊಳಿಸಿದ್ದೇವೆ. ಇದನ್ನು ಬಿಟ್ಟು ಅವರ ಕಾರ್ಯಗಳು ಇನ್ನೂ ಅನೇಕವಿದೆ. ಮೂಲತಃ ಪತ್ರಕರ್ತರಾಗಿದ್ದ ಅವರು ಬದುಕಿನ ಬಗ್ಗೆ ಧನಾತ್ಮಕ ಚಿಂತನೆಯನ್ನು ಹೊಂದಿದ್ದವರು. ಆಧುನಿಕ ಜೀವನಕ್ಕೆ ಬೇಕಾದ ಮೌಲ್ಯಗಳು ಡಿವಿಜಿ ಅವರ ಕೃತಿಗಳಲ್ಲಿವೆ. ಸಾರ್ವಜನಿಕ ಸೇವೆಯಿಂದ ಜನರ ಪ್ರೀತಿಯನ್ನು ಗಳಿಸಿಕೊಂಡವರು. ನಮ್ಮ ಬದುಕು ಸಾರ್ಥಕವಾಗಬೇಕಾದರೆ ನಮಗೆ ಒಂದು ಒಳ್ಳೆಯ ಗುರಿ ಇರಬೇಕೆಂದು ಜೊತೆಗೆ ಅದರ ದಾರಿಯೂ ತಿಳಿದಿರಬೇಕೆಂದು ನಂಬಿದವರು ಡಿವಿಜಿ. ವಿದ್ಯಾರ್ಥಿಗಳಾದ ತಾವೆಲ್ಲರೂ ಇಂತಹ ಮಹಾನ್ ಸಾಧಕರ ಜೀವನ ಚರಿತ್ರೆಯನ್ನು ಓದಬೇಕು. ಜೀವಿತದ ಬೆಳಕಿನ ಜೊತೆಗೆ ನೆರಳನ್ನು ನೋಡಬೇಕು. ಒಳ್ಳೆಯದರ ಬಗ್ಗೆ ಎಂದಿಗೂ ನಂಬಿಕೆಯನ್ನು ಕಳೆದುಕೊಳ್ಳಬಾರದು ಎಂದು ಹೇಳಿದರು. ಬಳಿಕ ವಿದ್ಯಾರ್ಥಿಗಳು ಅತಿಥಿಗಳೊಂದಿಗೆ ಡಿವಿಜಿ ಅವರ ಬದುಕು ಬರಹದ ವಿಚಾರಗಳ ಕುರಿತಾಗಿ ಸಂವಾದವನ್ನು ನಡೆಸಿದರು.

ವಿದ್ಯಾರ್ಥಿಗಳಾದ ಜೈನಬ್, ಹರ್ಷಿತಾ ಉಭಾಳೆ, ವಿಧಿ ಕೊಠಾರಿ, ಕೀರ್ತನ್ ಪಿ., ನಂದಿತಾ ಉಭಾಳೆ, ಯಶಿಕಾ, ಪೂರ್ವಿಕಾ ಗೌಡ, ಮೊಹಮ್ಮದ್ ಸಾಹಿಲ್, ಸಾತ್ವಿಕ್ ಎಚ್. ತೇಲಿ, ಧೀರನ್, ವೈಭವ್ ಪಾಂಡೆ, ವಾಣಿ, ಶಿಖಾ ಘಾಳೆ, ಕಾವ್ಯಾಂಶ್ ಪಿ., ಸನ್ವಿತ್ ಸುವರ್ಣ, ಪ್ರೇಮ್ ಲದ್ದೆ, ಸುಮಂತ್ ಆಚಾರ್ಯ, ಜಯಶ್ರೀ, ಶ್ರೇಯಾಶ್ರೀ, ಕವನ, ಭುವನ್ ಸೂರಜ್, ಉತ್ಸವ್, ಈಶಾ ಗಂಗ್ವಾಲ್, ದೀಕ್ಷಾ ನೇಗಿ, ಕಶಿಶ್ ವೇದ್ ಮಂಕುತಿಮ್ಮನ ಕಗ್ಗವನ್ನು ಪ್ರಸ್ತುತಪಡಿಸಿದರು. ಇದೇ ಸಂದರ್ಭದಲ್ಲಿ ಡಿವಿಜಿ ಅವರ ವ್ಯಕ್ತಿಚಿತ್ರ ಕುರಿತಾದ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು.

ಕಾರ್ಯಕ್ರಮದಲ್ಲಿ ಸಮಾಜ ಸೇವಕರ ಸಮಿತಿ ಸದಸ್ಯರಾದ ರಾಜ್ ಕುಮಾರ್ ಎಚ್., ಹಿರಿಯ ರಂಗಕರ್ಮಿ ಶಿವಾನಂದ ಇಂಗಳೇಶ್ವರ, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯ ಗೌರವ ಕಾರ್ಯದರ್ಶಿ ಡಾ. ಎಂ. ಎಸ್. ಶಶಿಕುಮಾರ್, ಸದಸ್ಯರಾದ ಮಾಲಿನಿ ಪ್ರಹ್ಲಾದ್, ಜಯಶ್ರೀ ಬಸವರಾಜು, ವಿದ್ಯಾರ್ಥಿಗಳು, ಶಿಕ್ಷಕ ವೃಂದ ಹಾಗೂ ಪೋಷಕರು ಉಪಸ್ಥಿತರಿದ್ದರು. ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ವಿದ್ಯಾರ್ಥಿಗಳು ಡಿವಿಜಿ ಅವರ ವನಸುಮದೊಳೆನ್ನ ಪ್ರಾರ್ಥನಾ ಗೀತೆಯನ್ನು ಪ್ರಸ್ತುತಪಡಿಸಿದರು. ಶಾಲಾ ಪ್ರಾಂಶುಪಾಲರಾದ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಶಿಕ್ಷಕರಾದ ಜ್ಯೋತಿ ಎಸ್. ಪೊದ್ದಾರ್ ಅತಿಥಿಗಳನ್ನು ಪರಿಚಯಿಸಿದರು. ಅರವಿಂದ ಬಿಜ್ಜೈ ವಂದಿಸಿದರು. ಸುನೀತಾ ಎನ್. ಜೆ. ಕಾರ್ಯಕ್ರಮ ನಿರೂಪಿಸಿದರು. ನಾಗರಾಜ ಎಂ. ಸಹಕರಿಸಿದರು.

***ಅರವಿಂದ ಬಿಜ್ಜೈ***



## ಸುಧಾಕರ ಬಿ. ಕುರಂದವಾಡ ನಿಧನ

ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಮಾಜಿ ಸದಸ್ಯರಾದ ಶ್ರೀ ಸುಧಾಕರ ಬಿ. ಕುರಂದವಾಡ ಅವರು ದಿನಾಂಕ 03.04.2022 ರಂದು ನಿಧನರಾಗಿದ್ದಾರೆಂದು ತಿಳಿಸಲು ವಿಷಾದಿಸುತ್ತೇವೆ.

ಶ್ರೀಯುತರ ಆತ್ಮಕ್ಕೆ ಮೋಕ್ಷ ಸಿಗಲಿ ಮತ್ತು ಅವರ ಕುಟುಂಬಕ್ಕೆ ಅವರ ಅಗಲಿಕೆಯ ದು:ಖವನ್ನು ಸಹಿಸುವ ಶಕ್ತಿಯನ್ನು ಭಗವಂತನು ಕರುಣಿಸಲೆಂದು ದೆಹಲಿ ಕರ್ನಾಟಕ ಸಂಘ ಪ್ರಾರ್ಥಿಸುತ್ತದೆ.

## ಶ್ರದ್ಧಾಂಜಲಿ

# ನೆನಪು ಮಾತ್ರವಾದ ಸುಧಾಕರ ಬಿ. ಕುರಂದವಾಡ

ಹುಟ್ಟುವುದು–ಸಾಯುವುದು
ಸಾಯುವುದು ಹುಟ್ಟುವುದು
ಅರ್ಥವಾಗದು ನನಗೆ ಈ ದೊಂಬರಾಟ
ಹುಟ್ಟು–ಸಾವಿನ, ನಡುವೆ–ಸಾವು ಹುಟ್ಟಿನ ನಡುವೆ
ಅರ್ಥವಾಯಿತು ನನಗೆ ಇದು ದೇವರಾಟ!

ದೇವರಾಟದ ಈ ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ ಎಂಬಂತೆ ಶ್ರೀ ಕುರಂದವಾಡ ಏಪ್ರಿಲ್ 3, 2022ರಂದು ಮುಂಬೈಯಿಂದ ತಮ್ಮ ಇಹಲೋಕದ ಪಯಣ ಬೆಳೆಸಿದರು. ನನ್ನ ದೆಹಲಿಯ ಬದುಕಿನ ಹಾದಿಯನ್ನು ತೋರಿಸಿದ ನನ್ನ ಚಿಕ್ಕಪ್ಪ ಶ್ರೀ ಎಸ್.ಬಿ. ಕುರಂದವಾಡ ಹಾಗೂ ನನ್ನ ದೆಹಲಿಯ ಕನ್ನಡದ ರಾಜಕೀಯ ಬದುಕಿನ ಹಾದಿಗೆ ತಿರುವನ್ನು ಸೂಚಿಸಿದ ನನ್ನ ದಿವಂಗತ ಸೋದರ ಮಾವ ಡಾ. ಮುರಲೀಧರ ಮುಧೋಳ. ನನ್ನ ದೆಹಲಿಯ ಬದುಕಿನ ಎರಡು ಕೊನೆಯ ಕೊಂಡಿಗಳು ಎಂದು ಹೇಳಲು ವಿಷಾದವೆನಿಸಿದರೂ ಸತ್ಯ. ಏಕೆಂದರೆ ದೆಹಲಿಯ ಯಾಂತ್ರಿಕ ಮತ್ತು ಒತ್ತಡದ ಈ ಜೀವನದಲ್ಲಿ ಎಷ್ಟೇ ಪ್ರಾಮಾಣಿಕ ಪ್ರಯತ್ನ ಮಾಡಿದರೂ ಅದನ್ನು ಮೆಯಿನ್‌ಟೆಯಿನ್ ಮಾಡಲು ಆಗುತ್ತಿಲ್ಲ.

ಹಾವೇರಿ ಜಿಲ್ಲೆಯ ರಾಣೀಬೆನ್ನೂರಿನಲ್ಲಿ ಜನಿಸಿ, ಪ್ರಾಥಮಿಕ ಮತ್ತು ಪ್ರೌಢ ವಿದ್ಯಾಭ್ಯಾಸ ಅಲ್ಲಿಯೇ ಮುಗಿಸಿ, ಭಾರತೀಯ ಅಂಚೆ ಮತ್ತು ತಂತಿ ವಿಭಾಗದಲ್ಲಿ ಸೇವೆ ಪ್ರಾರಂಭಿಸಿದ ಶ್ರೀಯುತರು ಭಾರತದ ದೇಶ ಸೇವೆಯಲ್ಲಿ ತೊಡಗುವ ನಿಟ್ಟಿನಲ್ಲಿ ಸೇನೆಯನ್ನು ಸೇರಿದರು. ಸುಮಾರು ವರ್ಷಗಳ ದೇಶ ಸೇವೆಯನ್ನು ಮಾಡಿದ ಕುರಂದವಾಡರು 1971ರ ಭಾರತ–ಪಾಕ್ ಯುದ್ಧದಲ್ಲಿಯೂ ಭಾಗವಹಿಸಿದ್ದಲ್ಲದೆ, ದೇಶಸೇವೆಯ ಜೊತೆಗೆ ಈಶ ಸೇವೆಯೂ ಕೂಡ ತಾನಾಗಿಯೇ ಒದಗಿ ಬಂದಿತ್ತು. ಸುಮಾರು ಆರು ವರ್ಷಗಳು ಜೋಷಿಮಠನಲ್ಲಿ ಇರುವಾಗ ಶ್ರೀ ಬದರಿ ನಾರಾಯಣನ ಓಪನಿಂಗ್ ಮತ್ತು ಕ್ಲೋಸಿಂಗ್ ದರ್ಶನದ ಸೌಭಾಗ್ಯ ಅವರದ್ದಾಗಿತ್ತು.

ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಾಲೆಯ ರಾಜಕೀಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲದೇ ದೆಹಲಿಯ ಮಧ್ವ ಸಂಘದ ಆಧ್ಯಾತ್ಮಕ ಚಟುವಟಿಕೆಗಳಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ದೆಹಲಿ ಕರ್ನಾಟಕ ಸಂಘದಲ್ಲಿ ರಾಜಕೀಯ ಮಾಡ ಕಲಿತವರಾದರೂ ದಿ. ಡಾ. ಸರೋಜಿನಿ ಮಹಿಷಿಯವರ ಪರವಾಗಿ ನಿಂತಿದ್ದರೂ ಕೂಡಾ, ದೆಹಲಿಯ ಕನ್ನಡಿಗರ ಇನ್ನೊಬ್ಬ ಧೀಮಂತ ಧುರೀಣ ಹಾಗೂ ನಾಯಕ ದಿ. ಶ್ರೀ ಕೆ.ಆರ್. ನಾಗರಾಜರ ರಾಜಕೀಯ ಅನುಯಾಯಿಗಳಾದರು ಎಂದರೆ ತಪ್ಪಿಲ್ಲ.

ದೇಶ ಮತ್ತು ಈಶ ಸೇವೆಯ ಜೊತೆಗೆ ಕನ್ನಡದ ಸಾಹಿತ್ಯ, ಸಂಸ್ಕೃತಿ, ರಂಗಭೂಮಿಯಲ್ಲಿ ಸಕ್ರಿಯವಾಗಿದ್ದ ಕುರಂದವಾಡರು "ಗೃಹಲಕ್ಷ್ಮಿ" ಮತ್ತು "ನಾನು–ನೀನು" ಎರಡು ಕವನ ಸಂಕಲನಗಳನ್ನು ಬರೆದಿದ್ದಾರೆ. ಹಲವಾರು ಕನ್ನಡ ಪತ್ರಿಕೆಗಳಲ್ಲಿ ಹಾಗೂ ಸಂಘದ ಮುಖಪತ್ರಿಕೆ ಅಭಿಮತದಲ್ಲಿ ಕೂಡಾ ಲೇಖನಗಳನ್ನು ಬರೆದಿದ್ದ ಶ್ರೀಯುತರು ಸುಮಾರು 25ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಲ್ಲದೇ ಕೆಲವೊಂದು ನಾಟಕಗಳನ್ನೂ ನಿರ್ದೇಶಿಸಿದ್ದಾರೆ.

ದೇಶ ಸೇವೆಯ ಬಗ್ಗೆ "ಸೈನಿಕ" ಎಂಬ ಚಿತ್ರದಲ್ಲಿ, ಕಾರ್ಗಿಲ್ ವಾರ್ ಕಮಾಂಡರ್ ಆಗಿಯೂ ಚಿತ್ರರಂಗಕ್ಕೆ ತಮ್ಮ ಅಳಿಲು ಸೇವೆ ಸಲ್ಲಿಸಿದ್ದಾರೆ.

ಹೊರನಾಡ ಕನ್ನಡಿಗರ ಸ್ವಾಭಿಮಾನ ಹೆಚ್ಚಿಸುವ ಹಾಗೂ ರಾಜಧಾನಿಯಲ್ಲಿ ಕನ್ನಡದ ಚೈತನ್ಯವನ್ನು ಬತ್ತಿ ಹೋಗದಂತೆ ನೋಡಿಕೊಳ್ಳುತ್ತಿರುವ ದೆಹಲಿ ಕರ್ನಾಟಕ ಸಂಘ "ನಾನು–ನೀನು ಕವನ ಸಂಕಲನ ಪ್ರಕಾಶಿಸಿದೆ/ಪ್ರಕಟಿಸಿದೆ.

ಭಾರತೀಯ ಸೇನಾಪಡೆಯಲ್ಲಿ ಸುದೀರ್ಘವಾಗಿ ಸೇವೆ ಸಲ್ಲಿಸಿದ ಶ್ರೀ ಸುಧಾಕರ ಕುರಂದವಾಡರು, ಕಾಶ್ಮೀರ, ಬಾರಾಮುಲ್ಲಾ, ಕುಪವಾರಾ ಮೊದಲಾದ ಅಪಾಯಕಾರಿ ಪ್ರದೇಶಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ದೇಶ ಸೇವೆ, ಈಶ ಸೇವೆ ಹಾಗೂ ಕನ್ನಡ ಸೇವೆಯನ್ನು ಮಾಡಿದ ಶ್ರೀ ಕುರಂದವಾಡರು ಇನ್ನು ಕೇವಲ ನೆನಪಾಗಿ ಉಳಿಯುವರು, ಅವರಿಗೆ ನನ್ನ ಗೌರವಪೂರ್ಣ ನಮನಗಳು.

ತಾರುಣ್ಯದ ಹಗಲು ಕನಸಿನ ಹೊಸ ಹಾದಿಯಲ್ಲಿ ಉತ್ಸಾಹದಿಂದ ಹೆಜ್ಜೆ ಹಾಕುತ್ತಾ ಸಾಗಿದ ಶ್ರೀ ಕುರಂದವಾಡರು, ತಮ್ಮ ಬಾಳಿನ ಸಿಹಿ–ಕಹಿಗಳನ್ನು, ನಗೆ–ಬಗೆಗಳನ್ನು, ಚೆಲುವು–ಒಲವುಗಳನ್ನು ತಮ್ಮದೇ ಆದ ಒಂದು ಭಾವ ಲಹರಿಯಲ್ಲಿ ವ್ಯಕ್ತಪಡಿಸಿದ ಶ್ರೀಯುತರು.

ದಿ. ಕುರಂದವಾಡ ಹಾಗೂ ದಿ. ಮುಧೋಳ ಅವರು ಯಾವ ಮೌಲ್ಯಗಳನ್ನು ಬದುಕಿನಲ್ಲಿ ಪಾಲಿಸಿಕೊಂಡು ಬಂದರೋ, ಮುಖ್ಯವಾಗಿ ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿ ಇವುಗಳ ಬಗ್ಗೆ ಅವರಿಬ್ಬರಿಗೂ ಇದ್ದ ತಿಳುವಳಿಕೆ ಮತ್ತು ಆ ತಲೆಮಾರು ಯಾವ ಮೌಲ್ಯಗಳನ್ನು ಇಟ್ಟುಕೊಂಡು ಬದುಕಿತೋ ನಮ್ಮ ತಲೆಮಾರಿನಲ್ಲಿ ಕಡಿಮೆ ಆಗಿರುವುದು ತುಂಬಾ ವಿಷಾದನೀಯ.

***ಸಂಜೀವ ದೇಶಪಾಂಡೆ***


**Statement of Ownership and other Particulars about**
**Delhi Karnataka Sangha's ABHIMATA**
**FORM-IV (See Rule 8)**

| | | |
|---|---|---|
| **Place of Publication** | : | Delhi Karnataka Sangha, New Delhi |
| **Periodicity of Pub** | : | Monthly |
| **Printers Name** | : | M/s Saujanya Printing Press, B-303, Okhla Industrial Area, Phase-I, New Delhi-110020 |
| **Publishers Name** | : | R. Renukumar |
| **Nationality** | : | Indian |
| **Address** | : | Delhi Karnataka Sangha Rao Tularam Marg, Sector-12, R.K. Puram, New Delhi - 110022 |
| **Editor's Name** | : | Chandrashekara N.P. |
| **Nationality** | : | Indian |
| **Address** | : | As Above |
| **Name & Address** of Individual who own the News Paper | : | Delhi Karnataka Sangha Rao Tularam Marg, Sector-12 R.K. Puram, New Delhi- 110022 |

I, **R. Renukumar,** hereby declare that the particulars given above are true to the best of my knowledge and belief.

**09.04.2022** **Sd\-**
**New Delhi** **Publisher**



ವಿಶ್ವಪ್ರಸಿದ್ಧ ಪಂಚಮುಖಿ ಆಂಜನೇಯ ಮೂರ್ತಿಯನ್ನು ಕುಣಿಗಲ್ ಬಿದನಗೆರೆಯಲ್ಲಿ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಸಿ.ಎಂ. ನಾಗರಾಜ, ಅನೇಕ ಗಣ್ಯಾತಿ ಗಣ್ಯರು ಹಾಗೂ ಪರಮಪೂಜ್ಯರು, ಗುರುಹಿರಿಯರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಕಾರ್ಯಕ್ರಮ ಯಶಸ್ವಿಗೆ ಕಾರಣಕರ್ತರಾದ ಶ್ರೀ ಸಿ.ಎಂ. ನಾಗರಾಜ ಅವರನ್ನು ಅಭಿನಂದಿಸಲಾಯಿತು.



## ಅಭಿಮತ ಓದುಗರ ಅನಿಸಿಕೆ

ಅಭಿಮತ ತುಂಬಾ ಚೆನ್ನಾಗಿದೆ. ಕಾರ್ಯಕ್ರಮದ ವಿವರಣೆ / ವರದಿ ಆಕರ್ಷಕವಾಗಿದ್ದು ನನ್ನ ಹಳೆಯ ನೆನಪುಗಳು ಮರುಕಳಿಸುತ್ತಿವೆ. ಶ್ರೀಮತಿ ರಾಧಾ ಕೌಜಲಗಿ ಅವರಿಗೆ ಹೃತ್ಪೂರ್ವಕ ವಂದನೆಗಳು.

***ಶಂಕರ ಗಾಯತ್ರಿ,*** ಬೆಂಗಳೂರು

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ ಬಹುವರ್ಣದ ಸುಸಜ್ಜಿತ ಮುದ್ರಣಾಲಯ ಸೌಜನ್ಯ ಪ್ರಿಂಟಿಂಗ್ ಮತ್ತು ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್ ಇಲ್ಲಿ ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡಲಾಗುವುದು. ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು ಬೈಂಡಿಂಗ್ ಕೆಲಸಗಳಿಗಾಗಿ ದಯವಿಟ್ಟು ಸಂಪರ್ಕಿಸಿ

**SAUJANYA**
**PRINTING PRESS**
A HOUSE OF QUALITY PRINTING
Office :
B-303, Okhla Industrial Area
Phase-I, New Delhi – 110 020
Ph : 40520770
M : 9811104398, 9811604398

Delhi Karnataka Sangha Abhimata
May-2022, Vol. No.32, Issue No. 8, Price Rs.1/-
RNI Regn. No. 53405/91, DL-SW-01/4016/22-24
Date of Publication : May 8th / 9th, Posting Date : 10th / 11th, Total Pages-20, Monthly-Language Kannada
Printed & Published by R. Renukumar, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Chandrashekara N.P













